ಜನವರಿ 19, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1968
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ತುಚ್ಛವಾಗಿ ಬೈದಳೆಂದು ತಂಗಿ ಕುತ್ತಿಗೆಗೆ

# ಭೀಕರವಾಗಿ ಚುಚ್ಚಿ ಚುಚ್ಚಿ ಕೊಂದ ಅಣ್ಣ!







## ಜೆಡಿಎಸ್ ಮುಖಂಡ ಗೋಲ್ಡ್ ವೆಂಕಟೇಶ್‌ನನ್ನು ಬರ್ಬರವಾಗಿ ಕೊಂದ ದುಷ್ಕರ್ಮಿಗಳು!

## ಕೈ ನಾಯಕರ ಒಳಜಗಳಕ್ಕೆ ವಿರಾಮ ಯಾವಾಗ?



## ಮಹಿಳೆಯ ಕೊಂದು ಮೈಮೇಲಿದ್ದ ಒಡವೆ ದೋಚಿದ ಪಾಪಿ!

ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಆರಂಭದಿಂದಲೂ ವಿವಾದ, ಹಗರಣ, ಬಣಬಡಿದಾಟ, ಸಿಎಂ ಕುರ್ಚಿ ಹಸ್ತಾಂತರದ ಕಿತ್ತಾಟದ ಸುಳಿಯಲ್ಲಿ ಸಿಲುಕಿ ಕುಂಟುತ್ತಾ ಸಾಗುತ್ತಿದ್ದು, ಸದ್ಯ ಹೈಕಮಾಂಡ್ ಮಾತಿಗೂ ರಾಜ್ಯ ನಾಯಕರು ಸೊಪ್ಪು ಹಾಕದೆ ತಾವು ನಡೆದದ್ದೇ ಹಾದಿ ಎಂಬಂತೆ ವರ್ತಿಸುತ್ತಿರುವುದು ರಾಜ್ಯ ರಾಜಕೀಯದಲ್ಲಿ ಎದ್ದು ಕಾಣಿಸುತ್ತಿದೆ. ಹಿರಿಯ ನಾಯಕರು ಒಬ್ಬರ ಮೇಲೆ ಒಬ್ಬರಂತೆ ಸಿಎಂ ಕುರ್ಚಿ ಮೇಲಿನ ಬಯಕೆಯನ್ನು ವ್ಯಕ್ತಪಡಿಸುತ್ತಿರುವುದನ್ನು ನೋಡಿದರೆ ಬಡಿದಾಟಗಳಿಗೆ ವಿರಾಮ ಬೀಳುವ ಯಾವ ಲಕ್ಷಣಗಳು ಕಾಣಿಸುತ್ತಿಲ್ಲ.



# ಕೈನಾಯಕರ ಒಳ ಜಗಳಕ್ಕೆ ವಿರಾಮ ಯಾವಾಗ?

✍ ಬಿ.ಎಂ. ಲವಕುಮಾರ್

ಇದೆಲ್ಲದರ ಪರಿಣಾಮವನ್ನು ಮತ ಹಾಕಿ ಸರ್ಕಾರವನ್ನು ಅಧಿಕಾರ ತಂದಿದಕ್ಕೆ ಮತದಾರರು ಹಣೆ ಚಚ್ಚಿಕೊಳ್ಳ ಬೇಕಾಗಿದೆ.

ಬಿಜೆಪಿ ವಿರುದ್ಧ ಪರ್ಸೆಂಟೇಜ್ ಆರೋಪ ಮಾಡಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷದೊಳಗೆ ನಡೆಯು



ತ್ತಿರುವ ಬಡಿದಾಟಗಳನ್ನು ಹೈಕಮಾಂಡ್ ಶಮನ ಮಾಡುತ್ತದೆ ಎಂದು ನಂಬಿದ್ದರಾದರೂ ಇದೀಗ ಹೈಕಮಾಂಡ್ ನಾಯಕರ ಮಾತನ್ನು ಕೇಳಿ ಬಾಯಿಮುಚ್ಚಿ ಕುಳಿತುಕೊಳ್ಳುವಂತಹ ಯಾವ ಸನ್ನಿವೇಶಗಳು ಕಂಡು ಬರುತ್ತಿಲ್ಲ. ಹಿಂದುಳಿದ ನಾಯಕರು ಡಿನ್ನರ್ ಪಾರ್ಟಿ ಮೂಲಕ ನಾಯಕರನ್ನೆಲ್ಲ ಒಗ್ಗೂಡಿಸಿ ಚರ್ಚೆ ನಡೆಸಿ ಹೊಸದೊಂದು ತೀರ್ಮಾನಕ್ಕೆ ಬರಲು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಡಿನ್ನರ್ ಪಾರ್ಟಿ ಏರ್ಪಡಿಸಿದ್ದರು. ಆದರೆ ಅದಕ್ಕೆ ಹೈಕಮಾಂಡ್ ಬ್ರೇಕ್ ಹಾಕಿತ್ತು. ಆದರೆ ಅದರ ಹಿಂದೆ ಇದ್ದಿದ್ದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ.

ಹೈಕಮಾಂಡ್ ಮಟ್ಟದಲ್ಲಿ ಸಿಎಂ ಅಧಿಕಾರ ಹಸ್ತಾಂತರದ ಒಪ್ಪಂದ ನಡೆದಿದೆ ಎಂಬ ಮಾಹಿತಿಯನ್ನು ರಾಷ್ಟ್ರೀಯ ಚಾನೆಲ್‌ಗಳ ಮೂಲಕ ಯಾವಾಗ ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೊರ ಹಾಕಿ ಆ ಮಾತುಗಳು ವೇಗ ಪಡೆದುಕೊಂಡು ಚರ್ಚೆಗಳು ಆರಂಭವಾದವೋ ಸಿಎಂ ಸಿದ್ದರಾಮಯ್ಯ ಬಣದ ಹಿಂದುಳಿದ ನಾಯಕರು ಅಲರ್ಟ್ ಆಗಿಬಿಟ್ಟರು. ಒಳಗೊಳಗೆ ನಾಯಕರು ಉಪಹಾರದದ ನೆಪದಲ್ಲಿ ಸಭೆ ಸೇರಲು ಆರಂಭಿಸಿದ್ದರು. ಅಷ್ಟೇ ಅಲ್ಲದೆ ಸಿದ್ದರಾಮಯ್ಯನವರೇ ಪೂರ್ಣಾವಧಿಯ ಸಿಎಂ ಎಂದು ಘೋಷಣೆ ಮಾಡಲು ಶುರು ಮಾಡಿದರು.

ಸಚಿವರಾದ ಕೆ.ಎನ್. ರಾಜಣ್ಣ, ಹೆಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ ಸೇರಿದಂತೆ ಹಲವು ನಾಯಕರು ಸಿದ್ದರಾಮಯ್ಯ ಅವರ ಬೆನ್ನಿಗೆ ನಿಂತರು. ಅಷ್ಟೇ ಅಲ್ಲದೆ ಇವರಿಗೆ ಇನ್ನೊಂದಷ್ಟು ನಾಯಕರು ಕೈಜೋಡಿಸಿ ಸಿದ್ದರಾಮಯ್ಯ ಅವರ ಪರವಾಗಿ ಹಿಂದುಳಿದ ವರ್ಗಗಳ ಸಮಾವೇಶಕ್ಕೂ ಮುಂದಾದರು. ಪಕ್ಷದ ಬ್ಯಾನರ್ ಹೊರತುಪಡಿಸಿ ಸಮಾವೇಶ ನಡೆಸಿ ಆ ಮೂಲಕ ಸಿದ್ದರಾಮಯ್ಯ ಬಣದವರು ಹಾಸನದಲ್ಲಿ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದರು. ಆದರೆ ಅದಕ್ಕೆ ಹೈಮಾಂಡ್ ಮೂಲಕ ಬ್ರೇಕ್ ಹಾಕಿ ಅದನ್ನು ಪಕ್ಷದ ಕಾರ್ಯಕ್ರಮವನ್ನಾಗಿ ಮಾಡುವಲ್ಲಿ ಡಿ.ಕೆ. ಶಿವಕುಮಾರ್ ಯಶಸ್ವಿಯಾದರು.



ಹಾಸನದಲ್ಲಿ ನಿಂತು ದೇವೇಗೌಡರು ಮತ್ತು ಅವರ ಕುಟುಂಬದ ವಿರುದ್ಧ ಗರ್ಜಿಸಿದನ್ನು ಬಿಟ್ಟರೆ ಅದರಿಂದ ದೊಡ್ಡಮಟ್ಟದ ಲಾಭವಂತು ಆಗಿಲ್ಲ.

ಇದಾದ ನಂತರ ಬೆಳಗಾವಿಯಲ್ಲಿ 100ನೇ ಕಾಂಗ್ರೆಸ್ ಅಧಿವೇಶನವನ್ನು ನಡೆಸಲು ಸಿದ್ಧತೆ ನಡೆಸಲಾಗಿತ್ತು. ಈ ವೇಳೆ ಸತೀಶ್ ಜಾರಕಿ ಹೊಳಿ ಸೇರಿದಂತೆ ಅವರ ಹಿತೈಷಿಗಳಿಗೆ ಯಾವುದೇ ಜವಾಬ್ದಾರಿ ನೀಡದೆ ಎಲ್ಲವನ್ನು ತಾವೇ ಮಾಡುವ ಮುಖಾಂತರ ಹೈ ಕಮಾಂಡ್ ಮುಂದೆ ಮಿಂಚಿದ್ದರು. ಆದರೆ ಈ ಕಾರ್ಯಕ್ರಮ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನಿಧನದ ಕಾರಣದಿಂದಾಗಿ ರದ್ದಾಗಿತ್ತು. ಆದರೆ ತಮ್ಮ ಕಾರ್ಯಕ್ಷೇತ್ರದಲ್ಲಿ ತಮ್ಮನ್ನೇ ಬದಿಗೆ ತಳ್ಳಿದ ಡಿಕೆಶಿ ವಿರುದ್ಧ ಜಾರಕಿಹೊಳಿ ಕುಟುಂಬಕ್ಕೆ ಈ ವಿಚಾರದಲ್ಲಿ ಅಸಮಾಧಾನ ಇಲ್ಲದಿಲ್ಲ.

ರಾಜ್ಯದಲ್ಲಿ ಗ್ಯಾರಂಟಿ ಯೋಜನೆ ಪಕ್ಷದ ತೀರ್ಮಾನವೇ ಆಗಿದ್ದರೂ ಅದರ ಕ್ರೆಡಿಟ್ ಮುಖ್ಯಮಂತ್ರಿ ಆಗಿರುವವರಿಗೆ ಸಲ್ಲುತ್ತದೆ. ಅದನ್ನು ಹೊರಗೆ ಘೋಷಣೆ ಮಾಡುವಾಗಲೂ ಸಿಎಂ ಅವರ ಹೆಸರುಗಳನ್ನು ಹೇಳಲಾಗುತ್ತದೆ. ಚುನಾವಣೆ ಹಿನ್ನಲೆಯಲ್ಲಿ ದೆಹಲಿಯಲ್ಲಿ ಕರ್ನಾಟಕದಂತೆ ಗ್ಯಾರಂಟಿ ಯೋಜನೆಯನ್ನು ಘೋಷಣೆ ಮಾಡಲಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಚಾರವೇನೆಂದರೆ ಹೈಕಮಾಂಡ್ ಡಿ.ಕೆ. ಶಿವಕುಮಾರ್ ಪರ ಒಲವು ತೋರಿದೆ. ಇಲ್ಲದೆ ಹೋಗಿದ್ದರೆ ಸಿಎಂ ಸಿದ್ದರಾಮಯ್ಯ ಅವರನ್ನು ಕರೆಯಿಸಿ ಅವರಿಂದಲೇ ಘೋಷಣೆಯನ್ನು ಮಾಡಬಹುದಿತ್ತು. ಆದರೆ ಹೈಕಮಾಂಡ್ ಡಿ.ಕೆ.ಶಿವಕುಮಾರ್ ಮೂಲಕ ಘೋಷಣೆ ಮಾಡಿಸಿತ್ತು. ಆ ಮೂಲಕ ಡಿ.ಕೆ. ಶಿವಕುಮಾರ್ ರಾಷ್ಟ್ರಮಟ್ಟದಲ್ಲಿ ಗಮನಸೆಳೆದಿದ್ದರು.



ಕಾಂಗ್ರೆಸ್ ಒಳಗೆ ನಡೆಯುತ್ತಿರುವ ವಿದ್ಯಮಾನಗಳು ಅಸಮಾಧಾನಕ್ಕೆ ಕಾರಣವಾಗಿದೆ. ಡಿ.ಕೆ. ಶಿವಕುಮಾರ್ ಅವರ ನಡೆ ಹಿಂದುಳಿದ ವರ್ಗಗಳ ನಾಯಕರನ್ನು ರೊಚ್ಚಿಗೇಳುವಂತೆ ಮಾಡುತ್ತಿದೆ. ಇಲ್ಲಿ ಒಕ್ಕಲಿಗರು ಮತ್ತು ಹಿಂದುಳಿದ ವರ್ಗ ಹೀಗೆ ಈ ಎರಡು ವರ್ಗದ ಬಗ್ಗೆ ಮಾತ್ರ ಚರ್ಚೆಯಾಗುತ್ತಿದೆ. ಯಾವಾಗ ಡಿ.ಕೆ.ಶಿವಕುಮಾರ್ ಸಿಎಂ ಅಧಿಕಾರ ಹಸ್ತಾಂತರದ ಬಗ್ಗೆ ಪ್ರಸ್ತಾಪಿಸಿದರೋ ತಕ್ಷಣವೇ ದಲಿತರಿಗೆ ಸಿಎಂ ಸ್ಥಾನ ಕೊಡಿ ಎಂಬ ಧ್ವನಿ ಕೇಳಿ ಬಂದಿದೆ. ದಲಿತರ ಬಗ್ಗೆ ಮಾರುದ್ದ ಮಾತನಾಡುವ ಕಾಂಗ್ರೆಸ್ ಇದುವರೆಗೆ ದಲಿತರಿಗೆ ಸಿಎಂ ಸ್ಥಾನ ನೀಡಿಲ್ಲ ಎಂಬ ಆರೋಪವಿದೆ. ಹೀಗಾಗಿ ಡಾ. ಜಿ. ಪರಮೇಶ್ವರ್ ಅವರಿಗೆ ನೀಡಿ ಎಂಬ ಮಾತುಗಳು ಕೇಳಿ ಬರುತ್ತಿವೆ.

2013ರ ಚುನಾವಣೆಯಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಾ.ಜಿ.ಪರಮೇಶ್ವರ್ ಅವರು ಸೋಲದೆ ಹೋಗಿದ್ದರೆ ಅವತ್ತು ಡಾ. ಜಿ. ಪರಮೇಶ್ವರ್ ಅವರೇ ಸಿಎಂ ಆಗಬೇಕಾಗಿತ್ತು. ಕಾಂಗ್ರೆಸ್ ಮಾಡಿಕೊಂಡು ಬಂದಿದ್ದ ಸಂಪ್ರದಾಯದಂತೆ ಕೆಪಿಸಿಸಿ ಅಧ್ಯಕ್ಷರಾದವರು ಸಿಎಂ ಸ್ಥಾನ ಅಲಂಕರಿಸಬೇಕಾಗಿತ್ತು. ಆದರೆ ಅವತ್ತಿನ ಸೋಲು ಪರಮೇಶ್ವರ್ ಸಿಎಂ ಆಗುವುದನ್ನು ತಪ್ಪಿಸಿತ್ತು. ಇವತ್ತು ಸಿಎಂ ಸ್ಥಾನ ಹಂಚಿಕೆ ಆಗುತ್ತೆ ಎನ್ನುವುದಾದರೆ ಪ್ರಯತ್ನಿಸುವುದರಲ್ಲಿ ತಪ್ಪೇನಿದೆ? ಹೀಗಾಗಿಯೇ ಪರಮೇಶ್ವರ್ ಕೂಡ ತಮ್ಮ ವ್ಯಾಪ್ತಿಯಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. ಡಿನ್ನರ್ ಪಾರ್ಟಿ ಮೂಲಕ ಹಿಂದುಳಿದ ನಾಯಕರನ್ನು ಸೇರಿಸುವ ಪ್ರಯತ್ನ ಮಾಡಿದ್ದರು. ಆದರೆ ಸಾಧ್ಯವಾಗಿರಲಿಲ್ಲ. ಆದರೆ ಮುಂದೆ ಏನು ಮಾಡುತ್ತಾರೆ ಎನ್ನುವುದು ಕುತೂಹಲಕಾರಿಯಾಗಿದೆ.

ಸದ್ಯ ಹೈಕಮಾಂಡ್ ಪ್ರತಿನಿಧಿಯಾಗಿ ಬಂದಿದ್ದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಅವರು ಈಗಾಗಲೇ ಸಭೆ ಮೇಲೆ ಸಭೆ ನಡೆಸಿ ಪಕ್ಷದೊಳಗಿನ ಬಿರುಕು ಮುಚ್ಚಿ ಪಕ್ಷದಲ್ಲಿ ಯಾವುದೇ



ಭಿನ್ನಾಭಿಪ್ರಾಯಗಳಿಲ್ಲ. ಬಿಜೆಪಿ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಆರೋಪ ಮಾಡುತ್ತಿದ್ದಾರೆ ಎಂದು ಬಿಜೆಪಿ ಕಡೆಗೆ ಬೊಟ್ಟು ಮಾಡಿ ತೋರಿಸಿದ್ದಾರೆ. ಬಿಜೆಪಿಯಲ್ಲಿ ಹಲವು ಬಣಗಳಿವೆ ಆದರೆ ಕಾಂಗ್ರೆಸ್‌ನಲ್ಲಿ ಅದ್ಯಾವುದೂ ಇಲ್ಲ ಎಂದು ಹೇಳಿ ಒಗ್ಗಟ್ಟಿನ ಮಂತ್ರವನ್ನು ಮಾಧ್ಯಮದವರ ಮುಂದೆ ಪ್ರದರ್ಶಿಸಿದ್ದಾರೆ.

ಇದೆಲ್ಲದರ ನಡುವೆ ಕಾಂಗ್ರೆಸ್ ಶಾಸಕಾಂಗ ಸಭೆ ಮಾತ್ರವಲ್ಲದೆ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರನ್ನು ಒಂದೆಡೆ ಕೂರಿಸಿಕೊಂಡು ಪ್ರತ್ಯೇಕ ಸಭೆಯನ್ನು ಕೂಡ ನಡೆಸಿದ್ದಾರೆ. ಸಿಎಂ ಬದಲಾವಣೆ ಬಗ್ಗೆ ಯಾರೂ ಬಾಯಿ ಬಿಡುವಂತಿಲ್ಲ ಎಚ್ಚರಿಕೆ ನೀಡಿದ್ದಾರೆ ಸಭೆಯಲ್ಲಿ,



ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ನೀಡಿದ ಹೇಳಿಕೆಯಿಂದ ಎಲ್ಲ ಗೊಂದಲ ಶುರುವಾಯ್ತು ಎಂದು ಸಿಎಂ ಸಿದ್ದರಾಮಯ್ಯ ಆರೋಪ ಮಾಡಿದರೆ, ಈ ವೇಳೆ ನಾನು ಹೇಳಲಿಲ್ಲ ಎಂದು ಡಿಸಿಎಂ ಶಿವಕುಮಾರ್ ಸ್ಪಷ್ಟನೆ ನೀಡಿದ್ದಾರೆ ಎನ್ನಲಾಗಿದೆ. ಇಲ್ಲಿಗೆ ಎಲ್ಲವೂ ಮುಗಿಯಿತು. ಕಾಂಗ್ರೆಸ್ ನಲ್ಲಿ ಇನ್ಯಾವ ಕಚ್ಚಾಟವಿಲ್ಲ ಎಂದುಕೊಳ್ಳುವಾಗಲೇ





☞ 12


ಕಚೇರಿಯಲ್ಲಿ ಡಿವೈಎಸ್ಪಿ ಕರ್ಮಕಾಂಡ

# ಕಚೇರಿಯಲ್ಲೇ ಮಹಿಳೆ ಜತೆ ರಾಸಲೀಲೆ ನಡೆಸಿದ್ದ ಡಿವೈಎಸ್ಪಿ ಪಿ. ರಾಮಚಂದ್ರ ಸಸ್ಪೆಂಡ್!


ಆರೋಪಿ ಮಧುಗಿರಿ ಡಿವೈಎಸ್ಪಿ ಎಸ್ಪಿಎ. ರಾಮಚಂದ್ರಪ್ಪ

✍ ಶಾಂತರಾಜು ಜಿ. ಕಲ್ಲಹಳ್ಳಿ

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಡಿವೈಎಸ್ಪಿ ರಾಮಚಂದ್ರಪ್ಪನ ಕರ್ಮಕಾಂಡ ಬೂದಿಮುಚ್ಚಿದ ಕೆಂಡದಂತೆ ಇದ್ದು ಇದೀಗ ಜ್ವಾಲಾಮುಖಿಯಂತೆ ಹೊರ ಚಿಮ್ಮುತ್ತಾ ತನ್ನ ಕಚ್ಚೆಹರುಕುತನದಿಂದ ಪೊಲೀಸರ ಅತಿಥಿಯಾಗಿರುವ ಕರ್ಮಕಾಂಡ ಬಟಾಬಯಲಾಗಿದೆ. ತುಮಕೂರು ಜಿಲ್ಲೆಯ ಮಧುಗಿರಿ ಪಟ್ಟಣದ ಡಿವೈಎಸ್ಪಿ ಕಚೇರಿಯಲ್ಲಿ ಜಮೀನು ವಿಚಾರಕ್ಕೆ ದೂರು ಕೊಡಲು ಬಂದ ಮಹಿಳೆಯೊಂದಿಗೆ ಡಿವೈಎಸ್ಪಿ ರಾಮಚಂದ್ರಪ್ಪ ರಾಸಲೀಲೆ ನಡೆಸಿದ ವಿಡಿಯೋ ವೈರಲ್ ಆಗಿದೆ. ಈ ಘಟನೆಯಿಂದಾಗಿ ಇಡೀ ಪೊಲೀಸ್ ಇಲಾಖೆಯೇ ತಲೆ ತಗ್ಗಿಸಿ ನಿಲ್ಲುವಂತಾಗಿದೆ. ನಮ್ಮ ರಾಜ್ಯದ ಗೃಹ ಸಚಿವರಾದ ಡಾ. ಜಿ. ಪರಮೇಶ್ವರರವರ ತವರು ಜಿಲ್ಲೆಯಲ್ಲಿಯೇ ನ್ಯಾಯ ಕೊಡಿಸಬೇಕಾದ ಪೊಲೀಸರು ಮಹಿಳೆಯರ ಭಕ್ಷಕರಾಗಿದ್ದಾರೆ. ಜಮೀನು ವಿಚಾರಕ್ಕೆ ದೂರು ಕೊಡಲು ಬಂದ ಮಹಿಳೆಯೊಂದಿಗೆ ಪೊಲೀಸ್ ಠಾಣೆಯಲ್ಲಿಯೇ ಈ ರೀತಿ ಲೈಂಗಿಕ ದೌರ್ಜನ್ಯ ಪ್ರಕರಣಗಳು ನಡೆಯುತ್ತಿದ್ದರೆ ಮುಂದೆ ರಕ್ಷಣೆಯೇ ಇಲ್ಲದಂತಾಗಿ ಸಾಮಾನ್ಯ ಜನರ ಗತಿ ಏನು ಎಂಬುದೇ ಚಿಂತೆಯಾಗಿ ಉಳಿದಿದೆ.


ಸಂತ್ರಸ್ತೆ ಮಹಿಳೆ ಮಾಧ್ಯಮದ ಜೊತೆ ಮಾತನಾಡುತ್ತಿರುವುದು



ಈ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿರುವುದು

ಇಡೀ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಮಹಿಳೆ, ಮಕ್ಕಳು ಸೇರಿದಂತೆ ರಾಜ್ಯದ ಜನತೆಯನ್ನು ಸುರಕ್ಷಿತವಾಗಿ ನೋಡಿಕೊಳ್ಳುವುದಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ ಗೃಹ ಸಚಿವ ಡಾ. ಜಿ. ಪರಮೇಶ್ವರರವರ ತವರು ಜಿಲ್ಲೆಯಲ್ಲಿ ಈ ಘಟನೆ ನಡೆದಿದೆ ಎಂಬುದು ಇನ್ನೂ ಅಸಹ್ಯಕರವಾಗಿದೆ. ಇಂತಹ ಅಧಿಕಾರಿಗಳು ಪೊಲೀಸ್ ಇಲಾಖೆಗೆ ಕೆಟ್ಟ ಹೆಸರು ತರುವವರಾಗಿದ್ದಾರೆ. ಈ ಘಟನೆ ತುಮಕೂರು ಜಿಲ್ಲೆಯ ಮಧುಗಿರಿ ಪಟ್ಟಣದ ಡಿವೈಎಸ್ಪಿ ಕಚೇರಿಯಲ್ಲಿ ನಡೆದಿದೆ.


ಜಿಲ್ಲಾ ಎಸ್ಪಿ ಅಶೋಕ್ ಕೆ.ವಿ.

ಪಾವಗಡ ಮೂಲದ ಮಹಿಳೆ ಜಮೀನು ವ್ಯಾಜ್ಯದ ಬಗ್ಗೆ ದೂರು ನೀಡಿದ್ದರು. ಈ ದೂರಿನ ಸಂಬಂಧ ಮಹಿಳೆಯೊಂದಿಗೆ ಮಾತುಕತೆ ನಡೆಸಬೇಕು. ಕೆಲವು ವಿಚಾರಣೆ ಮಾಡಬೇಕು ಎಂದು ಡಿವೈಎಸ್ಪಿ ತನ್ನ ಕಚೇರಿಗೆ ಕರೆಸಿಕೊಂಡು, ಕಚೇರಿಯಲ್ಲಿಯೇ ಆ ಮಹಿಳೆಯನ್ನು ಪುಸಲಾಯಿಸಿಕೊಂಡು ಡಿವೈಎಸ್ಪಿ ರಾಮಚಂದ್ರಪ್ಪ ತನ್ನ ಕಾಮತೃಷೆ ತೀರಿಸಿಕೊಳ್ಳಲು ಮುಂದಾಗಿದ್ದಾನೆ. ಆ ಮಹಿಳೆ ತನಗೆ ನ್ಯಾಯ ಸಿಗಬೇಕಾದರೆ ಇಂಥ ಕೆಲಸವನ್ನೆಲ್ಲ ಮಾಡಬೇಕು ಎಂದು ಮಹಿಳೆ ತಿಳಿದುಕೊಂಡು ಡಿವೈಎಸ್ಪಿಯ ಕಾಮತೃಷೆ ತೀರಿಸಲು ಮುಂದಾಗಿದ್ದಾಳೆ. ಇದಾದ ನಂತರ ಡಿವೈಎಸ್ಪಿ ಕಚೇರಿಯ ಶೌಚಾಲಯದ ಬಳಿ ಕರೆದುಕೊಂಡು ಹೋದ ರಾಮಚಂದ್ರಪ್ಪ ಮಹಿಳೆಯೊಂದಿಗೆ ರಾಸಲೀಲೆ ಆರಂಭಿಸಿದ್ದಾನೆ. ಆದರೆ ಈ ಡಿವೈಎಸ್ಪಿ ರಾಮಚಂದ್ರಪ್ಪನ ರಾಸಲೀಲೆಯ ದೃಶ್ಯ ಯಾರೋ ಕಿಟಕಿಯಿಂದ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. ಅಲ್ಲಿ ಮಹಿಳೆಯೊಂದಿಗೆ ಬಲವಂತವಾಗಿ ನಡೆದುಕೊಳ್ಳುತ್ತಿದ್ದ ದೃಶ್ಯಗಳು ಸೆರೆ ಸಿಕ್ಕಿವೆ. ಇದೀಗ ಈ ರಾಸಲೀಲೆಯ ವಿಡಿಯೋ ದೃಶ್ಯಾವಳಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ಘಟನೆಯಿಂದ ಇಡೀ ಪೊಲೀಸ್ ಇಲಾಖೆಯೇ ತಲೆತಗ್ಗಿಸುವಂತಾಗಿದೆ.

ದೌರ್ಜನ್ಯಕ್ಕೆ ಒಳಗಾಗಿ ಠಾಣೆಯಲ್ಲಿ ಸಂವಿಧಾನ ಬದ್ಧವಾದ ನ್ಯಾಯ ಸಿಗುತ್ತೆ ಎಂಬ ಭರವಸೆಯಿಂದ ಬಂದ ನೊಂದ ಮಹಿಳೆಯನ್ನು ಮಧುಗಿರಿ ಪೊಲೀಸ್ ಠಾಣೆಯಲ್ಲಿ ಕಾಮದ ದಾಹ ತೀರಿಸಿಕೊಳ್ಳಲು ಮುಂದಾಗಿರುವ ಅವಿವೇಕಿ ಡಿವೈಎಸ್ಪಿ ರಾಮಚಂದ್ರಪ್ಪನಿಗೆ ಸರಿಯಾದ ಶಿಕ್ಷೆಯಾಗಬೇಕಿದೆ.

ಕಾಮುಕರಿಂದ ಮಹಿಳೆಯರಿಗೆ ಈಗಾಗಲೇ ದೇಶದಲ್ಲಿ ರಕ್ಷಣೆ ಇಲ್ಲದಂತಾಗಿದೆ. ಆರಕ್ಷಕರೇ ವಿಕೃತ ಕಾಮಿಗಳಾದರೆ ಹೇಗೆ? ಇಂತಹ ಅಯೋಗ್ಯ ಅಧಿಕಾರಿಗಳ ಬಂಧನ ಯಾವಾಗ ಮಾನ್ಯ ಗೃಹ ಮಂತ್ರಿಗಳೇ, ಮಾನ್ಯ ಸಹಕಾರ ಸಚಿವರೇ...? ಅಮಾಯಕರ ಮೇಲೆ ಹೋರಾಟಗಾರರ ಮೇಲೆ, ಅದೇ ರೀತಿ ರೈತ ಪರರು ಮತ್ತು ಪ್ರಗತಿಪರರ ಮೇಲೆ ಸುಳ್ಳು ಅಧಿಕಾರ ಪ್ರಯೋಗ ಮಾಡುವ ಪೊಲೀಸ್ ಅಧಿಕಾರಿಗಳೇ... ಈಗ ಈ ಕಾಮುಕ ಡಿವೈಎಸ್ಪಿ ರಾಮಚಂದ್ರಪ್ಪನನ್ನ ಏನ್ ಮಾಡ್ತಿರಾ...? ರಕ್ಷಣೆ ಮಾಡ್ತಿರಾ...? ಅಥವಾ ಸಂವಿಧಾನಬದ್ಧ ಶಿಕ್ಷೆ ಕೊಡ್ತಿರಾ...? ಮಾನವ ಹಕ್ಕುಗಳ ಆಯೋಗ, ಮಹಿಳಾ ಆಯೋಗ, ಪೊಲೀಸ್ ದೂರು ಪ್ರಾಧಿಕಾರ ಇನ್ನು ಏನು ಮಾಡುತ್ತಿದೆ...?

ಗೌರವಾನ್ವಿತ ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈ ಪ್ರಕರಣಕ್ಕೆ ಕ್ರಮ ಕೈಗೊಳ್ಳದೇ ಹೋದರೆ, ನ್ಯಾಯಾಲಯದ ಮೊರೆ ಹೋಗಿ ಆದ್ರು ಕಾಮುಕ ಡಿವೈಎಸ್ಪಿ ರಾಮಚಂದ್ರಪ್ಪನಿಗೆ ಸಂವಿಧಾನ ಬದ್ಧ ಶಿಕ್ಷೆ ಆಗಲೇಬೇಕು ಎಂಬುದು ಮಧುಗಿರಿಯ ನೊಂದ ನಾಗರಿಕರ ಕೂಗು ಕರ್ನಾಟಕ ಸರ್ಕಾರಕ್ಕೆ ಕೇಳಿಸುತ್ತಿಲ್ಲವೇ?

**ರಕ್ಷಣೆ ಕೊಡಬೇಕಾದ ಪೊಲೀಸರೇ ಲೈಂಗಿಕ ದೌರ್ಜನ್ಯ ನಡೆಸಿದರೆ ಪ್ರಜಾಪ್ರಭುತ್ವದಲ್ಲಿ ಜನಸಾಮಾನ್ಯರಿಗೆ ರಕ್ಷಣೆ ಎಲ್ಲಿ? ರಕ್ಷಣೆ ಕೊಡಬೇಕಾದವರೇ ನರಭಕ್ಷಕರಾಗಿ ಮಹಿಳೆಯರೊಂದಿಗೆ ರಾಸಲೀಲೆ ನಡೆಸುವ ಪ್ರಕರಣಗಳಿಗೆ ಸಿಲುಕಿ ಪೊಲೀಸ್ ಅಧಿಕಾರಿಗಳು ಸಸ್ಪೆಂಡ್ ಆಗುತ್ತಿರುವುದು ಹೊಸದೇನು ಇಲ್ಲ. ಬೇಲಿಯೇ ಎದ್ದು ಹೊಲ ಮೇಯ್ದರೆ ಮುಂದೆ ಗತಿಯೇನು...?**


ಗೃಹ ಸಚಿವ ಡಾ. ಜಿ. ಪರಮೇಶ್ವರ್


ಸಚಿವ ಕೆ.ಎನ್. ರಾಜಣ್ಣ

ಏನೇ ಆದರೂ ಕೂಡಲೇ ಎಚ್ಚೆತ್ತ ಪೊಲೀಸರು ಇವನನ್ನು ಬಂಧಿಸಿ, ಇದೀಗ ಮಧುಗಿರಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಡಿವೈಎಸ್ಪಿ ರಾಮಚಂದ್ರಪ್ಪನನ್ನ ಹಾಜರುಪಡಿಸಿದ್ದಾರೆ. ನ್ಯಾಯಾಲಯವು ಈ ಪ್ರಕರಣಕ್ಕೆ 14 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿದೆ. ಸದ್ಯಕ್ಕೆ ಡಿವೈಎಸ್ಪಿ ರಾಮಚಂದ್ರಪ್ಪನನ್ನ ಮಧುಗಿರಿ ಜೈಲಿನಲ್ಲಿರಿಸಿಕೊಂಡು ನಂತರ ತುಮಕೂರು ಜಿಲ್ಲಾ ಕಾರಾಗೃಹದಲ್ಲಿ ಮುದ್ದೆ ಮುರಿಸಲಿದ್ದಾರೆ.

ಏನೇ ಆದರೂ ಗೃಹ ಸಚಿವರಾದ ಡಾ. ಜಿ. ಪರಮೇಶ್ವರರವರ ತವರು ಜಿಲ್ಲೆಯಲ್ಲಿಯೇ ಈ ಕೃತ್ಯ ನಡೆದಿರುವುದು ಇಡೀ ಪೊಲೀಸ್ ಇಲಾಖೆಯೇ ತಲೆ ತಗ್ಗಿಸುವಂತೆ ಮಾಡಿದೆ. ಅದರಲ್ಲೂ ಸಹಕಾರ ಸಚಿವ ಕೆ.ಎನ್. ರಾಜಣ್ಣ ಪ್ರತಿನಿಧಿಸುವ ಕ್ಷೇತ್ರ ಮಧುಗಿರಿಯ ಪಟ್ಟಣದ ಕಚೇರಿಯ ಉಪವಿಭಾಗದ ಡಿವೈಎಸ್ಪಿ ರಾಮಚಂದ್ರಪ್ಪನ ಈ ವರ್ತನೆ ಇಲಾಖೆಯ ಘನತೆಗೆ ಕಪ್ಪುಮಸಿ ಬಳಿದಂತಾಗಿದೆ. ಆದ್ದರಿಂದ ತಕ್ಷಣವೇ ರಾಮಚಂದ್ರಪ್ಪನ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಇಂದು ಇಂತಹ ವಿಕೃತ ಮನಸ್ಥಿತಿ ಇರುವವರಿಗೆ ಬುದ್ಧಿ ಕಲಿಸುವಂತಿರಬೇಕು ಎಂದು ಸ್ಥಳೀಯ ಸಾಮಾಜಿಕ ಹೋರಾಟಗಾರರ ಒತ್ತಾಯಗಳಾಗಿವೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೋವನ್ನು ನಾನು ವೀಕ್ಷಿಸಿದ್ದೇನೆ. ಅದರಲ್ಲಿ ಮಧುಗಿರಿ ಉಪವಿಭಾಗದ ಡಿವೈಎಸ್ಪಿ ರಾಮಚಂದ್ರಪ್ಪ ಅಕ್ಷೇಪಾರ್ಹವಾಗಿ ವರ್ತಿಸುತ್ತಿರುವುದು ಕಂಡು ಬಂದಿದೆ. ಆ ಮಹಿಳಾ ಸಂತ್ರಸ್ತೆಯನ್ನು ಹುಡುಕುತ್ತಿದ್ದೇವೆ. ತನಿಖೆ ನಡೆಸಿ ಈ ವ್ಯಕ್ತಿಯ ಮೇಲೆ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಇದನ್ನು ಈಗಾಗಲೇ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಡಿವೈಎಸ್ಪಿ ರಾಮಚಂದ್ರಪ್ಪನನ್ನು ಈಗಾಗಲೇ ಬಂದಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಜತೆಗೆ ಅಮಾನತುಗೊಳಿಸಲಾಗಿದೆ ಎಂದು ತುಮಕೂರು ಜಿಲ್ಲಾ ಎಸ್ಪಿ ಕೆ.ವಿ. ಅಶೋಕ್ ಪ್ರತಿಕ್ರಿಯಿಸಿದ್ದಾರೆ. ☯


ಕಾಮುಕ ಡಿವೈಎಸ್ಪಿ ವಿಚಾರಣೆ ನಡೆಯುತ್ತಿರುವುದು



ಕಾಮುಕ ಡಿವೈಎಸ್ಪಿನಾ ತಪಾಸಣೆ ನಡೆಸುತ್ತಿರುವುದು

# ಕುರಿಗಾಯಿ ಮಹಿಳೆಯನ್ನು ಕೊಂದು ಮೈಮೇಲಿನ ಒಡವೆ ದೋಚಿದ ಪಾಪಿ!


ಸುಶೀಲಮ್ಮ ಬದುಕಿದ್ದಾಗ

**ಕುರಿಗಾಯಿ ಮಹಿಳೆಯೊಬ್ಬಳು ಅರಣ್ಯ ಪ್ರದೇಶದಲ್ಲಿ ಕುರಿ ಮೇಯಿಸಲು ಹೋಗಿದ್ದಾಗ ಮೃತಪಟ್ಟಿದ್ದು, ಮನೆಯವರು ಸಹಜ ಸಾವೆಂದು ಅಂತ್ಯಸಂಸ್ಕಾರಕ್ಕೆ ಮುಂದಾದಾಗ, ಗ್ರಾಮಸ್ಥರು ಸಲಹೆ ನೀಡಿದ ಮೇರೆಗೆ ಪೊಲೀಸರಿಗೆ ದೂರು ನೀಡಿ ಮರಣೋತ್ತರ ಪರೀಕ್ಷೆ ನಡೆಸಲಾಗಿ ಕತ್ತು ಬಿಗಿದಿದ್ದರಿಂದ ಪ್ರಾಣ ಹೋಗಿದೆ ಎಂದು ವೈದ್ಯರು ನೀಡಿದ ವರದಿ ಹಾಗೂ ಮೃತಳ ಮೈಮೇಲಿನ ಒಡವೆಗಳು ಕಾಣೆಯಾಗಿರುವ ಬಗ್ಗೆ ಅನುಮಾನಿಸಿ ಗಿರವಿ ಅಂಗಡಿಯೊಂದರ ಸಿಸಿ ಕ್ಯಾಮರಾ ಪರೀಕ್ಷಿಸುವಾಗ ಸಿಕ್ಕ ಆಧಾರದ ಮೇರೆಗೆ ಮಹಿಳೆಯನ್ನು ಕೊಲೆ ಮಾಡಿ ಒಡವೆಗಳೊಂದಿಗೆ ಪರಾರಿಯಾಗಿದ್ದ ಆರೋಪಿಯನ್ನು ಬೇತಮಂಗಲ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.**


ಆರೋಪಿ ನವೀನ್ ರೆಡ್ಡಿ

**ಕೋಲಾರ**
✍ ಕೋಲಾರ ಮಂಜು

**ಕೋ**ಲಾರ ಜಿಲ್ಲೆ, ಕೆಜಿಎಫ್ ತಾಲ್ಲೂಕಿನ ಬೇತ ಮಂಗಲ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದ ಜಂಗಮಾನ ಹಳ್ಳಿ ಗ್ರಾಮದ ವಾಸಿ ಕೃಷಿಕ ನಾರಾಯಣಪ್ಪನವರು ಕಳೆದ 23 ವರ್ಷಗಳ ಹಿಂದೆ ಅದೇ ಗ್ರಾಮದ ರಾಮಪ್ಪನ ಮಗಳು ಸುಶೀಲಮ್ಮನವರನ್ನು ಮದುವೆಯಾಗಿದ್ದರು. ಇವರಿಗೆ ಇಬ್ಬರು ಮಕ್ಕಳಿದ್ದು, ಇನ್ನೂ ಮಕ್ಕಳಿಗೆ ಮದುವೆ ಗಳಾಗಿರುವುದಿಲ್ಲ. ವ್ಯವಸಾಯದ ಜೊತೆಗೆ ಕುರಿಗಾಯಿ ಗಳಾಗಿರುವ ನಾರಾಯಣಪ್ಪ ಮತ್ತು ಸುಶೀಲಮ್ಮನವರು ದಿನ ಬೆಳಿಗ್ಗೆ ತಿಂಡಿ ತಿಂಡಿ ತಿಂದು, ಮಧ್ಯಾಹ್ನದ ಊಟದ ಬುತ್ತಿಯನ್ನು ತೆಗೆದುಕೊಂಡು ಕುರಿಗಳೊಂದಿಗೆ ಗಂಡ, ಹೆಂಡತಿ ಇಬ್ಬರು ಅರಣ್ಯ ಪ್ರದೇಶಕ್ಕೆ ಹೋಗಿ ಬೆಳಗ್ಗಿನಿಂದ ಸಂಜೆವರೆಗೂ ಮೇಯಿಸಿಕೊಂಡಿದ್ದು, ನಂತರ ಕುರಿಗಳೊಂದಿಗೆ ಮನೆಗೆ ಬರುತ್ತಿದ್ದರು. ಕಳೆದ ಒಂದು ತಿಂಗಳ ಹಿಂದೆ ಒಂದು ದಿನ ಹೊಲದಲ್ಲಿ ರಾಗಿ ತೇನೆ ಕೊಯ್ಲು ಇದ್ದಿದ್ದರಿಂದ ಈ ದಿನ ನೀನು ಒಬ್ಬಳೇ ಕುರಿ ಗಳೊಂದಿಗೆ ಹೋಗಿ ಮೇಯಿಸಿಕೊಂಡು ಸಂಜೆ ಬೇಗ ಮನೆಗೆ ಬಂದುಬಿಡು ಎಂದು ಗಂಡ ನಾರಾಯಣಪ್ಪ ಹೆಂಡತಿ ಸುಶೀಲಮ್ಮನಿಗೆ ಹೇಳಿ ಇಬ್ಬರು ಒಟ್ಟಿಗೆ ತಿಂಡಿ ತಿಂದು ನಾರಾಯಣಪ್ಪ ಹೊಲದ ಕಡೆ ಹೊರಟರೆ, ಹೆಂಡತಿ ಸುಶೀಲಮ್ಮ ಬುತ್ತಿ ತೆಗೆದುಕೊಂಡು ಕುರಿಗಳನ್ನು ಕರೆದುಕೊಂಡು ಕಾಡಿಗೆ ಹೋದವರು ರಾತ್ರಿ ಮನೆಗೆ ಕುರಿಗಳು ಮಾತ್ರ ಬಂದವು. ಹೆಂಡತಿ ಸುಶೀಲಮ್ಮನ ಸುಳಿವೇ ಇಲ್ಲ. ಹೊಲಕ್ಕೆ ಹೋಗಿದ್ದ ನಾರಾಯಣಪ್ಪ ಮನೆಗೆ ಬಂದು ದೊಡ್ಡಿಯನ್ನು ನೋಡುತ್ತಾರೆ. ಕುರಿಗಳು ಬಂದಿ ರುತ್ತವೆ.

ಆಗ ನಾರಾಯಣಪ್ಪ ಹೆಂಡತಿ ಸುಶೀಲಮ್ಮನನ್ನು ಕರೆದು ಕೈಗೆ ನೀರು ಕೊಡುವಂತೆ ಹೇಳುತ್ತಾರೆ. ಆದರೆ ಮನೆ ಒಳಗಿನಿಂದ ಸುಶೀಲಮ್ಮ ಬರದೇ ಮಗಳು ಬಂದು ಅಪ್ಪ, ಅಮ್ಮ ಇನ್ನು ಮನೆಗೆ ಬಂದಿಲ್ಲ. ಕುರಿಗಳು ಮಾತ್ರ ಸರಿಯಾದ ಸಮಯಕ್ಕೆ ಬಂದು ದೊಡ್ಡಿ ಸೇರಿಕೊಂಡಿವೆ ಎಂದು ಹೇಳಿದಳು.


ಎಸ್ಪಿ ಕೆ.ಎಂ. ಶಾಂತರಾಜು


ಡಿವೈಎಸ್ಪಿ ಪಾಂಡುರಂಗ

ಆಗ ನಾರಾಯಣಪ್ಪ ಅಕ್ಕಪಕ್ಕದ ಮನೆಗಳು ಹಾಗೂ ಗ್ರಾಮದಲ್ಲಿರುವ ನೆಂಟರ ಮನೆಗಳಿಗೆ ಹೋಗಿ ಹೆಂಡತಿ ಸುಶೀಲಮ್ಮನ ಬಗ್ಗೆ ವಿಚಾರಿಸಿದರು. ಏನು ಪ್ರಯೋಜನವಾಗಲಿಲ್ಲ. ನಂತರ ಸ್ವಲ್ಪ ಹೊತ್ತು ಕಾಯೋಣವೆಂದು ಹೆಂಡತಿ ಸುಶೀಲಮ್ಮನಿಗಾಗಿ ಮನೆಯಲ್ಲಿ ಕಾದಿದ್ದರು. ರಾತ್ರಿ 10 ಗಂಟೆಯಾದರೂ ಹೆಂಡತಿ ಸುಶೀಲಮ್ಮ ಮನೆಗೆ ಬರದೆ ನಾಪತ್ತೆಯಾಗಿರುವುದನ್ನು ನೋಡಿ ಗಂಡ ನಾರಾಯಣಪ್ಪ ತನ್ನ ಹೆಂಡತಿ ಇಷ್ಟು ಹೊತ್ತಾದರೂ ಮನೆಗೆ ಬರದೇ ಇರುವುದನ್ನು ನೋಡಿದರೆ ಏನಾದರು ತೊಂದರೆಯಾಗಿ ಕುರಿ ಮೇಯಿಸಲು ಹೋಗಿದ್ದ ಸ್ಥಳದಲ್ಲಿಯೇ ಇರಬಹುದೇ ಎಂದು ಅನುಮಾನಿಸಿ ತನ್ನ ಜೊತೆಗೆ ಒಂದಿಬ್ಬರು ಸಂಬಂಧಿಕರನ್ನು ಕರೆದುಕೊಂಡು ಅರಣ್ಯ ಪ್ರದೇಶದಲ್ಲಿ ಹೆಂಡತಿ ಸುಶೀಲಮ್ಮನಿ ಗಾಗಿ ಹುಡುಕಾಡುತ್ತಿದ್ದಾಗ ಗುಡ್ಡವೊಂದರ ಬಳಿ ಹೆಂಡತಿ ಸುಶೀಲಮ್ಮ ನೆಲದ ಮೇಲೆ ಮಲಗಿರುವ ರೀತಿ ಕಂಡು ಬಂದಿದ್ದು ಕೂಡಲೇ ಹತ್ತಿರಕ್ಕೆ ಹೋಗಿ ಬ್ಯಾಟರಿ ಬೆಳಕಿನಲ್ಲಿ ನೋಡಲಾಗಿ ಕಣ್ಣುತೆರೆದು ಕೊಂಡು, ಉಸಿರಾಡುತ್ತಿರ ಲಿಲ್ಲ. ಹೃದಯಾಘಾತ ವಾಗಿರಬೇಕು. ಅರಣ್ಯದಲ್ಲಿ ಓಡಾಡು ವಾಗ ಹುಳ ಉಪ್ಪಟೆ ಮುಟ್ಟಿ ಸಾವು ಸಂಭವಿಸಿರಬೇಕು ಅಥವಾ ಬೇರೆ ಕಾರಣದಿಂದ ಮೃತಪಟ್ಟಿರುವರೆಂದು ಸಂಬಂಧಿಕರಿಗೆ ಹಾಗೂ ನೆಂಟರಿಷ್ಟರಿ ಗೆಲ್ಲ ಹೇಳಿ ಎಲ್ಲರನ್ನು ಕರೆಸಿಕೊಂಡು ಮರುದಿನ ಬೆಳಿಗ್ಗೆ ಅಂತ್ಯಸಂಸ್ಕಾರಕ್ಕೆ ಬೇಕಾದ ಎಲ್ಲಾ ಸಿದ್ದತೆಗಳನ್ನು ಮಾಡಿಕೊಂಡಿದ್ದರು. ಇದೇ ಸಂದರ್ಭ ದಲ್ಲಿ ಸಂಬಂಧಿಕರು ಮತ್ತು ಗ್ರಾಮದ ಕೆಲವು ಮುಖಂಡರು ನಾರಾಯಣಪ್ಪ ನಿಗೆ ಬೆಳಿಗ್ಗೆ ಕುರಿ ಮೇಯಿಸಲು ಹೋಗುವಾಗ ಸುಶೀಲಮ್ಮ ಚೆನ್ನಾ ಗಿಯೇ ಹೋದವರು ರಾತ್ರಿ ಮನೆಗೆ ಜೀವಂತವಾಗಿ ಬರದೇ ಶವವಾಗಿ ಬಂದಿದ್ದಾರೆ. ಇವರದು ಸಹಜ ಸಾವಲ್ಲ, ಸುಶೀಲಮ್ಮನ ಸಾವಿನ ಬಗ್ಗೆ ಅನುಮಾನ ಇರುವುದರಿಂದ ಪೊಲೀಸರಿಗೆ ತಿಳಿಸಿ ಕಾನೂನು ಪ್ರಕಾರ ನಡೆದುಕೊಳ್ಳುವಂತೆ ಸಲಹೆಯನ್ನು ನೀಡುತ್ತಾರೆ. ಆಗ ನಾರಾಯಣಪ್ಪ ನವರು ಬಂಧುಗಳ ಹಾಗೂ ಗ್ರಾಮದ ಹಿರಿಯರ ಆತಿಗೆ ಗೌರವ ಕೊಟ್ಟು ಅಂತ್ಯಸಂಸ್ಕಾರದ ಕಾರ್ಯವನ್ನು ನಿಲ್ಲಿಸಿ ಬೇತಮಂಗಲ ಪೊಲೀಸ್ ಠಾಣೆಗೆ ಹೋಗಿ ನನ್ನ ಹೆಂಡತಿ


ಕೊಲೆಯಾದ ಸುಶೀಲಮ್ಮ


ಪಿಐ ರಂಗಸ್ವಾಮಯ್ಯ


ಪಿಎಸ್ಐ ಗುರುರಾಜ ಚಿಂತಾಕಲ


ಪಿಎಸ್ಐ ಸಂಗಮೇಶ್

ಸುಶೀಲಮ್ಮ (45)ನವರು ಕುರಿಗಳನ್ನು ಮೇಯಿಸಿಕೊಂಡು ಬರಲು ಅರಣ್ಯ ಪ್ರದೇಶಕ್ಕೆ ಹೋಗಿದ್ದವರು ರಾತ್ರಿ ಕುರಿಗಳೊಂದಿಗೆ ವಾಪಸ್ಸು ಮನೆಗೆ ಬರಬೇಕಾದವರು ಅರಣ್ಯದಲ್ಲಿ ಶವವಾಗಿ ಪತ್ತೆಯಾದರು. ಇವರ ಸಾವಿನ ಬಗ್ಗೆ ನಮಗೆ ಅನುಮಾನವಿರುವುದರಿಂದ ತಾವುಗಳು ಕಾನೂನು ಕ್ರಮ ಜರುಗಿಸುವ ಮೂಲಕ ಹೆಂಡತಿಯ ಸಾವಿಗೆ ನ್ಯಾಯ ದೊರಕಿಸಿಕೊಡುವಂತೆ ದೂರು ನೀಡಿದರು.

### ಸುಳಿವು ಕೊಟ್ಟ ಸಿಸಿ ಕ್ಯಾಮರಾ

ನಾರಾಯಣಪ್ಪನವರಿಂದ ದೂರನ್ನು ಸ್ವೀಕರಿಸಿದ ಕ್ಯಾಸಂಬಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ಸಂಗಮೇಶ್ ರವರು ಮುಂದಿನ ಕ್ರಮಕ್ಕಾಗಿ ಹಿರಿಯ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದ್ದು ಬೇತಮಂಗಲ ಪೊಲೀಸ್ ವೃತ್ತದ ಪಿಐ ರಂಗಸ್ವಾಮಯ್ಯನವರು ಪ್ರಕರಣವನ್ನು ದಾಖಲಿಸಿ ಕೊಂಡು ಕ್ರಮ ಜರುಗಿಸುವಂತೆ ಸೂಚನೆ ನೀಡಿದರು. ಶವದ ಮಹಜರ್ ನಡೆಸಿದ ಮೇಲೆ ವೈದ್ಯಾಧಿಕಾರಿಗಳಿಂದ ಮೃತದೇಹದ ಪರೀಕ್ಷೆ ನಡೆಸಿದ ಮೇಲೆ ಶವವನ್ನು ವಾರಸುದಾರರಿಗೆ ನೀಡಲಾಯಿತು. ಆನಂತರ ಗ್ರಾಮದ ಹೊರವಲಯದ ಸ್ಮಶಾನದಲ್ಲಿ ಸಂಬಂಧಿಕರ ಹಾಗೂ ಗ್ರಾಮಸ್ಥರ ಸಮಕ್ಷಮದಲ್ಲಿ ಅಂತ್ಯಸಂಸ್ಕಾರ ನಡೆಸ ಲಾಯಿತು. ಸುಶೀಲಮ್ಮನ ಕತ್ತಿನಲ್ಲಿದ್ದ ಮಾಂಗಲ್ಯ ದೊಂದಿಗಿದ್ದ ಚಿನ್ನದ ಒಡವೆ ಮತ್ತು ಕಿವಿ ಓಲೆಗಳು ಶವ ಸಿಕ್ಕಾಗ ಇರಲಿಲ್ಲ. ಮನೆಯಲ್ಲಿ ಇಟ್ಟಿರಬೇಕೆಂದು ಸುಮ್ಮನಾಗಿದ್ದರು. ಕೆಲವು ದಿನಗಳ ಬಳಿಕ ಅನುಮಾನ ಬಂದು ಒಡವೆಗಳನ್ನು ಮನೆಯಲ್ಲಿ ಹುಡುಕಾಡಿದ್ದಾಗ ನಾಪತ್ತೆಯಾಗಿದ್ದವು. ಒಡವೆ ಆಸೆಗಾಗಿ ಯಾರಾದರೂ ಅರಣ್ಯದಲ್ಲಿ ಕುರಿಗಳನ್ನು ಮೇಯಿಸಿಕೊಂಡು ಒಂಟಿಯಾ ಗಿದ್ದ ಸುಶೀಲಮ್ಮನ ಕತ್ತು ಹಿಸುಕಿ ಕೊಲೆ ಮಾಡಿ ಒಡವೆಗಳನ್ನು ಗಿರವಿ ಅಂಗಡಿಗಳಲ್ಲಿ ಮಾರಾಟ ಮಾಡಿರ ಬೇಕೆಂಬ ಅನುಮಾನವಿರುವುದಾಗಿ ಕ್ಯಾಸಂಬಳ್ಳಿ ಪೊಲೀಸ ರಿಗೆ ನಾರಾಯಣಪ್ಪನವರು ತಿಳಿಸಿದರು. ಇದೇ ವೇಳೆಗೆ ಮೃತ ಸುಶೀಲಮ್ಮನವರನ್ನು ಉಸಿರುಗಟ್ಟಿಸಿರುವುದರಿಂದ ಆಕೆಯ ಪ್ರಾಣಪಕ್ಷಿ ಹಾರಿ ಹೋಗಿದೆ ಎಂದು ಶವಪರೀಕ್ಷೆ ನಡೆಸಿದ ವೈದ್ಯಾಧಿಕಾರಿಗಳು ಪೊಲೀಸರಿಗೆ ನೀಡಿರುವ ಪೋಸ್ಟ್‌ಮಾರ್ಟಂ ರಿಪೋರ್ಟ್‌ನಲ್ಲಿ ತಿಳಿಸಿದ್ದರು. ಮೃತಳ ಗಂಡ ನಾರಾಯಣಪ್ಪನವರು ಒಡವೆ ನಾಪತ್ತೆ ಬಗ್ಗೆ

☞12

**ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಆರು ಮನೆಯ ಚಾಳೊಂದರಲ್ಲಿ ತೀರಾ ಇತ್ತೀಚೆಗೆ ತೀರಾ ಕಡಿಮೆ ಹಣಕ್ಕಾಗಿ ಮಹಿಳೆಯೊಬ್ಬರನ್ನು ಕತ್ತು ಹಿಸುಕಿ ಕೊಲ್ಲಲಾಗಿದೆ.**

# ಸಿದ್ದಾಪುರದಲ್ಲಿ ಒಂಟಿ ಮಹಿಳೆ ಕೊಲೆ

**ಉತ್ತರ ಕನ್ನಡ**
✍ ಸಂತೋಷಕುಮಾರ


ಗೀತಾ ಬದುಕಿದ್ದಾಗ


ಆರೋಪಿ ಅಭಿಜಿತ

ಇವರ ಹೆಸರು ಗೀತಾ ವಯಸ್ಸು ಅಂದಾಜು 72. ಅವರು ತಂದೆತಾಯಿಗೆ ಏಳು ಜನ ಮಕ್ಕಳು. ಅವರಲ್ಲಿ ಒಬ್ಬ ತಮ್ಮ, ಒಬ್ಬ ಅಕ್ಕ ತೀರಿಕೊಂಡಿದ್ದಾರೆ. ಗೀತಾಗೆ ಮದುವೆ ಆಗಿ ಗಂಡ ಪ್ರಭಾಕರ ಜೊತೆ ಶಿರಸಿಯ ಬಚಗಾಂವ ಎಂಬಲ್ಲಿ ವಾಸಿಸುತ್ತಾ ಇದ್ದರು. ಅಕ್ಕಿ ವ್ಯಾಪಾರ ಮಾಡಿ ಜೀವನ ಸಾಗಿಸುತ್ತಿದ್ದ ಪ್ರಭಾಕರ, ಯಾವುದೋ ಕಾರಣಕ್ಕೆ ಮನೆಬಿಟ್ಟು ಹೋದವರು ಮತ್ತೆ ಮನೆ ಕಡೆ ತಲೇನೇ ಹಾಕ್ಲಿಲ್ಲ. ಕಳೆದ 30 ವರ್ಷಗಳ ಹಿಂದೆ ಮನೆಬಿಟ್ಟು ಹೋಗಿ ತೀರಿಯೂ ಹೋಗಿದ್ದಾರೆ. ಅಂಥ ಕಷ್ಟದ ಸಮಯದಲ್ಲಿ ಗೀತಾಳ ಅಣ್ಣ ಕುಸುಮಾಕರ ತನ್ನ ತಂಗಿ ಗೀತಾಳನ್ನ ಸಿದ್ದಾಪುರದ ಬಸವನಗಲ್ಲಿಯಲ್ಲಿರುವ ಆರು ಮನೆಗಳಿರುವ ಚಾಳನಲ್ಲಿ ಮೊದಲನೇ ಮನೆಯನ್ನು ಗೀತಾಗೆ ಕೊಟ್ಟಿದ್ದಾರೆ. ಆಗ ಗೀತಾಗೆ ಎರಡು ಹೆಣ್ಣು ಮಕ್ಕಳೂ ಇದ್ದಾರೆ. ಇನ್ನು ಗೀತಾಗೆ ಜೀವನಾಧಾರಕ್ಕೇನಾದರೂ ಉದ್ಯೋಗ ಬೇಕೆಂದು ಆಕೆಯ ಅಣ್ಣ ಕುಸುಮಾಕರ ಗೀತಾಗೆ ತನ್ನ ಪರಿಚಯದ ಮಹಾಲಸಾ ಅನ್ನೋ ಹೆಸರಿನ ಖಾಸಗಿ ಬ್ಯಾಂಕ್/ ಸೊಸೈಟಿಯೊಂದರಲ್ಲಿ ಪಿಗ್ಮಿ ಕಲೆಕ್ಟರ್ ಕೆಲಸ ಕೊಡಿಸಿದ್ದಾರೆ. ಆದರೆ ಆ ಬ್ಯಾಂಕ್ ಕೆಲ ದಿನಗಳ ನಂತರ ಮುಚ್ಚಿಹೋಗಿದ್ದರಿಂದ ಕುಸುಮಾಕರ ತನ್ನ ತಂಗಿ ಗೀತಾಗೆ ಆಗಷ್ಟೇ ಹೊಸದಾಗಿ ಪ್ರಾರಂಭಗೊಂಡಿದ್ದ ಸಿದ್ದಾಪುರದ ವಿನಾಯಕ ಸೌಹಾರ್ದ ಕ್ರೆಡಿಟ್‌ಕೋ. ಆಪರೇಟಿವ್ ಸೊಸೈಟಿಯಲ್ಲಿ ಪಿಗ್ಮಿ ಕಲೆಕ್ಟರ್ ಕೆಲಸ ಹಚ್ಚಿಕೊಟ್ಟಿದ್ದರು. ಅಲ್ಲೇ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದ ಗೀತಾ ತಾನಾಯ್ತು ತನ್ನ ಕೆಲಸವಾಯ್ತು ಅಂತಿದ್ದು, ಹಾಗೇ ಕಷ್ಟಪಟ್ಟು ತನ್ನ ಎರಡೂ ಹೆಣ್ಣು ಮಕ್ಕಳ ಮದುವೆ ಕೂಡಾ ಮಾಡಿದ್ದಾರೆ. ಚಿಕ್ಕವಳನ್ನ ಬೆಂಗಳೂರಿನ ವರನಿಗೆ ಕೊಟ್ಟಿದ್ರೆ ದೊಡ್ಡ ಮಗಳನ್ನ ಸಿದ್ದಾಪುರ ಕೋಲಸಿರ್ಸಿಯ ಕಸ್ತೂರ ಶ್ರೀನಗರದ ರಾಘವೇಂದ್ರ ರಾಮಚಂದ್ರ ನಾಯಕ ಎಂಬಾತನಿಗೆ ಕೊಟ್ಟು ಮದುವೆ ಮಾಡಿದ್ದಾರೆ. ರಾಘವೇಂದ್ರ ಸ್ಥಳೀಯ ಅನೂಪ ಇಂಡಸ್ಟ್ರಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ.


ಕೊಲೆಯಾದ ಗೀತಾ

ಗೀತಾ ದಿನಚರಿ ಹೇಗಿತ್ತೆಂದರೆ ಗೀತಾ ಪ್ರತಿನಿತ್ಯ ಬೆಳಿಗ್ಗೆ 10 ಘಂಟೆಯ ಹೊತ್ತಿಗೆ ಪಿಗ್ಮಿ ಕಲೆಕ್ಷನ್‌ಗೆ ಹೋಗಿ ಮಧ್ಯಾಹ್ನ 1.30ರ ಹೊತ್ತಿಗೆ ಮನೆಗೆ ಬಂದು, ಊಟ ಮಾಡಿ ಸ್ವಲ್ಪ ವಿಶ್ರಮಿಸಿ ನಂತರ ಮತ್ತೆ 3 ಘಂಟೆ ಹೊತ್ತಿಗೆ ಪಿಗ್ಮಿ ಕಲೆಕ್ಷನ್‌ಗೆ ಹೋಗಿ ಮತ್ತೆ ರಾತ್ರಿ 9 ರಿಂದ 10 ಘಂಟೆ ಹೊತ್ತಿಗೆ ಮನೆಗೆ ಹೋಗುತ್ತಿದ್ದರಂತೆ. ಗೀತಾ ದಿನವಿಡೀ ಪಿಗ್ಮಿ ಕಲೆಕ್ಟ್ ಮಾಡಿ ಬಂದ ಹಣವನ್ನ ಮಾರನೇ ದಿನ ಸಿದ್ದಾಪುರದ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕ್‌ಗೆ ತುಂಬುತ್ತಾ ಇದ್ದರಂತೆ. ಪ್ರತಿನಿತ್ಯ ಅಂದಾಜು 5ರಿಂದ 10 ಸಾವಿರ ರೂಪಾಯಿಗಳಷ್ಟು ಹಣ ಸಂಗ್ರಹವಾಗುತ್ತಿದ್ದ ಹಣವನ್ನ ಆ ರಾತ್ರಿ ತಮ್ಮ ಬಳಿಯೇ ಗೀತಾ ಇಟ್ಟುಕೊಳ್ಳುತ್ತಿದ್ದರಂತೆ.

ಈ ಮಧ್ಯೆ ಗೀತಾ ತಿರುಪತಿಗೆ ಹೋಗಿ ಬಂದು ತನ್ನ ಮಗಳು, ಅಳಿಯನಿಗೆ ತಿರುಪತಿ ಪ್ರಸಾದ ಕೊಟ್ಟಿದ್ದಾರೆ. ನಾಲ್ಕೈದು ದಿನಗಳಿಗೊಮ್ಮೆ ಫೋನ್‌ನಲ್ಲಿಯೇ ತನ್ನ ಮಗಳು ಶುಭಾ ಮತ್ತು ಅಳಿಯನ ಜೊತೆ ಮಾತಾಡುತ್ತಿದ್ದ ಗೀತಾ ಎಲ್ಲಾದ್ದರೊಮ್ಮೆ ಅಳಿಯ ರಾಘವೇಂದ್ರಗೆ ಅತ್ತೆ ಗೀತಾ ಕಂಡು ಮಾತಾಡುತ್ತಿದ್ದರಂತೆ. 22/12/2024ರಂದು ಸಂಜೆ ರಾಘವೇಂದ್ರ ತನ್ನ ಅತ್ತೆ ಗೀತಾರನ್ನ ಪೇಟೆಯಲ್ಲಿ ನೋಡಿದ್ದಾರೆ. ಅದೇ ಕೊನೆ ಮತ್ತೆ ಗೀತಾ ರಾಘವೇಂದ್ರ ಕಣ್ಣಿಗೆ ಬೀಳಲೇ ಇಲ್ಲ ಆದರೆ ಎರಡು ದಿನ ಕಳೆದರೂ ಗೀತಾ ಕಾಣದಿದ್ದಾಗ ಅಕ್ಕಪಕ್ಕದ ಮನೆಯವರು ಗೀತಾ ಮನೆ ಹತ್ತಿರ ಹೋಗಿ ನೋಡಿದ್ದಾರೆ. ಪ್ರತಿನಿತ್ಯ ತೆಗೆದುಕೊಳ್ಳೋ ಹಾಲಿನ ಕ್ಯಾನ್ ಕೂಡಾ ಹಾಗೇ ಇದೆ. ಬಾಗಿಲು ಬಡಿದಿದ್ದಾರೆ, ಕೂಗಿ ಕರೆದಿದ್ದಾರೆ ಆದರೂ ಗೀತಾ ಯಾವುದೇ ಪ್ರತಿಕ್ರಿಯೆ ನೀಡದಿದ್ದಾಗ ಮನೆ ಹಿಂದೆ ಮುಂದೆಲ್ಲಾ ನೋಡಿದ್ದಾರೆ. ಆಗ ಮನೆ ಹಿಂದಿನ ಭಾಗ ಏನೋ ಸರಿಯಿಲ್ಲದ್ದನ್ನು ಕಂಡು ಗೀತಾಳ ಅಳಿಯನಿಗೆ ಫೋನ್ ಮಾಡಿದ್ದಾರೆ. ವಿಷಯ ತಿಳಿದ ಮಗಳು ಶುಭಾ, ಅಳಿಯ ರಾಘವೇಂದ್ರ ಅಮ್ಮ ಒಂದೊಂದು ಸಲ ಮನೆ ಹಿಂಬದಿ ರೂಂ ಹತ್ತಿರ ಬರುತ್ತಾರೆ. ದಯವಿಟ್ಟು ನೋಡಿ. ಅಷ್ಟರಲ್ಲೇ ನಾವೂ ಬರ್ತೀವಿ ಅಂತ ಹೇಳಿದ್ದಾರೆ. ಅದರಂತೆ ಗೀತಾ ಮನೆ ಹತ್ತಿರ ಇರೋ ಗೀತಾ ಸಂಬಂಧಿ ಹಾಗೂ ಅಕ್ಕಪಕ್ಕದ ಮನೆಯವರು ಮನೆ ಹಿಂದೆ ಹೋಗಿ ಬಾಗಿಲನ್ನು ದೂಡಿ ನೋಡಿದಾಗ ಅಲ್ಲಿ ಗೀತಾ ಅಸ್ತವ್ಯಸ್ತವಾಗಿ ಬಿದ್ದಿದ್ದು, ಕತ್ತಿನ ಭಾಗದಲ್ಲಿ ಏನೋ ಒತ್ತಿ ಎಳೆದ ಗುರುತು ಇದ್ದುದ್ದನ್ನು ನೋಡಿ ಮತ್ತೆ ಗೀತಾರ ಅಳಿಯ ರಾಘವೇಂದ್ರಗೆ ಫೋನ್ ಮಾಡಿ ವಿಷಯ ತಿಳಿಸಿದ್ದಾರೆ. ತಕ್ಷಣ ರಾಘು ಸಿದ್ದಾಪುರ ಪೊಲೀಸರಿಗೂ ಸುದ್ದಿ ತಿಳಿಸಿದ್ದಾರೆ. ಹಾಗೇ ರಾಘು ಮತ್ತು ಶುಭಾ ಗೀತಾ ಇದ್ದಲ್ಲಿ ಹೋಗಿ ಬಿಕ್ಕಿಬಿಕ್ಕಿ ಅತ್ತಿದ್ದಾರೆ. ಸ್ಥಳಕ್ಕೆ ಶಿರಸಿ ಡಿವೈಎಸ್ಪಿ ಕೆ.ಎಲ್. ಗಣೇಶ್, ಸಿದ್ದಾಪುರ ಸಿಪಿಐ ಜೆ.ಬಿ. ಸೀತಾರಾಮ, ಪಿಎಸ್‌ಐ ಅನಿಲ್ ಬಿ.ಎಂ. ಹಾಗೂ ಸಿಬ್ಬಂದಿಗಳು ದೌಡಾಯಿಸಿದ್ದಾರೆ.


ಎಸ್ಪಿ ಎಂ. ನಾರಾಯಣ


ಹೆಚ್ಚುವರಿ ಎಸ್ಪಿ ಜಗದೀಶ್ ನಾಯ್ಕ


ಡಿವೈಎಸ್ಪಿ ಗಣೇಶ್


ಸಿಪಿಐ ಜೆ.ಬಿ. ಸೀತಾರಾಮ್

ಸ್ಥಳ ಪರಿಶೀಲನೆ ಮಾಡಿದ ಪೊಲೀಸರು ಆರೋಪಿ ಪತ್ತೆಗೆ ಜಾಲ ಬೀಸಿದ್ದಾರೆ. ಅದೇ ದಿನ ಸುದ್ದಿ ತಿಳಿದ ಉತ್ತರ ಕನ್ನಡ ಎಸ್ಪಿ ಎಂ. ನಾರಾಯಣ, ಹೆಚ್ಚುವರಿ ಎಸ್ಪಿ ಜಗದೀಶ ಎಂ. ನಾಯ್ಕ ಸ್ಥಳಕ್ಕೆ ಭೇಟಿ ನೀಡಿ ಆರೋಪಿ ಪತ್ತೆ ಬಗ್ಗೆ ಮಾರ್ಗದರ್ಶನ ನೀಡಿದ್ದಾರೆ. ಅದರಂತೆ ಶಿರ್ಸಿ ಡಿವೈಎಸ್ಪಿ ಗಣೇಶ್ ನೇತೃತ್ವದಲ್ಲಿ ಸಿಪಿಐ ಸೀತಾರಾಮ, ಪಿಎಸ್‌ಐ ಅನಿಲ್ ತಮ್ಮ ಸಿಬ್ಬಂದಿಗಳೊಂದಿಗೆ ಆರೋಪಿಯ ಪತ್ತೆಗಿಳಿದಿದ್ದಾರೆ.

ಎಷ್ಟೇ ಹುಡುಕಿದರೂ ಆರೋಪಿಯ ಪತ್ತೆಯೇ ಆಗಿಲ್ಲ. ಪೊಲೀಸರ ತಂಡ ಹಗಲಿರುಳು ಹುಡುಕುತ್ತಿದ್ದರು. ಸ್ಥಳಕ್ಕೆ ಕಾರವಾರ ಸಶಸ್ತ್ರ ಮೀಸಲು ಪಡೆಯ ಕ್ರೈಂ ಡಾಗ್ ಅಕೀರಾ ಕೂಡಾ ಬಂದುಹೋಗಿದೆ. ಬೆರಳಚ್ಚು ತಜ್ಞರು ತಮ್ಮ ಪ್ರಯತ್ನ ಮಾಡಿದ್ದಾರೆ. ಸಿದ್ದಾಪುರ ಪೊಲೀಸರ ಟೀಂ ತಲೆಕೆಡಿಸಿಕೊಂಡು ನಂತರ ಮನೆಯ ಹಂಚು ತೆಗೆದು ಕಳ್ಳತನ ಮಾಡೋ ಆರೋಪಿಗಳ ಲಿಸ್ಟ್ ತೆಗೆದಿದ್ದಾರೆ. ಅದರಲ್ಲಿ ಸಿದ್ದಾಪುರ ಕೊಂಡ್ಲಿಯ ಅಭಿಜಿತ ಗಣಪತಿ ಮಡಿವಾಳ ಹೆಸರು ಕೂಡಾ ಇದೆ. ಅವನ ಮೇಲೆ ಪೊಲೀಸರ ಹದ್ದಿನ ಕಣ್ಣು ಬಿದ್ದಿದೆ. ಅಭಿಜಿತ್ ಆಗಾಗ ಪೊಲೀಸರ ಚಲನವಲನದ ಕಡೆ ನಿಗಾ ಇಟ್ಟಿರೋದನ್ನ ಹಾಗೇ ಈ ಮೊದಲು ಪೊಲೀಸರಿಗೆ ಅಷ್ಟಾಗಿ ಹೆದರದೇ ಇದ್ದ ಅಭಿಜಿತ್‌ನನ್ನ ಪೊಲೀಸರು 30/12/2024 ರಂದು ಸಿದ್ದಾಪುರದ ವಿಶ್ವಾಸ ಹೋಟೆಲ್ ಹತ್ತಿರ ಬಂಧಿಸಿ ವಿಚಾರಿಸಿದಾಗ ಅಭಿಜಿತ ತನ್ನ ತಪ್ಪನ್ನು ಒಪ್ಪಿಕೊಂಡು ತಾನು ಹಣಕ್ಕಾಗಿ ಕೊಲೆ ಮಾಡಿದ್ದೇನೆ. ಗೀತಾ ಪಿಗ್ಮಿ ಹಣ ತನ್ನ ಮನೇಲಿ ಇಟ್ಕೊಂಡು ಮಾರನೇ ದಿನ ಬ್ಯಾಂಕಿಗೆ ಕಟ್ಟೋದನ್ನ ಪಕ್ಕಾ ಮಾಡ್ಕೊಂಡು ರಾತ್ರಿ ಮನೆ ಮೇಲೆ ಹತ್ತಿ ಮನೆ ಹಂಚನ್ನು ತೆಗೆದು ಕೆಳಗಿಳಿದು ಗೀತಾ ವಿರೋಧಿಸಿದಾಗ ಕತ್ತು ಹಿಚುಕಿ ಅವ್ರನ್ನ ಕೊಂದು ಅವ್ರಲ್ಲಿದ್ದ ಹಣ, ಒಡವೆಗಳನ್ನ ತಗೊಂಡು ಹೋಗಿ ಆಭರಣಗಳನ್ನು ಸಿದ್ದಾಪುರದ ಮುತ್ತೂಟ್ ಫೈನಾನ್ಸ್‌ನಲ್ಲಿ ಮಾರಾಟ ಮಾಡಿದ್ದೇನೆ. 4 ಗ್ರಾಂ ತೂಕದ ಅಂದಾಜು 28000 ರೂ. ಬೆಲೆಯ ಬಂಗಾರದ ಕಿವಿಯೋಲೆ ಮತ್ತು 1400 ರೂ. ಕ್ಯಾಶ್ ಹಾಗೂ ಆರೋಪಿ ಅಭಿಜಿತ್ ಮನೆಯಲಿಟ್ಟಿದ್ದ 3 ಬಂಗಾರದ ನಮೂನೆಯ ಬಳೆಗಳನ್ನು ವಶಪಡಿಸಿಕೊಂಡಿದ್ದು, ಆತ ಒಟ್ಟೂ ಕದ್ದ ಹಣದಲ್ಲಿ 20680 ರೂ. ಗಳಲ್ಲಿ 19280 ರೂ.ಗಳನ್ನ ಆರೋಪಿ ಅಭಿಜಿತ ಊರಲ್ಲಿ ನಡೆದ ಕಾರ್ತಿಕೋತ್ಸವದ ದಿನ ತನ್ನ ಮನೆಯಲ್ಲಿ ಹಬ್ಬ


ಆರೋಪಿ ಮನೆ ಹಂಚು ತೆಗೆದಿರುವುದು


ಗೀತಾ ವಾಸಿಸುತ್ತಿದ್ದ ಮನೆ

☞15

## ಕ್ರೈಂ ಪ್ರಪಂಚ

# ಡೈನಾಮಿಕ್ ಡೆತ್!

ಭಾವನಗರ ಬಡಾವಣೆ.

ಬೆಳಗಿನ ಎಂಟು ಗಂಟೆ.

ಪೊಲೀಸ್ ಸ್ಟೇಷನ್‌ನಲ್ಲಿ ರಾತ್ರಿ ಪಾಳಿಯ ಪೊಲೀಸರ ಡ್ಯೂಟಿ ಟೈಂ ಮುಗಿದಿದೆ. ಡೇ ಡ್ಯೂಟಿಯವರು ಬಂದಿದ್ದಾರೆ.

ಫೋನ್ ರಿಂಗ್ ಆಯಿತು. ಹೆಡ್ ಕಾನ್‌ಸ್ಟೇಬಲ್ ಮಾತಾಡಿದನು.

''ಸಾರ್... ನಾನು ಹನುಮಂತಯ್ಯ ಅಂತ. ಭಾವನಗರದ ಎಂಟನೆ ಮುಖ್ಯರಸ್ತೆಯಲ್ಲಿರುವ ಮನೆ ನಂಬರ್ ಇನ್ನೂರ ಎಂಭತ್ತರಲ್ಲಿ ಕೊಲೆ ಆಗಿದೆ.''

ಬೆಳಿಗ್ಗೆ... ಬೆಳಿಗ್ಗೆನೇ ಕೊಲೆಕೇಸು ಬಂದಿದೆ. ಇನ್ನು ಇವತ್ತು ಪೂರ್ತಿ ಉಸಿರಾಡಲಾಗದಷ್ಟು ಕೆಲಸ ಇರುತ್ತದೆ ಎಂದುಕೊಂಡು ಅವನು ಹೇಳುವುದನ್ನು ರೆಕಾರ್ಡ್ ಮಾಡಿಕೊಳ್ಳಲು ಬಟನ್ ಒತ್ತಿದನು.

''ಕೊಲೆ ಆಗಿರೋದು ಯಾರು?''

''ಶಾಲಿನಿ ಎಂಬ ಹೆಂಗಸು.''

''ಆ ಮನೇಲಿ ಬೇರೆ ಯಾರಿದ್ದಾರೆ?''

''ಅವರ ಗಂಡ ಮಾತ್ರ ಇರೋದು. ಆದರೆ ಅವರು ನೆನ್ನೆ ಮಧ್ಯಾಹ್ನ ಆಫೀಸ್ ಕೆಲಸದ ನಿಮಿತ್ತ ಬೇರೆ ಊರಿಗೆ ಹೋದ್ರು.''

''ಅಂದರೆ ಶಾಲಿನಿ ಒಬ್ಬಳೇ ಇರುವಾಗ ಕೊಲೆ ಮಾಡಿದ್ದಾರ?''

''ಇರಬಹುದು ಸಾರ್.''

''ಓಕೆ ನೀವು ಯಾರು?''

''ಶಾಲಿನಿಯ ಸಂಸಾರದವರು ವಾಸ ಮಾಡುತ್ತಿರುವ ಮನೆಯ ಮಾಲೀಕ ರಂಗದಾಸಯ್ಯ.''

''ನಿಮಗೆ ಈ ವಿಷಯ ಹೇಗೆ ತಿಳೀತು?''

''ಪತ್ರಿಕೆ ಮತ್ತು ಹಾಲು ವಿತರಣೆ ಮಾಡುವ ಹುಡುಗನಿಂದ ತಿಳೀತು.''

''ಆ ಹುಡುಗನ ಹೆಸರು, ಫೋನ್ ನಂಬರ್ ಹೇಳಿ'' ಎಂದು ವಿವರಗಳನ್ನು ದಾಖಲಿಸಿಕೊಂಡನು. ನಂತರ ಮೆಲ್ಲಗೆ ''ಸಾರ್... ಆ ಮನೆಯ ಲಾಕ್ ಓಪನ್ ಆಗಿಲ್ಲ. ವಿಷಯ ತಿಳಿದು ಬಡಾವಣೆಯ ಜನಗಳು ಬರುತ್ತಿದ್ದಾರೆ. ನೀವು ಬೇಗ ಬನ್ನಿ.''

''ಆಕೆ ಗಂಡನಿಗೆ ತಿಳಿಸಿದ್ದೀರ?''

''ನಿಮಗೆ ಫೋನ್ ಮಾಡುವ ಮೊದಲೇ ಅವರಿಗೆ ಹೇಳಿದೆ. ಅವರು ಮೈಸೂರಿನಿಂದ ಹೊರಟಿದ್ದಾರೆ. ಬೇಗ ಬರುತ್ತಾರೆ.''

''ನಿಮ್ಮ ಹೆಸರು ರಂಗದಾಸಪ್ಪ ತಾನೆ?''

''ಹೌದು ಸಾರ್.''

''ನಾವು ಬರುವತನಕ ನೀವು ಅಲ್ಲಿರಬೇಕು. ನಾವು ಬಂದ ಮೇಲೆ ಎಲ್ಲರ ಸಮಕ್ಷಮದಲ್ಲಿ ಬಾಗಿಲು ಒಡೆದು ಒಳಗೆ ಹೋಗ್ತೀವಿ.''

●●●

ಪೊಲೀಸ್ ವಾಹನ ಸೈರನ್ ಮೊಳಗಿಸುತ್ತಾ ಬಂದಿದ್ದರಿಂದ ಜನಗಳು ದೂರ ಸರಿದು ದಾರಿ ಮಾಡಿಕೊಟ್ಟರು. ಮಾಧ್ಯಮದವರು ಬಂದಿದ್ದಾರೆ. ಎಲ್ಲರೂ ಸೇರುತ್ತಿದ್ದಾರೆ.

ಮತ್ತೊಂದು ವಾಹನದಲ್ಲಿ ಡಾಕ್ಟರ್, ಫೋಟೋಗ್ರಾಫರ್, ಫಿಂಗರ್ ಪ್ರಿಂಟ್‌ನವರು ಬಂದಿದ್ದಾರೆ. ಪೊಲೀಸ್ ಅಧಿಕಾರಿ ದೇವಗನ್ ರೇಗಿದನು. ಕೂಡಲೇ ಪಿ.ಸಿ.ಗಳು ಗುಂಪುಗೂಡುತ್ತಿದ್ದ ಜನಗಳನ್ನ ದೂರ ಕಳಿಸಿದರು.

ಮಧ್ಯಮ ವರ್ಗದ ಮನೆ!

ಸುತ್ತಲು ಎತ್ತರವಾದ ಕಾಂಪೌಂಡ್ ಗೋಡೆ ಇದೆ. ಗಾರ್ಡನ್ ಮತ್ತು ಲಾನ್ ಇದೆ. ಕಾರು ನಿಲ್ಲಿಸಲು ಪ್ರತ್ಯೇಕ ಜಾಗವಿದೆ. ಎಲ್ಲವೂ ಸಹ ಕ್ರಮಬದ್ಧವಾಗಿದೆ.

ಪೊಲೀಸ್ ಅಧಿಕಾರಿ ಆ ಬಡಾವಣೆಯ ಪ್ರಮುಖರ ಸಮಕ್ಷಮದಲ್ಲಿ ಬಾಗಿಲನ್ನು ಮಾಸ್ಟರ್ ಕೀ ಬಂಚ್ ತರಿಸಿ, ಬೀಗ ರಿಪೇರಿ ಮಾಡುವವರ ಪ್ರಯತ್ನದಿಂದ ಓಪನ್ ಮಾಡಿದರು.

ಪ್ರಶ್ನೆ ಇರುವಾಯಿತು!

ಮನೆ ಬಾಗಿಲನ್ನು ಒಳಗಿನಿಂದ ಲಾಕ್ ಮಾಡಲಾಗಿದೆ. ಅಂದಮೇಲೆ ಕೊಲೆಗಾರ ಯಾವ ರೀತಿ ಒಳಗೆ ಬಂದಿದ್ದಾನೆ...? ಇದು ಹೇಗೆ ಸಾಧ್ಯ ?

ಶವ ಬಿದ್ದಿರುವ ರೂಮಿಗೆ ಹೋಗುವ ಮೊದಲು ಆ ಮನೆಯನ್ನು ಸೂಕ್ಷ್ಮವಾಗಿ ಪರೀಕ್ಷೆ ಮಾಡಿದನು. ಬ್ಯಾಕ್ ಡೋರ್ ಸಹ ಲಾಕ್ ಆಗಿದೆ! ಎರಡೂ ಕಡೆ ಲಾಕ್ ಆಗಿರುವಾಗ ಕೊಲೆಗಾರ ಒಳಗೆ ಹೇಗೆ ಬಂದ? ಇದೆಲ್ಲಾ ಹೇಗೆ ಸಾಧ್ಯ ?

ಆ ಕ್ಷಣ ಪೊಲೀಸ್ ಅಧಿಕಾರಿ ದೇವಗನ್ ದೃಷ್ಟಿಗೆ ಕಂಡು ಬಂದಿತು ಹೆಜ್ಜೆಗಳ ಗುರುತು...!

ಹಿಂದಿನ ರಾತ್ರಿ ವೇಳೆ ಬಂದಿದ್ದರಿಂದ ಎಲ್ಲಾ ಕಡೆ ಒಂದು ರೀತಿಯಲ್ಲಿ ಕೊಚ್ಚೆ, ಕೆಸರು ತುಂಬಿತ್ತು. ಕೆಸರು ಅಂಟಿರುವ ಹೆಜ್ಜೆ ಗುರುತು ಮೂಡಿದೆ. ಫ್ರಂಟ್ ಡೋರ್‌ನಿಂದ ಅವಳ ಬೆಡ್ ರೂಮಿನತನಕ ಪುಟ್ ಪ್ರಿಂಟ್ ಕಂಡು ಬರುತ್ತಿದೆ. ಒಳಗೆ (ಬೆಡ್ ರೂಮ್) ಹೋಗಿ ಸೂಕ್ಷ್ಮವಾಗಿ ಗಮನಿಸಿದಾಗ ಕಂಡು ಬಂದಿದ್ದೇನು?

ಈ ಹೆಜ್ಜೆ ಗುರುತು ಶವ ಬಿದ್ದಿರುವ ಮಂಚದ ತನಕ ಮೂಡಿದೆ. ಪ್ರಾರಂಭದಲ್ಲಿ ಪೂರ್ಣ ಪ್ರಮಾಣದಲ್ಲಿ ಮೂಡಿರುವ ಗುರುತು ಕ್ರಮೇಣ ಅಂದರೆ, ಬೆಡ್‌ರೂಮಿನ ಮಂಚದ ಹತ್ತಿರ ಬಂದಾಗ ಅಸ್ಪಷ್ಟವಾಗಿ ಮೂಡಿದೆ.

ದೇವಗನ್‌ಗೆ ಗೊಂದಲವಾಗುತ್ತಿದೆ. ಡೋರ್‌ಲಾಕ್ ಓಪನ್ ಆಗಿದೆ. ಕೊಲೆಗಾರ ಒಳಗೆ ಹೇಗೆ ಬರಲು ಸಾಧ್ಯ ?

ಅವನು ಈ ಮನೆ ಡೋರ್ ಲಾಕ್ ಕೀನ ಕೊಲೆ ಮಾಡುವ ಮೊದಲೇ ಅಪಹರಿಸಿರಬೇಕು ಅಥವಾ ಈ ಕುಟುಂಬದ ಸಂಬಂಧಿಕರಲ್ಲಿ ಒಬ್ಬರ ಹತ್ತಿರ ಮತ್ತೊಂದು ಕೀ ಇರಬಹುದು ಅಥವಾ ಮಾಸ್ಟರ್ ಕೀ ಬಂಚ್ ತಂದು, ಒಂದೊಂದೇ ಕೀ ಉಪಯೋಗಿಸಿ ಪ್ರಯತ್ನ ಮಾಡಿರುವ ಸಾಧ್ಯತೆಗಳಿವೆ.

ಡೆಡ್‌ಬಾಡಿಯ ಹತ್ತಿರ ಬಂದು ತುಂಬಾ ಸೂಕ್ಷ್ಮವಾಗಿ ಗಮನಿಸಿದನು. ನೀಲಿ ಛಾಯೆ ಅಡರಿದೆ. ವಿಷ ಪ್ರಯೋಗ ಆಗಿದೆ. ಪೊಲೀಸ್ ಅಧಿಕಾರಿ ಅಚ್ಚರಿಗೊಳ್ಳಲು ಕಾರಣ ಆ ಶವ ಇದ್ದ ಸ್ಥಿತಿ!

ನೈಟಿ ಮತ್ತು ಬ್ರಾ ಸಡಿಲಗೊಂಡು, ದೇಹ ಸೌಂದರ್ಯದ ಎಂಭತ್ತು ಭಾಗ ನಗ್ನವಾಗಿ ಗೋಚರವಾಗುತ್ತಿದೆ.

ಡಾಕ್ಟರ್ ಶವಪರೀಕ್ಷೆ ಮಾಡಿದ ನಂತರ ಅಭಿಪ್ರಾಯ ಹೇಳಿದರು. ಇದಕ್ಕಿಂತ ಮೊದಲು ಇಲಾಖೆಯ ಫೋಟೋಗ್ರಾಫರ್ ಡೆಡ್‌ಬಾಡಿ ಬಿದ್ದಿರುವ ವಿವಿಧ ಭಂಗಿಗಳ ಮತ್ತು ಆ ರೂಮಿನ ನಾಲ್ಕು ಆ್ಯಂಗಲ್‌ಗಳ ಫೋಟೋ ತೆಗೆದಿದ್ದಾನೆ.

ಸಾವಿನ ಸಮಯ ರಾತ್ರಿ ಹತ್ತರಿಂದ ಹನ್ನೊಂದು ಗಂಟೆಯ ಅವಧಿಯಲ್ಲಿ ಆಗಿದೆ. ಸಾವು ಹೇಗಾಗಿರಬಹುದು?

ಸಧ್ಯಕ್ಕೆ ವಿಷ ಪ್ರಯೋಗ ಆಗಿದೆ ಎಂಬುದು ಮೊದಲ ನೋಟದಲ್ಲಿ ಕಂಡು ಬರುತ್ತಿದೆ. ನಿಜ ಕಾರಣ ಪೋಸ್ಟ್ ಮಾರ್ಟಮ್‌ನ ನಂತರ ತಿಳಿಯುತ್ತದೆ.

''ಡಾಕ್ಟರ್, ಸಂಭೋಗ ನಡೆದಿರುವುದೆ?''

''ಸಂಭೋಗ ನಡೆದಿಲ್ಲ. ಆದರೆ ಆ ಪ್ರಯತ್ನ ನಡೆದಿದೆ'' ಎಂದು ದೇಹದ ಕೆಲವು ಕಡೆ ಕಚ್ಚಿರುವ ಮತ್ತು ಪರಚಿರುವ ಗಾಯದ ಗುರುತುಗಳಿವೆ.

ಶಾಲಿನಿ ಚೆಲುವೆಯರಲ್ಲಿ ಚೆಲುವೆ.

ದಂತದ ಬಣ್ಣದ ಮೈಕಾಂತಿ.

ಸೆಕ್ಸ್ ಅಪೀಲ್ ಇರುವ ಮೈಮಾಟ.

ಸೌಂದರ್ಯದಲ್ಲಿ ವಿಶೇಷತೆ ಇದೆ.

ದೇವಗನ್‌ಗೆ ಅನಿಸಿದ್ದೇನು? ಇವಳನ್ನು ಕೊಲೆ ಮಾಡಲು ಬಂದಿದ್ದ ಕೊಲೆಗಾರ, ಎಂತಹ ಗಂಡಸರನ್ನಾದರೂ ಉದ್ರಿಕ್ತರನ್ನಾಗಿ ಮಾಡುವ ಇವಳನ್ನು ಪೂರ್ತಿಯಾಗಿ ಅನುಭವಿಸದೆ ಯಾಕೆ ಕೊಲೆ ಮಾಡಿದ?

ಈ ರೀತಿ ಆಗಿರಬಹುದೆ? ಅಂದರೆ... ಅಂದರೆ ಕೊಲೆಗಾರ ಬಂದ ಕೂಡಲೇ ವಿಷ ಪ್ರಯೋಗ ಮಾಡಿದ್ದಾನೆ. ನಂತರ ಅವಳನ್ನು ಅನುಭವಿಸಲು ಪ್ರಯತ್ನ ಮಾಡಿದ್ದಾನೆ. ವಿಷ ಶೀಘ್ರಗತಿಯಲ್ಲಿ ಪರಿಣಾಮ ಬೀರಿರುವುದರಿಂದ ಸಾವು ಬಂದಿದೆ.

ಶವದ ಜೊತೆ ಸುಖ ಸಂಭೋಗ ನಡೆಸಲು ಸಾಧ್ಯವೆ? ಶವದೊಂದಿಗೆ ಸಂಭೋಗ ನಡೆಸುವವರು ಯಾರು ಗೊತ್ತೆ ?

ಅಘೋರಿ ಬಾಬಾಗಳು. ಕಾಪಾಲಿಕ ಶಾಣ್ಯರು. ಇವರು ಕ್ಷುದ್ರ ಶಕ್ತಿಯನ್ನು ಒಲಿಸಿಕೊಳ್ಳಲು ಶವ ಸಂಭೋಗ ನಡೆಸುತ್ತಾರೆ. ಆಲೋಚನೆ ದಿಕ್ಕು ಬದಲಿಸಿತು.

ಯಾವ ರೀತಿ ವಿಷ ಪ್ರಯೋಗ ಮಾಡಿದ್ದಾನೆ? ಶಕ್ತಿ ಪ್ರಯೋಗ ಮಾಡಿ ಬಲವಂತದಿಂದ ಕುಡಿಸಿದ್ದಾನ ಅಥವಾ ಪ್ರಜ್ಞೆ ತಪ್ಪಿಸಿ ಕುಡಿಸಿದ್ದಾನ ಅಥವಾ ಇಂಜೆಕ್ಷನ್ ಮೂಲಕ ಪ್ರಯೋಗ ಮಾಡಿದ್ದಾನ ಎಂಬ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡು ಎಲ್ಲಾ ಕಡೆ ನೋಡುತ್ತಿದ್ದಾರೆ.

ಮಂಚದ ಬಲಭಾಗದಲ್ಲಿರುವ ಟೀಪಾಯಿಯ ಮೇಲೆ ಸೀಸೆ ಇದೆ. ಎಡಭಾಗದಲ್ಲಿ ಕ್ಯಾಪ್ (ಮುಚ್ಚಳ ಇದೆ) ದೇವಗನ್ ಈಗ ಸೀಸೆಯ ಮೇಲೆ ಕರ್ಚೀಫ್ ಹಾಕಿ ಎತ್ತಿಕೊಂಡು ವಾಸನೆ ನೋಡಿದನು. ರಾಸಾಯನಿಕ ಧಾತು ವಾಸನೆ ಬರುತ್ತಿದೆ...! ಸೀಸೆಯ ಮೇಲೆ ಲೇಬಲ್ ಇದೆ!

ಆ್ಯಂಟಿ ಮಿಲಾರ್-ಡಿ-ಕೆಮಿಕಲ್ ಪಾಯಿಸನ್...! ಇದನ್ನು ರಾಸಾಯನಿಕ ಪ್ರಯೋಗಗಳಲ್ಲಿ ಬಳಸುತ್ತಾರೆ. ಕಂಪನಿಯ ವಿವರಗಳಿವೆ.

ಕಂಪನಿಯ ಪಾಯಿಸನ್ ಪ್ರಾಡಕ್ಟ್ ಶಾಲಿನಿಯ ಕೊಲೆಗಾರನಿಗೆ ಸಿಕ್ಕಿರೋದು ಹೇಗೆ?

ಸರ್ಕಾರದ ನಿಯಂತ್ರಣದಲ್ಲಿರುವ ಈ ಕಪನಿಯಲ್ಲಿ ಪ್ರೊಡಕ್ಷನ್ ಮತ್ತು ಪ್ರಡಕ್ಟ್ ಡೆಲಿವರಿ ಬಗ್ಗೆ ದಾಖಲೆಗಳಿರುತ್ತವೆ. ಮೂವರು ಅಧಿಕಾರಿಗಳು ಪರಿಶೀಲನೆ ಮಾಡಿ ಸೈನ್ ಮಾಡಿದ ನತರ ಡೆಲಿವರಿ ಕೊಡುತ್ತಾರೆ.

ಆ ಕಪನಿಯ ಸೂಪರ್‌ವೈಸರ್, ಮ್ಯಾನೇಜರ್ ಮತ್ತು ಲ್ಯಾಬ್ ಇನ್‌ಚಾರ್ಜ್‌ನ ಎನ್‌ಕ್ವಯರಿ ಮಾಡಬೇಕು ಎಂದುಕೊಳ್ಳುತ್ತಿರುವಾಗಲೇ ಆಕಸ್ಮಿಕವಾಗಿ ಅವನ ದೃಷ್ಟಿಗೆ ಕಂಡು ಬಂದಿತು.

ಅದು ವ್ಯಾನಿಟಿ ಬ್ಯಾಗು! ಅದರ ಮೇಲೆ ಕರ್ಚೀಫ್ ಹಾಕಿ ಎತ್ತಿಕೊಂಡು ನೋಡಿದನು. ಮೊಬೈಲ್ ಹ್ಯಾಂಡ್‌ಸೆಟ್ ಇದೆ. ಡ್ರಗ್ಸ್ ಪ್ಯಾಕೇಟ್‌ಗಳಿವೆ. ಹತ್ತು ಸಾವಿರದಷ್ಟು ಹಣ ಇದೆ. ಅಂದರೆ... ಶಾಲಿನಿ ಡ್ರಗ್ ಅಡಿಕ್ಟ್ ಆಗಿದ್ದಳು. ಈ ಸಾವಿನ ಹಿನ್ನಲೆಯಲ್ಲಿ ಊಹೆ ಮಾಡಲಾಗದ ನಿಗೂಢತೆ ಇದೆ.

ಪೊಲೀಸ್ ಅಧಿಕಾರಿ ತುಂಬಾ ಎಚ್ಚರಿಕೆಯಿಂದ ಗಮನಿಸುತ್ತಿದ್ದಾನೆ. ಸಾವಿಗೆ ಸಂಬಂಧ ಪಡುವಂತ ಯಾವ ಸುಳಿವೂ ಸಹ ಸಿಗಲಿಲ್ಲ ಎಂದು ಹೇಳಬಹುದು. ಕಾರ್ಯಾಚರಣೆ ಪ್ರಾರಂಭವಾಗಿದೆ. ಫಿಂಗರ್ ಪ್ರಿಂಟ್‌ನವರು ಬೆರಳು ಗುರುತು ಮತ್ತು ಹೆಜ್ಜೆ ಗುರುತು ಪಡೆಯುತ್ತಿದ್ದಾರೆ.

ಪಂಚನಾಮೆ ಮಾಡುವ ಮೊದಲು ದೇವಗನ್ ಮತ್ತೊಮ್ಮೆ ಶವದ ಹತ್ತಿರ ಬಂದು, ಎಚ್ಚರಿಕೆಯಿಂದ ಪ್ರತಿ ಅಂಗುಲ, ಅಂಗುಲವನ್ನೂ ಪರೀಕ್ಷೆ ಮಾಡಿದನು.

ಆಕಸ್ಮಿಕವಾಗಿ ಕಂಡಿದ್ದೇನು?

ಮಂಚದ ಅಡಿಯಲ್ಲಿ, ಮಂಚದ ಕಾಲಿನ ಹತ್ತಿರ ಕಂಡು ಬಂದಿತು. ತಾಮ್ರದ ಬಳಿ, ನೆಲದತ್ತ ಬಾಗಿ ಅದರ ಮೇಲೆ ಕರ್ಚೀಫ್ ಹಾಕಿ ಎತ್ತಿಕೊಂಡು ನೋಡಿದನು.

ಎನ್.ಆರ್. ಎಂಬ ಅಕ್ಷರಗಳಿವೆ!

ಇದು ರೌಡಿಗಳು ಧರಿಸುವ ಬಳೆಯ ರೀತಿ ಇದೆ ಎಂಬುದು ನೋಟದಿಂದಲೇ ಗೊತ್ತಾಯಿತು.

ಇದರ ಹಿನ್ನಲೆ ಏನು?

ರೌಡಿಯೊಬ್ಬನ ಕೈವಾಡ ಇದೆ. ಬಹುಶಃ ಅವನು ಪ್ರೊಫೆಷನಲ್ ಕಿಲ್ಲರ್ ಆಗಿರಬೇಕು. ಕೊಲೆ ಮಾಡುವ ಪ್ರಯತ್ನದಲ್ಲಿ ಅಥವಾ ಅವಳೊಡನೆ ಸರಸದಾಟ ಆಡುವ ಸಂದರ್ಭದಲ್ಲಿ ಕೈ ಬಳೆ ಸಡಿಲಗೊಂಡಿದೆ. ಅದರ ತಿರುಪು ಸಡಿಲಗೊಂಡು ಹಿಂದೆ ಸರಿದಿರುವುದು ಗಮನಕ್ಕೆ ಬಂದಿತು.

ಎನ್.ಆರ್. ಅಂದರೆ ಯಾರು?

ಪಿ.ಸಿ.ಗಳಿಗೆ ಸೂಚನೆ ನೀಡಿ, ಪೊಲೀಸ್ ಸ್ಟೇಷನ್‌ನಲ್ಲಿರುವ ಬ್ಲಾಕ್‌ಲಿಸ್ಟ್‌ಅನ್ನು ಪರಿಶೀಲನೆ ಮಾಡಲು ಫೋನ್ ಮಾಡಿ ಹೇಳಿದನು.

ಈ ಸಾವಿನ ಪ್ರಕರಣ ಪ್ರತಿ ಹಂತದಲ್ಲಿ ನಿಗೂಢವಾಗುತ್ತಿದೆ.

ಪೊಲೀಸ್ ಅಧಿಕಾರಿ ಹೊರಗೆ ಬರುವ ಮೊದಲು ಗ್ರಾಮಸ್ಥರ ಸಮಕ್ಷಮದಲ್ಲಿ ಶವದ ಪಂಚನಾಮೆ ಕಾರ್ಯ ಮಾಡಿ ಮುಗಿಸಿದ ನಂತರ, ಹೊರಗೆ ಬಂದು ಇಲ್ಲಿ ಸೇರಿದ್ದ ಶಾಲಿನಿಯ ತವರಿನವರು ಮತ್ತು ಗಂಡನ ಕಡೆಯ ಸಂಬಂಧಿಕರನ್ನು ಗಮನಿಸಿದನು.

''ಶಾಲಿನಿಯನ್ನು ಯಾರು ಕೊಲೆ ಮಾಡಿದ್ದಾರೆ? ಬೇರೆಯವರಿಂದ ಅಂದರೆ ಪ್ರೊಫೆಷನಲ್ ಕಿಲ್ಲರ್ ಮೂಲಕ ಯಾರು ಕೊಲೆ ಮಾಡಿಸಿದ್ದಾರೆ ಎಂಬುದರ ಬಗ್ಗೆ ಏನಾದರೂ ಗೊತ್ತಿರುವುದೆ?''

ಸಾಲಿನಿಯ ತಂದೆ ದುಃಖದಿಂದ ''ನಮಗೆ ಗೊತ್ತಿಲ್ಲ ಸಾರ್. ಆದರೆ... ಆದರೆ ಅಪ್ಸರೆ ರೀತಿ ಇದ್ದ ಮಗಳನ್ನು ಜೈರಾಜ್ ನಂತ ಸಾಮಾನ್ಯನಿಗೆ ಕೊಟ್ಟು ಮದುವೆ ಮಾಡಬಾರದಿತ್ತು. ನಮ್ಮ ಜಾತಿಯಲ್ಲಿ ಸ್ವಂತ ಮನೆ, ತೋಟ ಇರುವ ಮತ್ತು ನಗರದ ಪ್ರತಿಷ್ಠಿತ ಕಂಪನಿಯಲ್ಲಿ ತುಂಬಾ ಸಂಬಳ ಬರುವ ಕೆಲಸದಲ್ಲಿದ್ದ ಎಂಬ ಕಾರಣದಿಂದ ಬಲವಂತ ಮಾಡಿ, ಅವಳಿಗೆ ಇಷ್ಟ ಇಲ್ಲದಿದ್ದರೂ ಮದುವೆ ಮಾಡಿದೆವು.''

''ಸಂಸಾರ ಜೀವನ ಚೆನಾನಗಿರಲಿಲ್ವ?''

''ಅವಳಿಗೆ ತೃಪ್ತಿ ಇರಲಿಲ್ಲ.''

''ಗಂಡ-ಹೆಂಡತಿ ಜಗಳ ಆಡುತ್ತಿದ್ರಾ ?''

''ಅಳಿಯ ಜಗಳ ಆಡುತ್ತಿರಲಿಲ್ಲ. ಇವಳೇ ಕೋಪದಿಂದ ಮಾತಾಡುತ್ತಿದ್ದಳು. ಅವನನ್ನು ಯಾವುದೋ ಕಾರಣದಿಂದ ಬೈಯುತ್ತಿದ್ದಳು. ಇಷ್ಟು ಮಾತ್ರ ನಮಗೆ ಗೊತ್ತಿದೆ.''

''ಆ ಸಂಗತಿ ಗೊತ್ತಿಲ್ವ?''

''ಯಾವ ಸಂಗತಿ ಸಾರ್?''

''ನಿಮ್ಮ ಮಗಳು ಎಲ್ಲಾ ಕೆಟ್ಟ ಚಟ ಮತ್ತು ಚಪಲಗಳಿಗೆ ಅಡಿಕ್ಟ್ ಆಗಿದ್ಲು.''

''ನೀವು ಏನು ಹೇಳ್ತಾ ಇದ್ದೀರ?

''ಶಾಲಿನಿಗೆ ಕುಡಿತ, ಮಾದಕ ವಸ್ತುಗಳ ಮತ್ತು ಧೂಮಪಾನ ಚಟ ಇತ್ತು.''

ಸಂಬಂಧಿಕರು ಗಾಬರಿಯಾಗಿದ್ದಾರೆ. ತಂದೆ ''ಸಾರ್... ನೀವು ಏನು ಹೇಳ್ತಾ ಇದ್ದೀರ?''

''ಮಗಳ ಬಗ್ಗೆ ಗೊತ್ತಿಲ್ಲ ಅಂದ್ರೆ ಆಶ್ಚರ್ಯ ಆಗುತ್ತಿದೆ.''

ಫೋನ್ ಕಾಲ್ ಬಂದಿತು. ಪೊಲೀಸರಿಗೆ ಶಾಲಿನಿಯ ಗಂಡ ಜೈರಾಜ್ ಫೋನ್ ಮಾಡಿದ್ದಾನೆ.

''ಸಾರ್... ನಾನು ಇನ್ನು ಅರ್ಧ ಗಂಟೆಯ ಒಳಗೆ ಅಲ್ಲಿಗೆ ಬರ್ತೀನಿ.''

''ನೀವು ಎಲ್ಲಿದ್ದೀರ?''

''ಕಂಪನಿ ಕೆಲಸದ ಮೇಲೆ ಮೈಸೂರಿಗೆ ಹೋಗಿದ್ದೆ.''

''ಕಂಪನಿ ಡೀಟೈಲ್ಸ್ ಕೊಡಿ. ನಾವು ಇದರ ಬಗ್ಗೆ ತನಿಖೆ ಮಾಡಿ ನಿಮ್ಮ ಹಳಿಕೆಯ ಸತ್ಯಾಂಶ ತಿಳಿಯಬೇಕು.''

ಫೋನ್ ಮೂಲಕವೇ ಎಲ್ಲಾ ವಿವರಗಳನ್ನು ತಿಳಿಸಿದನು.

●●●

ಸೂಪರ್ ಡಿಲಕ್ಸ್ ಬಸ್ಸು ವೇಗವಾಗಿ ಬೆಂಗಳೂರಿನ ಕಡೆ ಹೋಗುತ್ತಿದೆ. ಜೈರಾಜ್ ತಲೆ ಒತ್ತಿಕೊಂಡು ಕುಳಿತಿದ್ದಾನೆ. ತಲೆ ಸಿಡಿಯುತ್ತಿದೆ. ಗೊಂದಲ ಕೊಡುತ್ತಿದೆ. ಕಣ್ಣುಗಳನ್ನು ಮುಚ್ಚಿಕೊಂಡಿದ್ದಾನೆ. ಅವನಿಗೆ ಎಲ್ಲಾ ನೆನಪಾಗುತ್ತಿದೆ. ಹೆಂಡತಿ ಸತ್ತಿದ್ದಾಳೆ. ಇದೇ ಅವನಿಗೆ ಆತ್ಮಸಂತೃಪ್ತಿಯನ್ನು ಉಂಟು ಮಾಡಿದೆ. ಆದರೂ ಗೊಂದಲದ ಕಾರಣದಿಂದ ಚಡಪಡಿಕೆ ಉಂಟಾಗಿದೆ. ಅವನು ತನ್ನ ಪರಮಾಪ್ತ ಗೆಳೆಯನಿಗೆ ಫೋನ್ ಮಾಡಿದನು. ಫೋನ್ ರಿಂಗ್ ಆಗುತ್ತಿದೆ. ಆದರೆ ಅವನು ಅಟೆಂಡ್ ಮಾಡುತ್ತಿಲ್ಲ. ಅವನಿಗೆ ಎಚ್ಚರಿಕೆ ನೀಡಬೇಕು ಎಂದು ಫೋನ್ ಮಾಡುತ್ತಿದ್ದರೂ ಅಟೆಂಡ್ ಮಾಡುತ್ತಿಲ್ಲ.

☞ 10

# ತುಚ್ಛವಾಗಿ ಬೈದಳೆಂದು ತಂಗಿ ಕುತ್ತಿಗೆಗೆ ಭೀಕರವಾಗಿ ಚುಚ್ಚಿ ಚುಚ್ಚಿ ಕೊಂದ ಅಣ್ಣ!

**ಎಸ್‌ಎಸ್‌ಎಲ್‌ಸಿವರೆಗೆ ವ್ಯಾಸಂಗ ಮಾಡಿದ್ದ ಸಣ್ಣ ವಯಸ್ಸಿನಲ್ಲೆ ಕಾರ್ ಮೆಕ್ಯಾನಿಕ್ ಕೆಲಸ ಕಲಿತು ದುಬೈನಲ್ಲಿ ಉದ್ಯೋಗ ಮಾಡಿಕೊಂಡಿದ್ದ ಆತ ಮುಂಗೋಪಿ... ಕಳೆದ ಎರಡು ವರ್ಷಗಳ ಹಿಂದೆ ಕೆಲಸ ಬಿಟ್ಟು ದುಬೈನಿಂದ ವಾಪಸ್ ತನ್ನ ಊರಾದ ಕೊಳ್ಳೇಗಾಲಕ್ಕೆ ಬಂದಿದ್ದ ನಂತರ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದ ಅಲ್ಲಿ ಅದೇನಾಯಿತೋ...! ಕಳೆದ ಒಂದೂವರೆ ತಿಂಗಳ ಹಿಂದೆ ವಾಪಸ್ ಕೊಳ್ಳೇಗಾಲಕ್ಕೆ ಬಂದು ಮತ್ತೆ ದುಬೈಗೆ ಹೋಗುವ ಸಲುವಾಗಿ ಪಾಸ್‌ಪೋರ್ಟ್ ಮಾಡಿಸಿಕೊಳ್ಳಲು ತಯಾರಿ ನಡೆಸುತ್ತಿದ್ದ. ಆತನ ತಂಗಿಯು ಪಿಯುಸಿ ಜೊತೆ ನರ್ಸಿಂಗ್ ತರಬೇತಿ ಪಡೆದಿದ್ದರಿಂದ ಮೈಸೂರಿನ ಖಾಸಗಿ ಸಂಸ್ಥೆಯೊಂದರಲ್ಲಿ ನರ್ಸ್ ಆಗಿ ಕೆಲಸ ಮಾಡಿಕೊಂಡಿದ್ದಳು. ಹಾಗಾಗಿ ಈ ಕುಟುಂಬ ಯಾವುದೇ ತಂಟೆ ತಕರಾರಿಲ್ಲದೆ ನೆಮ್ಮದಿಯಿಂದ ಜೀವನ ನಡೆಸಿಕೊಂಡು ಹೋಗುತ್ತಿತ್ತು. ಆದರೆ ಈ ನೆಮ್ಮದಿ ಹೆಚ್ಚು ದಿನ ಉಳಿಯಲಿಲ್ಲ, ಪ್ರಶಾಂತವಾಗಿದ್ದ ಸಂಸಾರದಲ್ಲಿ ಭಾರಿ ದುರಂತವೊಂದು ನಡೆದು ಹೋಗಿದೆ. ಅಂದು 2025 ಜನವರಿ 01 ಇಡೀ ಜಗತ್ತು ಹೊಸ ವರ್ಷದ ಸಂಭ್ರಮಾಚರಣೆಯಲ್ಲಿದ್ದ ವೇಳೆ ಆ ಮನೆಯಲ್ಲೊಂದು ಹೆಣ ಬಿದ್ದಿದೆ. ಕ್ಷುಲ್ಲಕ ವಿಚಾರಕ್ಕೆ ಕೌಟುಂಬಿಕ ಕಲಹ ನಡೆದು ಅಣ್ಣನೇ ತನ್ನ ಒಡಹುಟ್ಟಿದ ಸಹೋದರಿಯ ಕುತ್ತಿಗೆ ಕೊಯ್ದು ಭೀಕರವಾಗಿ ಹತ್ಯೆ ಮಾಡಿದ್ದಾನೆ. ಸಾಲದ್ದಕ್ಕೆ ಜಗಳ ಬಿಡಿಸಲು ಬಂದ ತಂದೆ, ಅತ್ತಿಗೆ ಮೇಲೂ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ಘಟನೆಯಿಂದಾಗಿ ಬಾಳಿ ಬದುಕ ಬೇಕಾಗಿದ್ದ ಹೆಣ್ಣು ಮಗಳೊಬ್ಬಳು ಒಡಹುಟ್ಟಿದ ಅಣ್ಣನಿಂದಲೇ ನಿಕೃಷ್ಟವಾಗಿ ಕೊಲೆಯಾಗಿ ಹೋಗಿದ್ದಾಳೆ.**

ಹೌದು ಈ ದುರ್ಘಟನೆ ನಡೆದಿರುವುದು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ಪಟ್ಟಣದ ಈದ್ಗಾ ಮೊಹಲ್ಲಾದಲ್ಲಿ ಮೊಹಲ್ಲಾದ ಸೈಯದ್ ಪಾಷಾರವರ ನಾಲ್ಕನೇ ಮಗಳು ಐಮನ್ ಬಾನು (23) ತನ್ನ ಒಡಹುಟ್ಟಿದ ಅಣ್ಣನಿಂದ ಕೊಲೆಯಾದ ಪಾಪದ ಯುವತಿ. ಈಕೆಯ ಅಣ್ಣ ಫರ್ಮಾನ್ ಪಾಷಾ ಕೊಲೆ ಮಾಡಿದ ಆರೋಪಿ. ತಂಗಿಯನ್ನು ಅಮಾನುಷವಾಗಿ ಕೊಂದ ಅಣ್ಣನನ್ನು ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮಾಡಿದ ಘನಘೋರ ತಪ್ಪಿಗೆ ಆರೋಪಿ ಅಣ್ಣ ಜೈಲು ಸೇರಿದ್ದಾನೆ.


ಅಣ್ಣನಿಂದಲೇ ಕೊಲೆಯಾದ ಐಮನ್ ಬಾನು


ಐಮನ್ ಬಾನುವಿನ ಮೃತದೇಹ


ಆರೋಪಿ ಫರ್ಮಾನ್ ಪಾಷಾ

ಕೊಳ್ಳೇಗಾಲ

✍ ಎಸ್. ಸ್ವಾಮಿ


ಸೈಯದ್ ಪಾಷಾ ಹಾಗೂ ಫರ್ಜಾನಾ ಬೇಗಂ ದಂಪತಿಗಳಿಗೆ ಮೂವರು ಹೆಣ್ಣು ಎರಡು ಗಂಡು ಒಟ್ಟು ಐದು ಮಕ್ಕಳು. ಹಿರಿಯ ಮಗ ಸೈಯದ್ ರೋಶನ್, ಎರಡನೇಯವನು ಆರೋಪಿ ಸೈಯದ್ ಫರ್ಮಾನ್ ಪಾಷಾ, ಮೂರನೇಯವಳು ರುಮಾನ ಭಾನು ಅವಳಿಗೆ ಮದುವೆಯಾಗಿ ಗಂಡನ ಮನೆಯಲ್ಲಿದ್ದಾಳೆ, ನಾಲ್ಕನೇಯವಳು ಮೃತೆ ಐಮನ್ ಬಾನು, ಕಿರಿಯವಳು ಬೀಬಿಸಾರ. ಹಿರಿಯ ಮಗ ಸೈಯದ್ ರೋಶನ್ ಗೆ ಕಳೆದ ಆರು ವರ್ಷಗಳ ಹಿಂದೆ ರಾಮನಗರದ ಜಮೀರ್ ಪಾಷ ಮಗಳು ತಸ್ಲಿಮ್ ತಾಜ್ ಎಂಬಾಕೆಯೊಡನೆ ಮದುವೆಯಾಗಿದ್ದು 5 ವರ್ಷದ ಹಾಗೂ 3 ವರ್ಷದ ಎರಡು ಹೆಣ್ಣು ಮಕ್ಕಳಿವೆ. ಮೂರನೇಯ ಮಗಳು ರುಮಾನ ಭಾನು ಬಿಟ್ಟು ಉಳಿದೆಲ್ಲರೂ ಒಂದೇ ಕುಟುಂಬದಲ್ಲಿ ವಾಸಿಸುತ್ತಿದ್ದರು. ತಂದೆ ಸೈಯದ್ ಪಾಷ ಒಳ್ಳೆಯ ಮನುಷ್ಯ. ಕುಟುಂಬ ನಿರ್ವಹಣೆಗೆ ಮೊಹಲ್ಲಾದ ಕೊನೆಯಲ್ಲಿ ಕಬಾಬ್ ಅಂಗಡಿ ಇಟ್ಟುಕೊಂಡು ಜೀವನ ನಿರ್ವಹಿಸುತ್ತಿದ್ದರು. ತಂದೆಗೆ ವಯಸ್ಸಾದ ನಂತರ ಹಿರಿಯ ಮಗ ಸೈಯದ್ ರೋಶನ್ ತಂದೆಯ ಕಸುಬನ್ನು ಮುಂದುವರೆಸಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಿದ್ದ.


ಮೃತಳ ತಂದೆ ಸೈಯದ್ ಪಾಷಾ

ಆರೋಪಿ ಸೈಯದ್ ಫರ್ಮಾನ್ ಮುಂಗೋಪಿ. ಎಸ್‌ಎಸ್‌ಎಲ್‌ಸಿವರೆಗೆ ವ್ಯಾಸಂಗ ಮಾಡಿದ್ದ ಈತ ಸಣ್ಣ ವಯಸ್ಸಿನಲ್ಲೆ ಕಾರ್ ಮೆಕ್ಯಾನಿಕ್ ಕೆಲಸ ಕಲಿತು ದುಬೈನಲ್ಲಿ ಉದ್ಯೋಗ ಮಾಡಿಕೊಂಡಿದ್ದ, ಕಳೆದ ಎರಡು ವರ್ಷಗಳ ಹಿಂದೆ ಕೆಲಸ ಬಿಟ್ಟು ದುಬೈನಿಂದ ವಾಪಸ್ ತನ್ನ ಊರಾದ ಕೊಳ್ಳೇಗಾಲಕ್ಕೆ ಬಂದಿದ್ದ ಫರ್ಮಾನ್ ನಂತರ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದ, ಅಲ್ಲಿ ಅದೇನಾಯಿತು ಕಳೆದ ಒಂದೂವರೆ ತಿಂಗಳ ಹಿಂದೆ ವಾಪಸ್ ಕೊಳ್ಳೇಗಾಲಕ್ಕೆ ಬಂದು ಮತ್ತೆ ದುಬೈಗೆ ಹೋಗುವ ಸಲುವಾಗಿ ಪಾಸ್‌ಪೋರ್ಟ್ ಮಾಡಿಸಿಕೊಳ್ಳಲು ತಯಾರಿ ನಡೆಸುತ್ತಿದ್ದನು. ನಾಲ್ಕನೇಯವಳು ಮೃತೆ ಐಮನ್ ಬಾನು ಪಿ.ಯು.ಸಿ ಜೊತೆ ನರ್ಸಿಂಗ್ ತರಬೇತಿ ಪಡೆದಿದ್ದರಿಂದ ಮೈಸೂರಿನ ಖಾಸಗಿ ಸಂಸ್ಥೆಯೊಂದರಲ್ಲಿ ನರ್ಸ್ ಆಗಿ ಕೆಲಸ ಮಾಡಿಕೊಂಡಿದ್ದಳು. ಹಾಗಾಗಿ ಈ ಕುಟುಂಬ ಯಾವುದೇ ತಂಟೆ ತಕರಾರಿಲ್ಲದೆ ನೆಮ್ಮದಿಯಿಂದ ಜೀವನ ನಡೆಸಿಕೊಂಡು ಹೋಗುತ್ತಿತ್ತು. ಆದರೆ ಈ ನೆಮ್ಮದಿ ಹೆಚ್ಚು ದಿನ ಉಳಿಯಲಿಲ್ಲ ಪ್ರಶಾಂತವಾಗಿದ್ದ ಸಂಸಾರದಲ್ಲಿ ಭಾರಿ ದುರಂತವೊಂದು ನಡೆದು ಹೋಗಿದೆ.


ಎಸ್ಪಿ ಡಾ. ಬಿ.ಟಿ. ಕವಿತಾ


ಡಿವೈಎಸ್ಪಿ ಧರ್ಮೇಂದ್ರ


ಸಿಪಿಐ ಶಿವಮಾದಯ್ಯ


ಪಿಎಸ್‌ಐ ಬಿ.ವಿ. ವರ್ಷ

ಅಂದು 2025 ಜನವರಿ 01 ಇಡೀ ಜಗತ್ತು ಹೊಸ ವರ್ಷದ ಸಂಭ್ರಮಾಚರಣೆಯಲ್ಲಿತ್ತು. ಇತ್ತ ಕೊಳ್ಳೇಗಾಲ ಪಟ್ಟಣದ ಈದ್ಗಾ ಮೊಹಲ್ಲಾದಲ್ಲಿರುವ ಸೈಯದ್ ಪಾಷರವರ ಪಕ್ಕದ ಮನೆಯಲ್ಲಿ ಮದುವೆಯ ಸಂಭ್ರಮವಿತ್ತು. ಇವರ ಹಿರಿಯ ಮಗ ಸೈಯದ್ ರೋಶನ್ ಮಗುವಿಗೆ ಹುಷಾರಿಲ್ಲದ ಕಾರಣ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿಕೊಂಡು ಬಂದಿದ್ದರು. ಸಂಜೆ ವೇಳೆಗಾಗಲೆ ಹಿರಿಯ ಮಗ ಸೈಯದ್ ರೋಶನ್ ಎಂದಿನಂತೆ ಕಬಾಬ್ ಅಂಗಡಿಗೆ ಹೋಗಿದ್ದ, ರಾತ್ರಿ ಸುಮಾರು 9.00 ರ ಸಮಯ ಇತ್ತ ಮನೆಯಲ್ಲಿ ನಿದ್ದೆ ಮಂಪರಿನಲ್ಲಿದ್ದರಿಂದ ಸೈಯದ್ ರೋಶನ್‌ನ 5 ವರ್ಷದ ಹಿರಿಯ ಮಗು ಮಲಗಿಕೊಳ್ಳುವುದರಲ್ಲಿತ್ತು. ಇದೇ ವೇಳೆ ಎರಡನೇ ಮಗ ಆರೋಪಿ ಫರ್ಮಾನ್ ಪಾಷಾ ಮನೆಯ ಹಜಾರದಲ್ಲಿ ಊಟ ಮಾಡುತ್ತಾ ಕುಳಿತಿದ್ದ. ಮನೆಯಲ್ಲಿ ಮಗುವನ್ನು ಮಲಗಿಸಲು ತಯಾರಿ ನಡೆಸುತ್ತಿದ್ದರು. ಇದರಿಂದ ಅಸಮಾಧಾನಗೊಂಡ ಫರ್ಮಾನ್ ಪಾಷಾ ನಾನು ಊಟ ಮಾಡುವವರೆಗೆ ಮಗು ಮಲಗುವುದು ಬೇಡ ಎಚ್ಚರವಾಗಿರಲಿ ಎಂದು ತಗಾದೆ ತೆಗೆದಿದ್ದಾನೆ. ಇದಕ್ಕೆ ಪಾಪ ಸಣ್ಣ ಮಗು ಮಲಗಿಕೊಳ್ಳಲಿ ಬಿಡು ಯಾಕೆ ತೊಂದರೆ ಕೊಡುತ್ತೀಯಾ... ಎಲ್ಲವೂ ಇವನು ಹೇಳಿದ ಹಾಗೆ ನಡೆಯಬೇಕು ಮಲಗಿಕೊಳ್ಳಲಿ ಬಿಡು ಎಂದು ತಂಗಿ ಐಮನ್ ಬಾನು ಆಕ್ಷೇಪ ವ್ಯಕ್ತಪಡಿಸಿದ್ದಾಳೆ. ಈ ವೇಳೆ ಮನೆಯಲ್ಲಿ ಸಣ್ಣದಾಗಿ ಗಲಾಟೆ ಶುರುವಾಗಿದೆ. ಪ್ರಾರಂಭದಲ್ಲಿ ಸಣ್ಣದಾಗಿ ಶುರುವಾದ ಗಲಾಟೆ ಬರುತ್ತಾ ಬರುತ್ತಾ ಜೋರಾಗಿ ವಿಕೋಪಕ್ಕೆ ತಿರುಗಿದೆ. ಈ ನಡುವೆ ಐಮನ್ ಬಾನು ಮಾತಿನ ಭರದಲ್ಲಿ ಅಣ್ಣನನ್ನು ಬಹಳ ತುಚ್ಛವಾಗಿ ಬೈದಿದ್ದಾಳೆ. ಇದರಿಂದ ಉದ್ರಿಕ್ತನಾದ ಫರ್ಮಾನ್ ಪಾಷಾ ಕೋಪದಲ್ಲಿ ಅಡುಗೆ ಮನೆಯಲ್ಲಿದ್ದ ಚಾಕು ತಂದು ತಂಗಿ ಐಮನ್ ಬಾನು ಮೇಲೆ ಹಲ್ಲೆ ಮಾಡಿ ಚಾಕುವಿನಿಂದ ಕುತ್ತಿಗೆಗೆ ಚುಚ್ಚಿ ಚುಚ್ಚಿ ಭೀಕರವಾಗಿ ಇರಿದಿದ್ದಾನೆ. ಘಟನೆಯಿಂದಾಗಿ ಕುಟುಂಬ ಬೆಚ್ಚಿಬಿದ್ದಿದೆ.

ಈ ವೇಳೆ ಜಗಳ ಬಿಡಿಸಲು ಬಂದ ಅತ್ತಿಗೆ ತಸ್ಲಿಮ್ ತಾಜ್‌ಳ ಕುತ್ತಿಗೆಗೂ ಚಾಕುವಿನಿಂದ ಕುಯ್ದು ಮಾರಣಾಂತಿಕ ಹಲ್ಲೆ ಮಾಡಿದ್ದಾನೆ. ಹಾಗೂ ತಡೆಯಲು ಬಂದ ತಂದೆ ಸೈಯದ್ ಪಾಷಾ ಮೇಲೂ ಹಲ್ಲೆ ನಡೆಸಿ ಕೈ ಮುರಿದಿದ್ದಾನೆ. ಘಟನೆಯಿಂದ ಅಸ್ವಸ್ಥಗೊಂಡ ಐಮನ್ ಬಾನು ಹಾಗೂ ಗಾಯಗೊಂಡಿದ್ದ ತಸ್ಲಿಮ್‌ತಾಜ್, ಸೈಯದ್ ಪಾಷಾ ಅವರನ್ನು ಕೂಡಲೇ ಕೊಳ್ಳೇಗಾಲ ಉಪ ವಿಭಾಗ ಆಸ್ಪತ್ರೆಗೆ ಸಾಗಿಸಲಾಗಿತ್ತು. ಐಮನ್ ಬಾನು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ. ಕೂಡಲೆ ಐಮನ್ ಬಾನು ಮೃತದೇಹವನ್ನು ಕೊಳ್ಳೇಗಾಲ ಸರ್ಕಾರಿ ಉಪ


ಕೃತ್ಯ ನಡೆದ ಸ್ಥಳವನ್ನು ಪರಿಶೀಲಿಸುತ್ತಿರುವ ಪೊಲೀಸರು


ಮೃತದೇಹವನ್ನು ಪೊಲೀಸರು ಪರಿಶೀಲಿಸುತ್ತಿರುವುದು

☞15

**6**

ಬಸ್ಸಿನ ವೇಗ ಜಾಸ್ತಿ ಆಯಿತು. ಫೋನ್ ಕಾಲ್ ಬಂದಿತು. ಪೊಲೀಸರಿಂದ ಮಾಹಿತಿ ಬಂದಿದೆ. ಶಾಲಿನಿ ಸತ್ತ ಸಮಯದಲ್ಲಿ ಗಂಡ ಜೈರಾಜ್ ಕಂಪನಿ ಕೆಲಸದ ಮೇಲೆ ಮೈಸೂರಿನ ಬ್ರಾಂಚ್ ಆಫೀಸ್‌ಗೆ ಹೋಗಿದ್ದನು ಮತ್ತು ಎರಡು ದಿನಗಳು ಪೂರ್ತಿ ಅಲ್ಲಿದ್ದನು.

ಪೊಲೀಸ್ ಅಧಿಕಾರಿ ದೇವಗನ್ ''ಮಿಸ್ಟರ್ ಜೈರಾಜ್... ಈ ಕೊಲೆಯಲ್ಲಿ ನಿಮ್ಮ ಪಾತ್ರ ಇಲ್ಲ ಎಂಬುದು ಮೇಲಿನ ನೋಟಕ್ಕೆ ಕಂಡು ಬರುತ್ತಿದೆ. ನಿಮ್ಮ ಹೆಂಡತಿಯ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕು. ಬೇಗ ಬನ್ನಿ.''

''ಆಗಲಿ ಸಾರ್.''

ಅವನು ಬೆರಳಿನಿಂದ, ಹಣೆ ಭಾಗದಲ್ಲಿ ಉಬ್ಬುತ್ತಿರುವ ನರವನ್ನು ತೀಡಿಕೊಂಡು ಕಣ್ಣುಗಳನ್ನು ಮುಚ್ಚಿದನು.

●●●

ಪೊಲೀಸರು ತುಂಬಾ ಕಡಿಮೆಯ ಸಮಯದಲ್ಲಿ ಪತ್ತೆ ಮಾಡಿದ್ದಾರೆ.

ಎನ್.ಆರ್. ಅಂದರೆ ಯಾರು?

ನಿಂಗಪ್ಪ ರಾಜ್! ಅಲಿಯಾಸ್ ನಿಂಗಪ್ಪ...!

ನೈಫ್ ನಿಂಗಪ್ಪ...!

ಕೇವಲ ನಾಲ್ಕು ಗಂಟೆಗಳ ಅವಧಿಯಲ್ಲಿ ರೌಡಿ ನೈಫ್ ನಿಂಗಪ್ಪನನ್ನು ಪತ್ತೆ ಮಾಡಿ ಅರೆಸ್ಟ್ ಮಾಡಿದರು.

ಪೊಲೀಸ್ ಲಾಕಪ್!

ರೌಡಿ ನೈಫ್ ನಿಂಗಪ್ಪನನ್ನು ಲಾಕಪ್‌ನಲ್ಲಿ ಬಂಧಿಸಲಾಗಿದೆ. ಕುರ್ಚಿಯಲ್ಲಿ ಕೂರಿಸಿ ಹಗ್ಗದಿಂದ ಕಟ್ಟಲಾಗಿದೆ. ಬಲ-ಎಡಭಾಗದಲ್ಲಿ ಇಬ್ಬರು ಪಿ.ಸಿ.ಗಳು ನಿಂತಿದ್ದಾರೆ.

ಪೊಲೀಸ್ ಅಧಿಕಾರಿ ದೇವಗನ್ ಬಂದಿರಲಿಲ್ಲ. ಈ ರೌಡಿ ನೈಫ್ ನಿಂಗಪ್ಪ ರಾಜ್.

'ಎನ್.ಆರ್.' ಎಂಬ ಅಕ್ಷರಗಳನ್ನು ತಾಮ್ರದ ಬಳೆಯ ಮೇಲೆ ಮೂಡಿಸಲಾಗಿದೆ. ಅದನ್ನು ಪಿ.ಸಿ.ಗಳು ಅವನ ಮುಂದೆ ಹಿಡಿದಿದ್ದಾರೆ.

ಅದು ಯಾವಾಗ ತನ್ನ ಕೈಯಿಂದ ಜಾರಿತು ಎಂಬುದು ನೆನಪಾಗುತ್ತಿದೆ. ಶರೀರ ಬೆವರಾಡುತ್ತಿದೆ. ದೇಹದಲ್ಲಿ ಕಂಪನವಾಗುತ್ತಿದೆ.

ಪೊಲೀಸ್ ಅಧಿಕಾರಿ ದೇವಗನ್ ಬಂದನು. ಬಂದು ವಿಚಾರಣೆ ಮಾಡುತ್ತಿದ್ದಾನೆ.

ಮುಖದ ಮೇಲೆ ಹ್ಯಾಗಿಂಗ್ ಲೈಟ್‌ನ ಬೆಳಕು ಬೀಳುತ್ತಿದೆ. ಪ್ರಶ್ನೆ ಪ್ರಾರಂಭವಾಯಿತು.

''ಈ ಬಳೆ ನಿನ್ನದೇ ತಾನೆ?''

ಹೆದರುತ್ತಲೇ ತಲೆಯಾಡಿಸಿದನು.

''ಇದು ಎಲ್ಲಿತ್ತು ಗೊತ್ತಾ ?''

''ಅವನು ಪ್ರತಿಕ್ರಿಯೆ ನೀಡಲಿಲ್ಲ.

''ಶಾಲಿನಿ ಎಂಬ ಹೆಂಗಸು ಕೊಲೆಯಾಗಿದ್ದಾಳೆ. ಡೆಡ್ ಬಾಡಿ ಇದ್ದ ರೂಮಲ್ಲಿ ಈ ಬಳೆ ಸಿಕ್ಕಿದೆ. ಮತ್ತೊಂದು ಸಾಕ್ಷಿ ಏನು ಗೊತ್ತಾ ?''

ಅನುಮಾನದಿಂದ ತಲೆಯಾಡಿಸಿದನು.

''ನೀನು ಪೊಲೀಸರ ಬ್ಲಾಕ್‌ಲಿಸ್ಟ್‌ನಲ್ಲಿ ಇರುವ ರೌಡಿ. ನಿನ್ನ ಫಿಂಗರ್ ಮತ್ತು ಫುಟ್ ಪ್ರಿಂಟ್‌ನ ರಿಪೋರ್ಟ್ ಫೈಲ್‌ನಲ್ಲಿದೆ. ಡೆಡ್‌ಬಾಡಿ ಇದ್ದ ಜಾಗದಲ್ಲಿ ಕೆಲವು ಕಡೆ ನಿನ್ನ ಬೆರಳು, ಹೆಜ್ಜೆ ಗುರುತು ಮೂಡಿರೋದು ವರದಿಯಲ್ಲಿ ದಾಖಲಾಗಿದೆ. ನಮಗೆ ನಿನ್ನಿಂದ ನಿಜ ತಿಳಿಯಬೇಕು.''

ಎನ್.ಆರ್. ಭಯಗೊಂಡಿದ್ದಾನೆ.

''ನೀನು ಅಲ್ಲಿಗೆ ಹೋಗಿದ್ದು ನಿಜಾ ತಾನೇ?''

ಅವನು ಮೆಲ್ಲಗೆ ''ಹೌದು ಸಾರ್.''

''ಯಾಕೆ ಹೋಗಿದ್ದೆ?''

ಉತ್ತರಿಸಲು ತಡವರಿಸಿದನು.

ಪಿ.ಸಿ.ಯೊಬ್ಬ ಮುಂದೆ ಬಂದು ದೇವಗನ್ ಕೈಗೆ ಲಾಠಿ ಕೊಟ್ಟನು.

ವಿಪರೀತ ಭಯವಾಗುತ್ತಿದೆ.

ಲಾಠಿ ಗಿರ್ರನೆ ತಿರುಗಿತು.

''ಅದು... ಅದು ಸಾರ್... ನಾನು... ನಾನು ಕೊಲೆ ಮಾಡಲು ಹೋಗಿದ್ದೆ.''

ಇವನ ಹೇಳಿಕೆ ರೆಕಾರ್ಡ್ ಆಗುತ್ತಿದೆ. ಮತ್ತೊಬ್ಬ ಪಿ.ಸಿ. ಬರೆದುಕೊಳ್ಳುತ್ತಿದ್ದಾನೆ.

ದೇವಗನ್ ಗಡುಸಾಗಿ ''ನೀನ್ಯಾಕೆ ಶಾಲಿನಿನಾ ಕೊಲೆ ಮಾಡಿದೆ?''

''ಸಾರ್... ಅದು... ನಾನು...'' ಎಂದು ತಡವರಿಸುತ್ತಿರುವಾಗಲೇ ಗಾಳಿಯಲ್ಲಿ ರಿವ್ವನೆ ಎದ್ದ ಲಾಠಿ ಅವನ ಮಂಡಿ ಚಿಪ್ಪಿನ ಮೇಲೆ ಬಲವಾಗಿ ಅಪ್ಪಳಿಸಿತು.

ಕರ್ಕಶ ಸ್ವರದಲ್ಲಿ ಕಿರುಚಿದನು.

ಶರೀರ ನಡುಗುತ್ತಿದೆ.

ನೋವಿನಿಂದ ಮುಲುಗುತ್ತಿದ್ದಾನೆ.

●●●

ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವ ಜೈರಾಜ್‌ಗೆ ಎಲ್ಲಾ ನೆನಪಾಗುತ್ತಿದೆ. ಫ್ಲ್ಯಾಶ್ ಬ್ಯಾಕ್ ಘಟನೆ.

●●●

ಕಳಿಂಗ ಬಾರ್ ಅಂಡ್ ರೆಸ್ಟೋರೆಂಟ್‌ನ, ಸಪರೇಟ್ ಕ್ಯಾಬಿನ್‌ನಲ್ಲಿ ಕುಳಿತಿದ್ದಾನೆ ಜೈರಾಜ್. ಅಪರೂಪಕ್ಕೆ ಒಂದು ಸಲ ಬಿಯರ್ ಕುಡಿಯುತ್ತಾನೆ ವಿನಹ ಬೇರೆ ಅಭ್ಯಾಸ ಇಲ್ಲ. ಈಗವನು ಬಂದಿರೋದು ಆತ್ಮೀಯ ಗೆಳೆಯ, ಚಡ್ಡಿ ದೋಸ್ತ್ ಆಗಿರುವ ನಿಂಗಪ್ಪ ರಾಜ್‌ನನ್ನು ಮೀಟ್ ಮಾಡಲು. ಆ ರೌಡಿ ಕುಡುಕ ತಾನೆ? ಟೈಂಪಾಸ್ ಮಾಡಲು ಬಿಯರ್ ಮತ್ತು ಮಸಾಲ ಪಪ್ಪಡ್ ತರಿಸಿಕೊಂಡನು.

ಅರ್ಧ ಗಂಟೆ ಕಳೆಯಿತು. ನಿಂಗಪ್ಪ ರಾಜ್ ಬಂದನು.

ಇವನ ಹತ್ತಿರ ಬರುತ್ತಾ ''ಏನಯ್ಯಾ ದೊರೆ ಬಾರ್‌ಗೆ ಬರಲು ಯಾಕೆ ಹೇಳ್ದೆ. ನೀನು ನನ್ನಂತೆ ಕುಡುಕ ಅಲ್ಲವಲ್ಲ'' ಎಂದನು.

''ಈಗ ನೀನೇನು ತಗೋತೀಯ?''

''ಅಂದ್ರೆ ಗುಂಡಿನ ಪಾರ್ಟಿ ಪ್ರಾರಂಭವಾದ ಮೇಲೆ ಕಾರಣ ಹೇಳ್ತೀಯ?''

''ಕಾರಣ ಇಲ್ಲಿ ಹೇಳಲ್ಲ. ನೀನು ಗುಂಡು ಹಾಕಿದ ಮೇಲೆ ಬೇರೆ ಜಾಗಕ್ಕೆ ಕರ್‍ಕೊಂಡು ಹೋಗ್ತೀನಿ.''

''ಅಂತಹ ಸೀಕ್ರೇಟ್ ಏನು?''

''ಕಾರಲ್ಲಿ ಹೋಗುವಾಗ ಹೇಳ್ತೀನಿ.''

ನಿಂಗಪ್ಪ ರಾಜ್ ತನ್ನ ಬ್ರಾಂಡ್ ವಿಸ್ಕಿ ಮತ್ತು 'ಚಿಕನ್ 65' ತರಿಸಿಕೊಂಡು ಪ್ರಾರಂಭ ಮಾಡಿದನು.

ಜೈರಾಜ್ ಈಗ ಮೊಬೈಲ್ ಆನ್ ಮಾಡಿ ಫೋಟೋ ತೋರಿಸಿದನು. ಚಿತ್ತಾಕರ್ಷಕ ಚೆಲುವೆ.

ಅವನು ''ಏ... ನಿನ್ನ ಹೆಂಡತಿ ಶಾಲಿನಿ ಅಲ್ವ...? ಇವಳ ಫೋಟೋ ನನಗ್ಯಾಕೆ ತೋರಿಸುತ್ತಿದ್ದೀಯ ನಿನ್ನ ಹೆಂಡತಿನ ತುಂಬಾ ಸಲ ನೋಡಿದ್ದೀನಿ'' ಎಂದನು.

''ಇವಳ ವಿಚಾರ ಮಾತಾಡ್ಬೇಕು.''

ಅವನು ಆಶ್ಚರ್ಯದಿಂದ ''ನಿನ್ನ ಹೆಂಡತಿ ವಿಚಾರ ನನ್ನ ಹತ್ತಿರ ಯಾಕೆ ಮಾತಾಡ್ಬೇಕು?''

''ಕಾರಣ ಇದೆ ಫ್ರೆಂಡ್.''

''ಕಮಾನ್ ಹೇಳು.''

''ನೀನು ಬೇಗ ಕುಡಿದು ಮುಗಿಸು'' ಎಂದಾಗ ಆ ಕೆಲಸ ಮಾಡಿದನು. ಬಿಲ್ ಪೇ ಮಾಡಿ ಈಗ ಅಲ್ಲಿಂದ ಹೊರಗೆ ಬಂದನು.

ಕಾರು ಚಲಿಸುತ್ತಿದೆ.

''ನಿಂಗಪ್ಪ... ನೀನು ಇಲ್ಲಿಯತನಕ ಕೊಲೆಗಳನ್ನು ಮಾಡಿದ್ದರೂ ಪೊಲೀಸರ ಬಲೆಗೆ ಬಿದ್ದಿಲ್ಲ. ಈಗ ಅದೇ ವ್ಯವಹಾರದ ವಿಚಾರ ಮಾತಾಡ್ತೀನಿ.''

''ಕೊಲೆ... ವ್ಯವಹಾರ... ಏನೋ... ಏನದು... ಯಾಕೆ ಏನೇನೋ ಮಾತಾಡ್ತೀಯ?''

''ಕೊಲೆ ಮಾಡಲು ಎಷ್ಟು ಹಣ ಡಿಮ್ಯಾಂಡ್ ಮಾಡ್ತೀಯ?''

''ಅದೆಲ್ಲಾ ನಿನಗ್ಯಾಕೆ?''

''ವ್ಯವಹಾರ ಮಾಡಲು ಬಂದಿರೋದ್ರಿಂದ.''

''ಏನು... ಏನಂದೆ?''

''ನಾನು ಹೇಳುವ ವ್ಯಕ್ತಿನ ನೀನು ಕೊಲೆ ಮಾಡ್ಬೇಕು. ಎಷ್ಟು ಹಣ ಕೊಡ್ಬೇಕು.''

ಅವನು ಆಶ್ಚರ್ಯದಿಂದ ''ಏನು... ನೀನು ಕೊಲೆ ಮಾಡುಸ್ತೀಯ?''

''ಹೌದು... ಕೊಲೆ ಅನಿವಾರ್ಯ.''

''ಯಾರನ್ನ ಯಾವ ಉದ್ದೇಶದಿಂದ ಕೊಲೆ ಮಾಡಿಸಲು ಟ್ರೈ ಮಾಡುತ್ತಿದ್ದೀಯ?''

''ನಿನ್ನ ಪೇಮೆಂಟ್ ಹೇಳು.''

''ಪೇಮೆಂಟ್ ವಿಚಾರ ಇರಲಿ. ಯಾರನ್ನ ಕೊಲೆ ಮಾಡ್ಬೇಕು ಅಂತ ಹೇಳು.''

''ಈಗ ತಾನೇ ನೀನು ಮೊಬೈಲ್‌ನಲ್ಲಿ ಒಬ್ಬಳ ಫೋಟೋ ನೋಡಿದ್ದೀಯ ಅಲ್ವ? ಅವಳನ್ನ ನೀನು ಕೊಲೆ ಮಾಡ್ಬೇಕು.''

ಪ್ರೊಫೆಷನಲ್ ಕಿಲ್ಲರ್ ರೌಡಿ ನಿಂಗಪ್ಪ ರಾಜ್ ಬೆಚ್ಚಿಬಿದ್ದನು.

''ಏ... ಅವಳು ನಿನ್ನ ಹೆಂಡತಿ.''

''ಅವಳನ್ನ ಕೊಲೆ ಮಾಡ್ಬೇಕು.''

ರೌಡಿ ''ಹತ್ತಿರ ಸರಿಯುತ್ತಾ ''ನಿನ್ನ ಗುಣ ಮತ್ತು ಸ್ವಭಾವ ನನಗೆ ಗೊತ್ತಿದೆ. ಬಲವಾದ ಕಾರಣ ಮತ್ತು ಹಿನ್ನಲೆ ಇಲ್ಲದೆ ಕೊಲೆ ಮಾಡಿಸುವ ನಿರ್ಧಾರಕ್ಕೆ ಬರೋಲ್ಲ. ಕಮಾನ್... ಶಾಲಿನಿನ ಯಾಕೆ ಕೊಲೆ ಮಾಡಿಸಲು ತೀರ್ಮಾನಿಸಿದ್ದೀಯ?''

ಜೈರಾಜ್ ನಿಟ್ಟುಸಿರು ಬಿಟ್ಟನು. ಶಾಲಿನಿ ಎಂತಹ ಚಪಲಗಾತಿ, ಕಾಮದಾಹದ ಹೆಣ್ಣು ಎಂದು ಹೇಳುತ್ತಿದ್ದಾನೆ.

ಶಾಲಿನಿ ಚೆಲುವೆಯರಲ್ಲಿ ಚೆಲುವೆ.

ಗಂಡ ಸರಿಯಾದ ಜೋಡಿ ಅಲ್ಲ.

ಬಾಹ್ಯರೂಪದಲ್ಲಿ ಅವರಿಬ್ಬರಲ್ಲಿ ಸಾಮ್ಯತೆ ಇರಲಿಲ್ಲ ಎಂಬುದು ನಿಜ. ಮೊದಲ ರಾತ್ರಿಯ ಮಿಲನದಲ್ಲಿ ಅವಳ ಅಸಹಜವಾದ, ವಿಪರೀತ ಎನಿಸುವ ಕಾಮದಾಹದ ಅನುಭವ ಆಗಿತ್ತು. ಅವಳು ಬಟ್ಟೆ ಬದಲಿಸುವ ರೀತಿಯಲ್ಲಿ ಗಂಡಸರನ್ನು ಬದಲಿಸುತ್ತಿದ್ದಳು.

ಜಾತಿ ಮುಖ್ಯ ಅಲ್ಲ! ಅವಳ ವಿಪರೀತ ಕಾಮದಾಹವನ್ನು ತಣಿಸುವಂತ ಬಲಿಷ್ಠ ಗಂಡಸು ಯಾರೇ ಆಗಿದ್ದರೂ ಸಹ ಬಲೆ ಬೀಸಿ ಕರೆಸಿಕೊಳ್ಳುತ್ತಿದ್ದಳು.

ನನಗೆ ಇದು ಗೊತ್ತಾಗಿದ್ದು ಯಾವಾಗ ಗೊತ್ತೆ ? ನನ್ನ ಜೊತೆ ಕೆಲಸ ಮಾಡುತ್ತಿದ್ದ, ಕೈ ಕೆಳಗಿನ ಅಧಿಕಾರಿ ಡಿಸೋಜಾನಿಂದ. ಅವನು ಕನ್ನಡದ ಆ ಕಾಲದ ವಿಲನ್ ಕಮ್ ಹೀರೋ ಆಗಿದ್ದ ಟೈಗರ್ ಪ್ರಭಾಕರ್ ರೀತಿಯಲ್ಲಿತ್ತು ಅವನ ಬಾಡಿ ಶೇಪ್. ನ್ಯೂವ್ ಈಯರ್ ಡೇ ಫಂಕ್ಷನ್‌ನಲ್ಲಿ ಕುಡಿತದ ಅಮಲಿನಲ್ಲಿ ಎಲ್ಲಾ ಹೇಳಿದ್ದ...!

ನನ್ನ ಹೆಂಡತಿ ಅವನನ್ನು ನಾಲ್ಕು ರಾತ್ರಿ ಕರೆಸಿಕೊಂಡಿದ್ದಳಂತೆ. ನನಗೆ ಅವಮಾನ, ನಾಚಿಕೆ ಆಗಿತ್ತು. ಆ ಬ್ರಾಂಚ್‌ನಲ್ಲಿ ಇರಲಾರದೆ ಬೇರೆ ಬ್ರಾಂಚ್‌ಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡಿದ್ದೆ. ನನಗೆ ತಿಳಿದಂತೆ ಅವಳು, ಹದಿನೆಂಟರ ಪ್ರಾಯದ ಯುವಕರನ್ನೂ ಸಹ ಬಿಡುತ್ತಿರಲಿಲ್ಲ.

ಅವಳಿಗೆ ವಿದೇಶಿ ಗಂಡಸರ ಜೊತೆ ಆಸೆ ತೀರಿಸಿಕೊಳ್ಳಬೇಕೆಂಬ ಹಂಬಲ ತೀವ್ರವಾಗಿತ್ತು. ಅವಳ ಸೆಕ್ಸ್‌ಲಿಂಕ್ ವಿಚಾರ ತಿಳಿದ ಕೂಡಲೇ ನಾನು ಅವಳ ಜೊತೆ ಸೇರುತ್ತಿರಲಿಲ್ಲ. ಅವಳಿಗೆ ನನ್ನ ಬಗ್ಗೆ ತಿರಸ್ಕಾರ ಇತ್ತು. ಅವಳನ್ನ ತೃಪ್ತಿಪಡಿಸಲಾರದ ನಾನು ಗಂಡಸಲ್ಲ ಎಂದು ವ್ಯಂಗ್ಯವಾಗಿ ಮಾತಾಡುತ್ತಿದ್ದಳು.

ಎಷ್ಟು ಕಾಲ ಸಹಿಸಲಿ? ಅವಳಿಗೆ ಕುಡಿತ, ಧೂಮಪಾನ, ಡ್ರಗ್ಸ್ ಚಟ ಇತ್ತು. ಇದನ್ನೆಲ್ಲಾ ಅವಳ ತವರಿನವರಿಗೂ ಹೇಳಿರಲಿಲ್ಲ. ಇನ್ನು ಇವಳ ಜೊತೆ ಬಾಳಲಾರೆ ಎಂದು ಅನಿಸಿದ್ದರಿಂದ ಕೊಲೆ ಮಾಡಿಸುವ ನಿರ್ಧಾರಕ್ಕೆ ಬಂದಿದ್ದೀನಿ. ನೀನೊಬ್ಬ ಪ್ರೊಫೆಷನಲ್ ಕಿಲ್ಲರ್. ಅವಳನ್ನು ಕೊಲೆ ಮಾಡು ನಿನ್ನ ಪೇಮೆಂಟ್ ಎಷ್ಟು ಅಂತ ಹೇಳು ಕೊಡ್ತೀನಿ.

ಹಲವಾರು ಕೊಲೆಗಳನ್ನು ಮಾಡಿರುವ ನಿಂಗಪ್ಪ ರಾಜ್ ಅನುಕಂಪದಿಂದ ಗೆಳೆಯನ ಕಡೆ ನೋಡುತ್ತಾ ''ನಿನ್ನಿಂದ ಹಣ ತೆಗೆದುಕೊಳ್ಳಲಾರೆ. ಆದಷ್ಟು ಬೇಗ ಅವಳನ್ನು ಕೊಲೆ ಮಾಡ್ತೀನಿ'' ಎಂದನು.

ಮರ್ಡರ್ ಪ್ಲಾನ್ ಮಾಡಿದರು.

ಜೈರಾಜ್ ''ನಾನು ಶುಕ್ರವಾರ, ಶನಿವಾರ ಕಂಪನಿ ಕೆಲಸದ ಮೇಲೆ ಮೈಸೂರಿಗೆ ಹೋಗ್ತೀನಿ. ಈ ಎರಡು ದಿನಗಳಲ್ಲಿ ನೀನು ಕೊಲೆ ಮಾಡಿರಬೇಕು'' ಎಂದನು.

ಅವಳ ಪ್ರೋಗ್ರಾಂ ಬಗ್ಗೆ ತಿಳಿದುಕೊಂಡನು. ಜೈರಾಜ್ ಇವನಿಗೆ ತನ್ನ ಮನೆಯ ಡೋರ್‌ಲಾಕ್ ಕೀ ಕೊಟ್ಟನು...!

ಡೋರ್ ಓಪನ್ ಮಾಡಿ ಕೊಲೆ ಮಾಡಿದ ನಂತರ ಮೊದಲಿನಂತೆ ಲಾಕ್ ಮಾಡಿ ಹೊರಗೆ ಬಾ. ನಿನ್ನ ಬೆರಳು ಗುರುತು ಅಥವಾ ಹೆಜ್ಜೆ ಗುರುತುಗಳ ಬಗ್ಗೆ ಎಚ್ಚರಿಕೆ ಇರಲಿ.''

●●●

ಪೊಲೀಸ್ ಲಾಕಪ್! ಮಂಡಿ ಭಾಗ ಅಲ್ಲಾಡುವ ರೀತಿ ಲಾಠಿಯಿಂದ ಬಡಿದಿದ್ದರಿಂದ ನೋವಿನಿಂದ ಕಿರುಚುತ್ತಾ ಒದ್ದಾಡಿದ್ದನು. ನಂತರ ನೋವಿನಿಂದ ನರಳುತ್ತಲೇ ಎಲ್ಲಾ ಸಂಗತಿ ಹೇಳಿದನು.

ಪೊಲೀಸ್ ಅಧಿಕಾರಿ ''ಅಂದರೆ... ನೀನು... ನೀನು ಅವಳಿಗೆ ವಿಷ ಪ್ರಯೋಗ ಮಾಡಿ ಕೊಲೆ ಮಾಡಿದೆ ಅಲ್ವ?''

ನಿಂಗಪ್ಪ ರಾಜ್ ಬೆಚ್ಚಿಬಿದ್ದನು.

''ಕೊಲೆ ಮಾಡುವ ಮೊದಲು ಅವಳನ್ನು ಅನುಭವಿಸಿದ್ದೀಯ. ಜೈರಾಜ್ ಡೋರ್ ಲಾಕ್ ಕೀ ಕೊಟ್ಟಿದ್ದರಿಂದ ನಿನ್ನ ಕೆಲಸ ಸುಲಭವಾಗಿದೆ.''

ಅವನು ಗಾಬರಿ, ಆತುರ, ಉದ್ವೇಗದಿಂದ ''ಕೊಲೆ ಮಾಡುವ ಉದ್ದೇಶದಿಂದ ಹೋಗಿದ್ದೆ. ಅವಳು ಸೌಂದರ್ಯದಿಂದ ಪ್ರಚೋದಿತನಾದೆ. ಹಲವಾರು ಗಂಡಸರು ಅನುಭವಿಸಿದ್ದಾರೆ. ಕೊಲೆ ಮಾಡುವ ಮೊದಲು ನಾನು ಇವಳನ್ನು ಅನುಭವಿಸುತ್ತೇನೆ'' ಅಂತ ಸ್ವಲ್ಪ ಹೊತ್ತು ರೋಮಾನ್ಸ್ ಮಾಡಿದೆ.''

''ಓಕೆ ಆಮೇಲೆ...''

''ನನ್ನ ಒರಟಾಟದ ಕಾಮ ಉನ್ಮಾದತೆಗೂ ಅವಳು ಎಚ್ಚರಗೊಳ್ಳಲಿಲ್ಲ. ನನಗೆ ಅನುಮಾನ ಬಂದು ಪರೀಕ್ಷೆ ಮಾಡಿದೆ. ಮುಖ ಮತ್ತು ದೇಹದ ಕೆಲವು ಕಡೆ ನೀಲಿ ಬಣ್ಣದ ಛಾಯೆ ಆವರಿಸಿತ್ತು. ನಾನು ನಾಡಿಬಡಿತ, ಉಸಿರಾಟ ಪರೀಕ್ಷೆ ಮಾಡಿದೆ. ಅವಳು ಬದುಕಿರಲಿಲ್ಲ. ಭಯ ಉಂಟಾಗಿ ಅಲ್ಲಿಂದ ಬಂದುಬಿಟ್ಟೆ ಸಾರ್.''

ಈ ಹೇಳಿಕೆ ಮುಗಿಯುತ್ತಿರುವಾಗಲೇ ಪಿ.ಸಿ.ಯೊಬ್ಬ ಬಂದು ಫಿಂಗರ್ ಪ್ರಿಂಟ್ ಮತ್ತು ಲ್ಯಾಬ್ ರಿಪೋರ್ಟ್ ಕೊಟ್ಟರು. ಲ್ಯಾಬ್ ರಿಪೋರ್ಟ್. ಅವಳ ರಕ್ತದಲ್ಲಿ ಆ್ಯಂಟಿ ಮಿಲಾರ್ ಕೆಮಿಕಲ್ ಪಾಯಿಸನ್ ಬೆರೆತಿದ್ದರಿಂದ, ಇದು ಶೀಘ್ರ ಪರಿಣಾಮಕಾರಿ ವಿಷ ಆಗಿರೋದ್ರಿಂದ ಸಾವು ಬಂದಿದೆ.

ಫಿಂಗರ್ ಪ್ರಿಂಟ್ ರಿಪೋರ್ಟ್! ವಿಷದ ಸೀಸೆಯ ಮೇಲೆ ಮೃತಳ ಬೆರಳಿನ ಗುರುತುಗಳು ಮಾತ್ರ ಮೂಡಿರೋದು ವರದಿಯಿಂದ ದೃಢವಾಗಿದೆ. ಸಾವು ಸಮಸ್ಯೆಯಾಗಿದೆ.

ಪೊಲೀಸ್ ಅಧಿಕಾರಿ ದೇವಗನ್ ಆಗ ಮತ್ತೊಮ್ಮೆ ಜೈರಾಜ್ ಮನೆಗೆ ಹೋಗಿ, ಡೆಡ್‌ಬಾಡಿ ಇದ್ದ ರೂಮನ್ನು ಅರ್ಧ ಗಂಟೆ ಹುಡುಕಾಡಿದನು. ಅಲ್ಲೇ... ಅಲ್ಲೇ ಇತ್ತು. ಆದರೆ ಗಮನಿಸಿರಲಿಲ್ಲ ಮತ್ತು ಆ ಜಾಗ ಹುಡುಕಿರಲಿಲ್ಲ. ದಿಂಬಿನ ಅಡಿಯಲ್ಲಿ ಪತ್ರ ಇದೆ. ಶಾಲಿನಿಯ ಅಂತಿಮ ಪತ್ರ. ಆ ಪತ್ರದಲ್ಲಿ ಏನಿದೆ? ಪೊಲೀಸ್ ಅಧಿಕಾರಿಗಳಲ್ಲಿ ನನ್ನ ಅಂತಿಮ ಮನವಿಯನ್ನು ಮತ್ತು ಯಾರಿಗೂ ತಿಳಿಯದಿರುವ ಪರಮ ರಹಸ್ಯವನ್ನು ತಿಳಿಸುತ್ತಿದ್ದೇನೆ. ಆ ರಹಸ್ಯ ಏನು?

ನಾನು ಸ್ವಯಂ ಪ್ರೇರಣೆಯಿಂದ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೆ ಬಂದಿದ್ದೀನಿ. ನನ್ನ ಸಾವಿಗೆ ಯಾರೂ ಕಾರಣರಲ್ಲ. ನನಗೆ ಪ್ರಾಯ ಬಂದಾಗಲಿಂದ ಕಾಮದ ಬಗ್ಗೆ ವಿಪರೀತ ಕ್ರೇಜ್ ಇತ್ತು. ವೆರೈಟಿ ಸುಖವನ್ನು ಬಯಸುತ್ತಿದ್ದೆ. ನನ್ನ ಗಂಡ ಒಳ್ಳೆಯವರು. ಆದರೆ ಒಬ್ಬ ಗಂಡಸಿನಿಂದ ನಾನು ತೃಪ್ತಳಾಗುತ್ತಿರಲಿಲ್ಲ. ಮದುವೆಗೆ ಮೊದಲು ಸುಖದ ಅನುಭವ ಮಾಡಿಕೊಂಡಿದ್ದೆ. ಮದುವೆಯಾದ ಮೇಲೂ ಸಹ ಹಲವಾರು ಗಂಡಸರ ಜೊತೆ ಸೇರುತ್ತಿದ್ದೆ. ನನ್ನ ಆತ್ಮಹತ್ಯೆಯ ನಿರ್ಧಾರಕ್ಕೆ ಇದು ಕಾರಣ ಅಲ್ಲ...!

ನನಗೆ ಏಡ್ಸ್ ಇತ್ತು ! ಅನುಮಾನ ಬಂದು ಪರೀಕ್ಷೆ ಮಾಡಿಸಿಕೊಂಡಿದ್ದೆ. ಇದು ದೃಢವಾಯಿತು. ವಿದೇಶಿ ಗಂಡಸರ ಜೊತೆ ನಾಲ್ಕು ಸಲ ಸೇರಿದ್ದರಿಂದ ಇದು ನನಗೂ ಬಂದಿತ್ತು. ಈ ಭಯಂಕರ ಕಾಯಿಲೆಯಿಂದ ನರಳುತ್ತಾ ಸಾಯಲಾರೆ. ಸಾಕು... ಸಾಕು... ಈ ಜನ್ಮಕ್ಕೆ ಸಾಕಾಗುವಷ್ಟು ಸುಖ ಅನುಭವಿಸಿದ್ದೇನೆ. ನನ್ನ ಗಂಡನಿಗೆ ಈ ಕಾಯಿಲೆ ಅಂಟಿರಲಾರದು. ಯಾಕೆ ಅಂದರೆ ಮದುವೆಯಾಗಿ ಒಂದು ತಿಂಗಳು ಮಾತ್ರ ಅವರ ಜೊತೆ ಸೇರಿದ್ದೆ. ನನಗೆ ಈ ಕಾಯಿಲೆ ಬಂದಿದ್ದು ಒಂದು ವರ್ಷದ ನಂತರ. ನಾನು ಈ ಅಸಹ್ಯಕರ ಬದುಕಿಗೆ, ಏಡ್ಸ್ ಕಾಯಿಲೆಗೆ ಗುಡ್‌ಬೈ ಹಳಿ ಈ ಲೋಕದಿಂದ ದೂರಾಗುತ್ತಿದ್ದೇನೆ – ಶಾಲಿನಿ.

## ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ & ಸಿಬ್ಬಂದಿಗಳ ಮಿಂಚಿನ ಕಾರ್ಯಾಚರಣೆ...

# ಮಹಾ ಹರಾಮಿ ತ್ರಿಮೂರ್ತಿ ಕಳ್ಳರ ಬಂಧನ; 2 ಲಕ್ಷ ರೂ. ಸ್ವತ್ತು ವಶಕ್ಕೆ

**ಮೈಮುರಿದು ನಡುಬಗ್ಗಿಸಿ ದುಡಿಯಲಾರದ ಐವರು ಐನಾತಿಗಳು ಸೇರಿ ಕಳ್ಳತನಕ್ಕೆ ಇಳಿದಿದ್ದರು. ವೈನ್‌ಶಾಪ್, ಬಾರ್ ಮತ್ತು ದ್ವಿಚಕ್ರ ಹಾಗೂ ಇನ್ನಿತರ ವಾಹನಗಳ ಬಿಡಿ ಭಾಗಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳನ್ನೇ ಟಾರ್ಗೆಟ್ ಮಾಡಿ ಸದ್ದಿಲ್ಲದೇ ಹಣ ಎಗರಿಸುವುದಲ್ಲದೇ ಮೋಟಾರ್ ಬೈಕ್‌ಗಳನ್ನು ಕದ್ದುಕೊಂಡು ಪರಾರಿ ಆಗುತ್ತಿದ್ದರು. ಕಳ್ಳರ ತಂಡದ ಬಗ್ಗೆ ಖಚಿತ ಮಾಹಿತಿ ಆಧರಿಸಿ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ನೇತೃತ್ವದಲ್ಲಿ ಪಿಎಸ್‌ಐಗಳಾದ ಎಸ್.ಆರ್. ಕಣವಿ, ಹೆಚ್.ಕೆ. ನರಳೆ ಮತ್ತು ಸಿಬ್ಬಂದಿಗಳು ಮಿಂಚಿನ ಕಾರ್ಯಾಚರಣೆ ಕೈಗೊಂಡು ಮೂವರು ಕಳ್ಳರನ್ನು ಬಂಧಿಸಿ ಅವರಿಂದ 2 ಲಕ್ಷ ರೂ.ಗಳ ಸ್ವತ್ತನ್ನು ಜಪ್ತಿ ಮಾಡಿಕೊಂಡಿದ್ದಾರೆ. ಮೋಟಾರ್ ಬೈಕ್ ಸಮೇತ ಪರಾರಿಯಾಗಿರುವ ಇನ್ನಿಬ್ಬರ ಕಳ್ಳರ ಬಂಧನಕ್ಕೆ ಬಲೆ ಬೀಸಲಾಗಿರುವ ಪ್ರಕರಣ ಬೆಳಗಾವಿ ಜಿಲ್ಲೆ ಮೂಡಲಗಿ ತಾಲ್ಲೂಕಿನ ಘಟಪ್ರಭಾ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**


ಮಹಾ ಹರಾಮಿ ತ್ರಿಮೂರ್ತಿ ಕಳ್ಳರಾದ ಮಲ್ಲಪ್ಪ ಪ್ರಭು ಹಮ್ಮಿನವರ, ಅಪ್ಪಯ್ಯ ಬಸವರಾಜ ಹಣಮನ್ನವರ, ಅಜೀತ ಹಣಮಂತ ಗಿಡ್ಡಪ್ಪಗೋಳ

**ಬೆಳಗಾವಿ**
✍ ಮನ್ನಾಪೂರ

ಐನಾತಿ ಕಳ್ಳರು ಚಾಪೆಯ ಕೆಳಗೆ ತೂರಿದರೆ, ಘಟಪ್ರಭಾದ ಚಾಣಾಕ್ಷ ಮತ್ತು ಧಾಡಸಿ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಮತ್ತು ಪಿಎಸ್‌ಐಗಳಾದ ಎಸ್. ಆರ್. ಕಣವಿ, ಹೆಚ್.ಕೆ. ನರಳೆ ಮತ್ತು ಚತುರ ಸಿಬ್ಬಂದಿಗಳು ಸೇರಿಕೊಂಡು ರಂಗೋಲಿ ಕೆಳಗೆ ನುಗ್ಗಿ ತ್ರಿಮೂರ್ತಿ ಖತರ್‌ನಾಕ್ ಕಳ್ಳರನ್ನು ಬಂಧಿಸಿದ್ದಾರೆ. ಇನ್ನಿಬ್ಬರು ಪೊಲೀಸರ ಕಣ್ತಪ್ಪಿಸಿ ಪರಾರಿಯಾಗಿದ್ದಾರೆ. ಅವರಿಬ್ಬರ ಬಂಧನಕ್ಕೆ ಈಗಾಗಲೇ ಖೆಡ್ಡಾ ತೊಡಲಾಗಿದೆ.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

**ವೈನ್‌ಶಾಪ್, ಬಾರ್‌ಗಳಲ್ಲಿ ಕಳ್ಳತನ...**

ಇತ್ತೀಚಿಗೆ ದಂಡಾಪೂರ ಕ್ರಾಸ್‌ನಲ್ಲಿರುವ ಎಂಎಸ್‌ಐಎಲ್‌ನ ವೈನ್‌ಶಾಪ್‌ಗೆ ರಾತ್ರಿ ವೇಳೆ ಯಾರೋ ಕಳ್ಳರು ನುಗ್ಗಿ ಕೌಂಟರ್‌ನಲ್ಲಿದ್ದ ಹಣ ಕೆಲವು ಮದ್ಯದ ಬಾಟಲ್‌ಗಳನ್ನು ಕಳ್ಳತನ ಮಾಡಿದ್ದಾರೆ ಎಂಬ ದೂರು ದಾಖಲಾಗಿತ್ತು. ಇದಲ್ಲದೇ ಸಿಂಧಿಕುರಬೇಟ್ ಕ್ರಾಸ್‌ನಲ್ಲಿರುವ ವೈನ್‌ಶಾಪ್‌ಗೂ ಕೂಡಾ ನುಗ್ಗಿ ಅಲ್ಲೂ ಕೂಡಾ ಕೌಂಟರ್‌ನಲ್ಲಿದ್ದ ಹಣ ಮತ್ತು ಮದ್ಯದ ಬಾಟಲ್‌ಗಳನ್ನು ಕಳ್ಳತನ ಮಾಡಿರುವ ದೂರು ಘಟಪ್ರಭಾ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು.


ಡಿವೈಎಸ್ಪಿ ಡಿ.ಹೆಚ್. ಮುಲ್ಲಾ


ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ


ಪಿಎಸ್‌ಐ (ಕಾ.ಸು) ಎಸ್.ಆರ್. ಕಣವಿ


ಪಿಎಸ್‌ಐ (ಕ್ರೈಂ) ಹೆಚ್.ಕೆ. ನರಳೆ

ಎರಡು ಕಳ್ಳತನ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರು ಇದರ ಕುರಿತಾಗಿ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಗೋಕಾಕದ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರೊಂದಿಗೆ ಸಮಾಲೋಚಿಸಿ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡರು.

**ವಿಶೇಷ ತನಿಖಾ ತಂಡ ರಚನೆ...**

ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಪಿಎಸ್‌ಐಗಳಾದ ಎಸ್. ಆರ್. ಕಣವಿ, ಹೆಚ್. ಕೆ. ನರಳೆ ಮತ್ತು ಕ್ರೈಂ ವಿಭಾಗದಲ್ಲಿ ಸಾಕಷ್ಟು ಪರಿಣಿತ ಸಿಬ್ಬಂದಿಗಳಾದ ರಾಮಕೃಷ್ಣ ಗಿಡ್ಡಪ್ಪಗೋಳ, ಕೆ.ಆರ್. ಬಬಲೇಶ್ವರ, ಆರ್.ಕೆ. ಹೋಳ್ಕರ, ರಾಜು ಧುಮಾಳ, ಬಿ.ಎಸ್. ನಾಯಿಕ, ಭೀಮಶಿ ತಳವಾರ, ಎಲ್.ಎಂ. ಪೂಜೇರಿ, ಎಲ್. ಎಲ್. ಚಿಕ್ಕೋಡಿ ಇವರನ್ನೊಳಗೊಂಡ ವಿಶೇಷ ತನಿಖಾ ತಂಡವನ್ನು ರಚಿಸಿ ಅದರ ನೇತೃತ್ವವನ್ನು ಸ್ವತಃ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ವಹಿಸಿಕೊಂಡು ಅಗತ್ಯ ನಿರ್ದೇಶನಗಳನ್ನು ನೀಡಿದ್ದರು. ಡಿವೈಎಸ್ಪಿ ಮುಲ್ಲಾ ವಿಶೇಷ ನಿರ್ದೇಶನಗಳನ್ನು ಸತತವಾಗಿ ನೀಡಿದ್ದರು. ಅಂದುಕೊಂಡಂತೆ ಶರವೇಗದಲ್ಲಿ ವಿಶೇಷ ತನಿಖಾ ತಂಡ ಎಲ್ಲಾ ಮೂಲಗಳಿಂದ ಖಚಿತ ಮಾಹಿತಿ ಆಧರಿಸಿ ಕಳ್ಳರ ಬೆನ್ನು ಬಿದ್ದಿತ್ತು . ಕಳ್ಳರ ಕುಂಡಲಿಯನ್ನು ಅಂಗೈಯಲ್ಲಿರಿಸಿಕೊಂಡು ಬಂಧನಕ್ಕೆ ಬಲೆ ಬೀಸಲಾಯಿತು.

**ತ್ರಿಮೂರ್ತಿ ಕಳ್ಳರ ಬಂಧನ...**

ವಿಶೇಷ ತನಿಖಾ ತಂಡದ ಖಚಿತ ಮಾಹಿತಿಯಂತೆ ಚಿಕ್ಕೋಡಿ ತಾಲ್ಲೂಕಿನ ಜಾಗನೂರ ಗ್ರಾಮದ ಅಪಾಯಕಾರಿ ಕಳ್ಳನಾದ ಮಲ್ಲಪ್ಪ ಪ್ರಭು ಹಮ್ಮಿನವರ (22 ವ) ಎಂಬಾತನನ್ನು ರವಿವಾರ ದಿ. 11.01.2025ರಂದು ತಮ್ಮ ವಶಕ್ಕೆ ತೆಗೆದುಕೊಂಡು ಪೊಲೀಸ್ ಭಾಷೆಯಲ್ಲಿ ವಿಚಾರಣೆಗೆ ಗುರಿಪಡಿಸಿದಾಗ ಆತ ಎಲ್ಲವನ್ನು ಗಿಳಿಪಾಠದಂತೆ ಹೇಳಿ ತನ್ನೊಂದಿಗೆ ಸಾರಾಯಿ ಚಟಕ್ಕೆ ಜತೆಗೂಡಿ ಕಳ್ಳತನಗಳಲ್ಲಿ ಒಂದಾದ ನಾಲ್ಕು ಜನರ ಹೆಸರನ್ನು ಹೇಳಿದನು. ಅದರಂತೆ ಕಾರ್ಯಪ್ರವೃತ್ತರಾದ ವಿಶೇಷ ತನಿಖಾ ತಂಡದ ಸಿಬ್ಬಂದಿಗಳು ಅಪ್ಪಯ್ಯ ಬಸವರಾಜ ಹಣಮನ್ನವರ (21 ವ) ಮತ್ತು ಅಜೀತ ಹಣಮಂತ ಗಿಡ್ಡಪ್ಪಗೋಳ (20 ವ) ಎಂಬಿಬ್ಬರು ಐನಾತಿಗಳನ್ನು ವಶಕ್ಕೆ ಪಡೆದುಕೊಂಡರು. ಆದರೆ ಇನ್ನಿಬ್ಬರು ಪೊಲೀಸರು ಬರುವ ಸುಳಿವು ತಿಳಿದುಕೊಂಡು ಪರಾರಿಯಾದರು. ಪರಾರಿಯಾದ ಇಬ್ಬರ ಬಂಧನಕ್ಕೂ ಬಲೆ ಬೀಸಲಾಗಿದೆ.

**2 ಲಕ್ಷ ರೂ. ಸ್ವತ್ತು ವಶಕ್ಕೆ...**

ತ್ರಿಮೂರ್ತಿ ಐನಾತಿ ಕಳ್ಳರನ್ನು ವಿಚಾರಣೆ ನಡೆಸಿದ ಇನ್ಸ್‌ಪೆಕ್ಟರ್ ಮುಲ್ಲಾ ಇವರಿಂದ ಸತ್ಯ ಬಾಯಿ ಬಿಡಿಸಿದರು. ಹುಕ್ಕೇರಿ, ಸಂಕೇಶ್ವರ, ರಾಯಭಾಗ ವ್ಯಾಪ್ತಿಗಳಲ್ಲಿ ವಾಹನಗಳ ಬಿಡಿ ಭಾಗಗಳ ಅಂಗಡಿಯಲ್ಲಿ ಕಳ್ಳತನ ಮಾಡಿದ್ದನ್ನು ಒಪ್ಪಿಕೊಂಡರು. ಬಂಧಿತರು ವೈನ್ ಶಾಪ್‌ಗಳಲ್ಲಿ ಮಾಡಿದ್ದ ಖತರ್‌ನಾಕ್ ಕಳ್ಳತನ ರೋಚಕವಾಗಿತ್ತು. ಬಂಧಿತರಿಂದ ನಗದು, ಬಂಗಾರ, ಮೋಟಾರ್ ಬೈಕ್ ಸೇರಿದಂತೆ ಸುಮಾರು 2 ಲಕ್ಷ ರೂ. ಮೌಲ್ಯದ ಸ್ವತ್ತನ್ನು ವಶಪಡಿಸಿಕೊಂಡಿದ್ದಾರೆ. ತ್ರಿಮೂರ್ತಿ ಕಳ್ಳರು ಈಗಾಗಲೇ ಜೈಲು ಸೇರಿದ್ದಾರೆ.

**ಶ್ಲಾಘನೆ...**

ಘಟಪ್ರಭಾ, ಹುಕ್ಕೇರಿ, ರಾಯಭಾಗ, ಸಂಕೇಶ್ವರ ವ್ಯಾಪ್ತಿಗಳಲ್ಲಿ ಸಾರ್ವಜನಿಕರಿಗೆ ತೀವ್ರ ಆತಂಕ ಸೃಷ್ಟಿಸಿದ್ದ ಮಹಾಹರಾಮಿ ಐನಾತಿ ತ್ರಿಮೂರ್ತಿ ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾದ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ಎಸ್.ಆರ್. ಕಣವಿ, ಹೆಚ್.ಕೆ. ನರಳೆ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆಗೆ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅಭಿನಂದಿಸಿ ಶ್ಲಾಘಿಸಿದ್ದಾರೆ. ಘಟಪ್ರಭಾ ಪೊಲೀಸರ ಕಾರ್ಯಾಚರಣೆಯನ್ನು ಪ್ರಜ್ಞಾವಂತ ಸಾರ್ವಜನಿಕರು ಕೊಂಡಾಡಿದ್ದಾರೆ. ☯


ಮಹಾ ಐನಾತಿ ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾದ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ಎಸ್.ಆರ್. ಕಣವಿ ಮತ್ತು ಹೆಚ್.ಕೆ. ನರಳೆ ಮತ್ತು ಸಿಬ್ಬಂದಿಗಳು


ಸಿಬ್ಬಂದಿಗಳಾದ ರಾಮಚಂದ್ರ, ಗಿಡ್ಡಪ್ಪಗೋಳ, ಆರ್.ಕೆ. ಹೋಳ್ಕರ, ರಾಜು ಧುಮಾಳ, ಬಿಎಸ್. ನಾಯಿಕ ಹಾಗೂ ಭೀಮಶಿ ತಳವಾರ

# ಕುರಿಗಾಯಿ ಮಹಿಳೆಯನ್ನು ಕೊಂದು ಮೈಮೇಲಿನ ಒಡವೆ ದೋಚಿದ ಪಾಪಿ!

4 ☜

ಅನುಮಾನ ವ್ಯಕ್ತಪಡಿಸಿರುವುದು ಹಾಗೂ ವೈದ್ಯರು ನೀಡಿರುವ ವರದಿ ಆಧಾರದ ಮೇಲೆ ಮಹಿಳೆ ಮೈಮೇಲಿನ ಒಡವೆಗಳ ಆಸೆಗಾಗಿ ಯಾರೋ ಅಪರಿಚಿತ ವ್ಯಕ್ತಿಗಳು ಕತ್ತು ಹಿಸುಕಿ ಕೊಲೆ ಮಾಡಿ ನಂತರ ಶವದ ಮೈಮೇಲಿನ ಒಡವೆಗಳನ್ನು ಕಿತ್ತುಕೊಂಡು ಪರಾರಿಯಾಗಿರುವ ಬಗ್ಗೆ ಸಾಕ್ಷಿ, ಆಧಾರಗಳು ಸಿಕ್ಕಿರುವುದರಿಂದ ಪಿಐ ರಂಗ ಸ್ವಾಮಯ್ಯನವರು ಆರೋಪಿಗಳನ್ನು ಪತ್ತೆಹಚ್ಚಲು ಮುಂದಿನ ಕ್ರಮಕ್ಕಾಗಿ ಹಿರಿಯ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಿದ್ದು ಎಸ್ಪಿ ಕೆ.ಎಂ. ಶಾಂತರಾಜು, ಡಿವೈಎಸ್ಪಿ ಪಾಂಡುರಂಗರವರ ಮಾರ್ಗದರ್ಶನದಲ್ಲಿ ಬೇತಮಂಗಲ ಠಾಣೆಯ ಪಿಎಸ್ಐ ಗುರುರಾಜ ತಿಂತಾಕಲ, ಕ್ಯಾಸಂಬಳ್ಳಿ ಠಾಣೆಯ ಪಿಎಸ್ಐ ಸಂಗಮೇಶ್, ಸಿಬ್ಬಂದಿ ವರ್ಗದವರಾದ ರೈಟರ್ ಮಹೇಂದ್ರ, ಹೆಚ್‌ಸಿ ಶ್ರೀನಿವಾಸ್, ಗಜೇಂದ್ರ, ವೇಣುಗೋಪಾಲ್, ಸತೀಶ್‌ರೆಡ್ಡಿ, ಪವನ್, ನಾಗರಾಜ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಪ್ರಕರಣದ ಜಾಡು ಹಿಡಿದ ಕ್ರೈಂ ತಂಡವು ಸುಮಾರು ಹದಿನೈದು ದಿನಗಳ ಕಾಲ ಹಲವು ಆಯಾಮಗಳಲ್ಲಿ ತನಿಖೆ ನಡೆಸಿದರೂ ಏನು ಪ್ರಯೋಜನವಾಗಲಿಲ್ಲ.


ರೈಟರ್ ಮಹೇಂದ್ರ, ಹೆಚ್‌ಸಿಗಳಾದ ಗಜೇಂದ್ರ, ವೇಣುಗೋಪಾಲ್ ಹಾಗೂ ಶ್ರೀನಿವಾಸ್

ಮೃತಳ ಗಂಡ ನಾರಾಯಣಪ್ಪನವರು ಹೆಡಂತಿಯ ಒಡವೆಗಳು ನಾಪತ್ತೆಯಾಗಿರುವ ಬಗ್ಗೆ ತಿಳಿಸಿದ್ದು, ಅದರಂತೆ ಬೇತಮಂಗಲ ಹಾಗೂ ಕ್ಯಾಸಂಬಳ್ಳಿಯಲ್ಲಿನ ಕೆಲವು ಗಿರವಿ ಅಂಗಡಿ ಮಾಲೀಕರನ್ನು ಭೇಟಿಯಾಗಿ ವಿಚಾರಣೆ ಮಾಡಲಾಗಿ ಬೇತಮಂಗಲ ಗಿರವಿ ಅಂಗಡಿಯೊಂದರಲ್ಲಿ ಮೃತ ಮಹಿಳೆಯ ಮೈಮೇಲಿನ ಒಡವೆಗಳು ಪತ್ತೆಯಾಗಿದ್ದು, ಅವುಗಳನ್ನು ಸುಶೀಲಮ್ಮನ ಗಂಡ ನಾರಾಯಣಪ್ಪನವರು ಗುರುತಿಸಿದ ನಂತರ ಗಿರವಿ ಅಂಗಡಿಯಲ್ಲಿನ ಸಿಸಿ ಕ್ಯಾಮರಾವನ್ನು ಪರಿಶೀಲಿಸಿದ್ದಾಗ ಇದೇ ಜಂಗಮಾನಹಳ್ಳಿಯ ನವೀನ್‌ರೆಡ್ಡಿ ಎನ್ನುವ ವ್ಯಕ್ತಿಯು ಗಿರವಿ ಅಂಗಡಿಗೆ ಬಂದು ಒಡವೆಗಳನ್ನು ಇಟ್ಟು ಹಣ ತೆಗೆದುಕೊಂಡು ಹೋಗಿರುವುದು ಗೊತ್ತಾಗುತ್ತದೆ. ಈ ನವೀನ್‌ರೆಡ್ಡಿಯು ಸುಶೀಲಮ್ಮ ನಾಪತ್ತೆಯಾಗಿರುವ ದಿನ ಮನೆಯವರ ಜೊತೆ ಅರಣ್ಯ ಪ್ರದೇಶಕ್ಕೆ ಹೋಗಿ ಹುಡುಕಾಡಿ ಶವ ಸಿಕ್ಕ ದಿನದಿಂದ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಡೆಸಿ ಸ್ಮಶಾನದಲ್ಲಿ ಶವಸಂಸ್ಕಾರ ನಡೆಸಿ ಎಲ್ಲರೂ ಮನೆಗೆ ಬರುವವರೆಗೂ ಮೃತಳ ಮನೆಯವರ ಜೊತೆ ದುಃಖದಿಂದಲೇ ಓಡಾಡಿಕೊಂಡಿದ್ದನು. ಜೊತೆಗೆ ಪೊಲೀಸರು ವಿಚಾರಣೆಗೆಂದು ಊರಿಗೆ ಬಂದಾಗಲೆಲ್ಲ ಸರಿಯಾದ ಸಮಯಕ್ಕೆ ಮೃತ ಸುಶೀಲಮ್ಮನ ಮನೆಗೆ ಹಾಜರಾಗಿ ನಡೆಯುತ್ತಿದ್ದ ವಿದ್ಯಮಾನಗಳನ್ನು ಗಮನಿಸುತ್ತಾ ಇವನ ಮೇಲೆ ಯಾವುದೇ ಸ್ವಲ್ಪವು ಸಂಶಯ ಬರದ ರೀತಿಯಲ್ಲಿ ನಡೆದುಕೊಂಡಿದ್ದನು. ಯಾವಾಗ ಸುಶೀಲಮ್ಮನ ಸಾವು ಇದೊಂದು ಕೊಲೆ ಎಂದು ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗುತ್ತಿದ್ದಂತೆ ನವೀನ್‌ರೆಡ್ಡಿ ಹಳ್ಳಿ ಬಿಟ್ಟು ಬೆಂಗಳೂರು ಸೇರಿಕೊಂಡನು.

## ಬಂಗಾರದ ಒಡವೆಗಾಗಿ ಕೊಲೆ

ಕುರಿಗಾಯಿ ಸುಶೀಲಮ್ಮನನ್ನು ಕೊಲೆ ಮಾಡಿ ಆಕೆಯ ಮೈಮೇಲಿದ್ದ ಬಂಗಾರದ ಒಡವೆಗಳನ್ನು ದೋಚಿಕೊಂಡು ಹೋಗಿ ಗಿರವಿ ಅಂಗಡಿಯಲ್ಲಿಟ್ಟು ಬಂದ ಹಣವನ್ನು ಸಾಲ ಕೊಟ್ಟವರಿಗೆ ಪಾವತಿಸಿರುವ ಬಗ್ಗೆ ಮಾಹಿತಿಯನ್ನು ಕಲೆ ಹಾಕಿದ ಕ್ರೈಂ ತಂಡವು ಆರೋಪಿ ನವೀನ್ ರೆಡ್ಡಿ (30)ಯನ್ನು ವಶಕ್ಕೆ ಪಡೆಯಲು ಬಲೆ ಬೀಸಿದರು. ಆದರೆ ಸುಶೀಲಮ್ಮನನ್ನು ಕೊಲೆ ಮಾಡಿ ಆಕೆಯ ಮೈಮೇಲಿನ ಒಡವೆಗಳನ್ನು ಕದ್ದುಕೊಂಡು ಹೋಗಿರುವ ಆರೋಪಿ ಬಗ್ಗೆ ಸುಳಿವು ಸಿಕ್ಕಿದ್ದು ಪೊಲೀಸರು ಹುಡುಕುತ್ತಿದ್ದಾರೆಂದು ತಿಳಿಯುತ್ತಿದ್ದಂತೆ ನವೀನ್‌ರೆಡ್ಡಿ ಹಳ್ಳಿ ಬಿಟ್ಟಿರುವ ವಿಚಾರ ತಿಳಿಯಿತು. ಬೆಂಗಳೂರಿನಲ್ಲಿರುವ ಆರೋಪಿ ನವೀನ್‌ರೆಡ್ಡಿ ಬಗ್ಗೆ ಪೊಲೀಸ್ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಪೊಲೀಸರು ಬಹಳ ಜಾಣ್ಮೆಯಿಂದ ಆರೋಪಿಯನ್ನು ತಮ್ಮ ಬಲೆಗೆ ಬೀಳಿಸಿಕೊಳ್ಳಲು ನವೀನ್ ರೆಡ್ಡಿಗೆ ಫೋನ್ ಮಾಡಿ ಆರೋಪಿ ಸಿಕ್ಕಿ ಹಾಕಿಕೊಂಡಿದ್ದಾನೆ. ನಾವು ತನಿಖೆಗಾಗಿ ಹಳ್ಳಿಗೆ ಬಂದಾಗಲೆಲ್ಲ ನೀನು ನಮ್ಮ ಜೊತೆಯಲ್ಲಿಯೇ ಇದ್ದು ಎಲ್ಲವನ್ನು ನೋಡುತ್ತಿದ್ದೆ. ಈಗ ಮಹಜರ್‌ಗೆ ನಿನ್ನದೊಂದು ಸಹಿ ಬೇಕು ಬೇಗ ಹಳ್ಳಿಗೆ ಬರುವಂತೆ ಕರೆಯುತ್ತಾರೆ. ಅದಕ್ಕೆ ನವೀನ್‌ರೆಡ್ಡಿ ನಾನು ಬೇರೆ ಊರಿಗೆ ಕೆಲಸಕ್ಕೆ ಹೋಗಿದ್ದೇನೆ. ಮಧ್ಯಾಹ್ನ ಬರುವುದಾಗಿ ಹೇಳಿದನು. ಅದರಂತೆ ನವೀನ್‌ರೆಡ್ಡಿಯು ಜಂಗಮಾನಹಳ್ಳಿಗೆ ಬಂದನು. ಅವನನ್ನು ವಶಕ್ಕೆ ಪಡೆದ ಪೊಲೀಸರು ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆಗೆ ಒಳಡಿಸಲಾಗಿ ಪೊಲೀಸರು ತೋಡಿರುವ ಖೆಡ್ಡಕ್ಕೆ ತಾನೇ ಹೋಗಿ ಬಿದ್ದಿರುವ ವಿಚಾರ ತಿಳಿಯುತ್ತಿದ್ದಂತೆ ಶರಣಾದ ನವೀನ್ ರೆಡ್ಡಿಯು ನಾನು ಸಾಕಷ್ಟು ಸಾಲವನ್ನು ಮಾಡಿಕೊಂಡಿದ್ದೆನು. ಸಾಲ ಕೊಟ್ಟಿರುವವರು ಹಣಕ್ಕಾಗಿ ಪೀಡಿಸುತ್ತಿದ್ದರು. ತೆಗೆದುಕೊಂಡಿದ್ದ ಸಾಲದ ಹಣವನ್ನು ತೀರಿಸಲಾಗದೆ ತುಂಬಾ ಕಷ್ಟಪಡುತ್ತಿದ್ದೆನು. ನಮ್ಮ ಮನೆಯ ಮುಂದೆಯೇ ದಿನವು ಬೆಳಿಗ್ಗೆ ಮತ್ತು ಸಂಜೆ ನಾರಾಯಣಪ್ಪ ಮತ್ತು ಸುಶೀಲಮ್ಮ ದಂಪತಿಗಳು ಕುರಿಗಳನ್ನು ಕರೆದುಕೊಂಡು ಅರಣ್ಯದಲ್ಲಿ ಮೇಯಿಸಲು ಹೋಗುತ್ತಿದ್ದರು. ಸುಶೀಲಮ್ಮನ ಮೈಮೇಲೆ ಬಂಗಾರದ ಒಡವೆಗಳು ಇರುವುದು ಗೊತ್ತಿತ್ತು.


ಸುಶೀಲಮ್ಮನ ಮೃತದೇಹ

ಆದರೆ ಆಕೆಯ ಜೊತೆಯಲ್ಲಿ ಗಂಡ ಇರುವುದರಿಂದ ಯಾವ ರೀತಿ ಒಡವೆಗಳನ್ನು ಕಿತ್ತುಕೊಂಡು ಹೋಗಬೇಕೆಂದು ಪ್ಲಾನ್ ಮಾಡಿಕೊಂಡು ಸಮಯಕ್ಕಾಗಿ ಕಾದಿದ್ದೆನು. ಕಳೆದ ಒಂದು ತಿಂಗಳ ಹಿಂದೆ ಒಂದು ದಿನ ಬೆಳಿಗ್ಗೆ ಸುಶೀಲಮ್ಮನವರು ಮಾತ್ರ ಕುರಿಗಳನ್ನು ಕರೆದುಕೊಂಡು ಅರಣ್ಯದ ಕಡೆ ಹೊರಟಿದ್ದರು. ಆಗ ನಾನು ಏನಕ್ಕ ಒಬ್ಬರೇ ಹೋಗುತ್ತಿದ್ದೀರಿ ನಾರಾಯಣಣ್ಣ ಎಲ್ಲಿ ಎಂದು ಕೇಳಿದೆನು. ಅದಕ್ಕೆ ಸುಶೀಲಮ್ಮ ಹೊಲದಲ್ಲಿ ಕೆಲಸ ಇದೆ ಎಂದು ಬೆಳಿಗ್ಗೆಯೇ ಹೋದರು ಅದಕ್ಕೆ ನಾನೊಬ್ಬಳೆ ಕುರಿಗಳನ್ನು ಮೇಯಿಸಲು ಹೋಗುತ್ತಿರುವುದಾಗಿ ಹೇಳಿದರು. ಆಗ ಇದೇ ಸರಿಯಾದ ಸಮಯವೆಂದು ತಿಳಿದು, ಸುಶೀಲಮ್ಮನನ್ನು ಹಿಂಬಾಲಿಸಿದ್ದೆನು. ಆಕೆ ಕುರಿಗಳನ್ನು ಅರಣ್ಯ ಪ್ರದೇಶದಲ್ಲಿ ಬಿಟ್ಟು ಒಂಟಿಯಾಗಿ ನಿಂತುಕೊಂಡಿದ್ದಳು. ತಕ್ಷಣ ಆಕೆಯ ಹಿಂದೆ ಹೋಗಿ ಕೈಯಿಂದ ಜೋರಾಗಿ ಕೆಳಗೆ ತಳ್ಳಿ ಆಕೆ ಬಳಿ ಇದ್ದ ಟವಲ್‌ನಿಂದ ಕುತ್ತಿಗೆ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿ ನಂತರ ಮೈಮೇಲಿದ್ದ ಒಡವೆಗಳನ್ನು ದೋಚಿಕೊಂಡು ಹೋಗಿ ಮರುದಿನ ಗಿರವಿ ಅಂಗಡಿಯಲ್ಲಿ ಇಟ್ಟು ಹಣ ತೆಗೆದುಕೊಂಡು ಕೆಲವರಿಗೆ ಸಾಲದ ಹಣ ಕೊಟ್ಟಿರುವ ಬಗ್ಗೆ ಹೇಳಿ ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾನೆ.

ವಿಚಾರಣೆ ನಂತರ ಆರೋಪಿ ನವೀನ್‌ರೆಡ್ಡಿಯನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರ್ ನಡೆಸಿದ ಮೇಲೆ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ☯

# ಕೈನಾಯಕರ ಒಳ ಜಗಳಕ್ಕೆ ವಿರಾಮ ಯಾವಾಗ?

2 ☜

ಮತ್ತೊಂದು ರಗಳೆ ಹುಟ್ಟಿಕೊಂಡಿದೆ.

ಇದುವರೆಗೆ ಇದ್ದ ಶೀತಲಸಮರ ಸ್ಫೋಟಗೊಳ್ಳುವ ಮಟ್ಟಕ್ಕೆ ಹೋಗುವ ಲಕ್ಷಣ ಕಾಣಿಸುತ್ತಿದೆ. ಬೆಳಗಾವಿ ಸಾಹುಕಾರರು ಅಂತಲೇ ಕರೆಯಿಸಿಕೊಳ್ಳುತ್ತಿರುವ ಜಾರಕಿಹೊಳಿ ಕುಟುಂಬದ ಪ್ರಾಬಲ್ಯವನ್ನು ಕಡಿಮೆ ಮಾಡಿ ಅಲ್ಲಿ ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಮುನ್ನಲೆಗೆ ತರುವ ಪ್ರಯತ್ನಗಳಾಗುತ್ತಿವೆ ಎಂಬ ಆರೋಪ ಜಾರಕಿಹೊಳಿ ಕುಟುಂಬದಲ್ಲಿದೆ. ಇದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ತಂತ್ರ ಎನ್ನುವುದು ಕೂಡ ಅಷ್ಟೇ ಸತ್ಯ. ಜಾರಕಿಹೊಳಿ ಕುಟುಂಬದ ಪ್ರಾಬಲ್ಯ ಕುಗ್ಗುವಂತೆ ಮಾಡಿದರೆ ಅದರಿಂದ ಲಾಭವಿದೆ. ಕಳೆದ ಬಾರಿ ಸಮ್ಮಿಶ್ರ ಸರ್ಕಾರ ಪತನಗೊಂಡು ಬಿಜೆಪಿ ಅಧಿಕಾರಕ್ಕೆ ಬರಲು ಜಾರಕಿಹೊಳಿ ಕುಟುಂಬದ ಪ್ರಧಾನ ಪಾತ್ರವಿತ್ತು.

ಇಲ್ಲಿ ಜಾರಕಿಹೊಳಿ ಕುಟುಂಬವನ್ನು ಬದಿಗೆ ಸರಿಸಿ ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಮುನ್ನಲೆಗೆ ತಂದರೆ ಮುಂದೆ ಪಕ್ಷಕ್ಕಾಗಲೀ ತಮಗಾಗಲೀ ಯಾವುದೇ ತೊಂದರೆಯಿಲ್ಲ ಎಂಬ ಸತ್ಯ ಡಿಕೆಶಿಗೆ ತಿಳಿದಿದೆ. ಆದರೆ ಎಲ್ಲೋ ಒಂದು ಕಡೆ ತಮ್ಮನ್ನು ತುಳಿಯಲಾಗುತ್ತಿದೆ ಎಂಬ ಸತ್ಯ ಸಚಿವರಾಗಿರುವ ಸತೀಶ್ ಜಾರಕಿಹೊಳಿಗಿದೆ. ಹೀಗಾಗಿಯೇ ಅವರು ಕಳೆದ ಕೆಲವು ಸಮಯಗಳಿಂದ ಎಲ್ಲೆಡ ಪ್ರವಾಸ ಮಾಡಿ ಹಿಂದುಳಿದ ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸುತ್ತಿರುವುದು ಕಂಡು ಬರುತ್ತಿದೆ. ಅಷ್ಟೇ ಅಲ್ಲದೆ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆಯೂ ಧ್ವನಿ ಎತ್ತಿದ್ದರು.

ಇದೀಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಬೆಳಗಾವಿ ಜಿಲ್ಲೆಯಲ್ಲಿನ ಪಕ್ಷದ ಕಚೇರಿ ನಿರ್ಮಾಣಕ್ಕೆ ಸಂಬಂಧಿಸಿದಂತೆ ಲಕ್ಷ್ಮಿಹೆಬ್ಬಾಳ್ಕರ್‌ಅವರು ಸಚಿವರಾದ ಬಳಿಕ ಕಟ್ಟಡ ನಿರ್ಮಾಣ ಚುರುಕಾಗಿ ಮುಗಿದಿದೆ ಎಂಬ ಮೆಚ್ಚುಗೆಯ ಮಾತು ಸಚಿವ ಸತೀಶ್ ಜಾರಕಿಹೊಳಿ ಅವರ ಅಸಮಾಧಾನಕ್ಕೆ ಕಾರಣವಾಗಿದೆ. ಡಿಕೆಶಿ ಹೇಳಿಕೆಗೆ ತಕ್ಷಣವೇ ಸತೀಶ್ಜಾರಕಿಹೊಳಿಯವರು ಪ್ರತಿರೋಧ ವ್ಯಕ್ತಪಡಿಸಿ ಬೆಳಗಾವಿಯಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ನಿವೇಶನ ಒದಗಿಸಿದ್ದು, ಈ ಹಿಂದೆ ಕಾಂಗ್ರೆಸ್ ಸಚಿವರಾಗಿದ್ದ ರಮೇಶ್ ಜಾರಕಿಹೊಳಿ, ಕಟ್ಟಡ ನಿರ್ಮಾಣಕ್ಕೆ ತಾವು 3 ಕೋಟಿ ರೂ. ಸ್ವಂತ ಹಣವನ್ನು ಖರ್ಚು ಮಾಡಿದ್ದೇನೆ. ಕೆಪಿಸಿಸಿ ಅಧ್ಯಕ್ಷರು ವಾಸ್ತವಾಂಶವನ್ನು ಮರೆಮಾಚಿ ತಪ್ಪು ಮಾಹಿತಿ ನೀಡಿದರೆ ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಈ ವೇಳೆ ಮಧ್ಯಪ್ರವೇಶ ಮಾಡಿದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಾವು ಸಚಿವರಾದ ಬಳಿಕ ಕಟ್ಟಡ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಬಾಕಿ ಇದ್ದ ಹಣಕಾಸು ಸೌಲಭ್ಯ ಒದಗಿಸಿದ್ದು, ವಿದ್ಯುತ್ ಬಿಲ್, ನೀರಿನ ಬಿಲ್ ಎಲ್ಲಾ ಸೇರಿ ಸರಿಸುಮಾರು 7 ಕೋಟಿ ರೂ.ಗಳಷ್ಟು ಸಂಪನೂಲವನ್ನು ದಾನಿಗಳ ಸಹಕಾರದಿಂದ ಒದಗಿಸಿದ್ದಾಗಿ ಹೇಳಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗಲು ಬಿಡದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲರೂ ಒಟ್ಟಾಗಿ ಕೆಲಸ ಮಾಡಿದ್ದರಿಂದ ಕಟ್ಟಡ ಪೂರ್ಣಗೊಂಡಿದೆ. ಕಚೇರಿ ಸಿಕ್ಕಿದೆ. ಇದು ಸಂತೋಷದ ವಿಚಾರ. ಹೆಚ್ಚಿನ ಚರ್ಚೆ ಬೇಡ ಎಂದು ಸಲಹೆ ನೀಡಿ ಮುನಿಸು ತಣ್ಣಗೆ ಮಾಡಿದ್ದಾರೆ. ಆದರೆ ಈ ವಿಚಾರ ಇಲ್ಲಿಗೆ ಮುಗಿಯುವಂತೆ ಕಾಣುತ್ತಿಲ್ಲ.

ಬೆಳಗಾವಿಯಲ್ಲಿ ಕಾಂಗ್ರೆಸ್ ಪಕ್ಷದೊಳಗೆ ಬೆಂಕಿ ಹೊತ್ತಿಕೊಂಡರೆ ಅದರ ಪರಿಣಾಮಗಳು ಏನಾಗುತ್ತವೆ ಎನ್ನುವುದನ್ನು ಈಗಾಗಲೇ ರಮೇಶ್ ಜಾರಕಿಹೊಳಿ ಅವರು ತೋರಿಸಿಕೊಟ್ಟಿದ್ದಾರೆ. ಇದೀಗ ಬೆಳಗಾವಿಯಲ್ಲಿ ಲಕ್ಷ್ಮಿ ಹೆಬ್ಬಾಳ್ಕರ್ ಮುನ್ನಲೆಗೆ ಬರುವ ಮೂಲಕ ತಮ್ಮ ಕುಟುಂಬದ ಪ್ರಾಬಲ್ಯವನ್ನು ಕಿತ್ತುಕೊಳ್ಳಲಾಗುತ್ತಿದೆ ಎಂಬ ಅಸಮಾಧಾನ ಜಾರಕಿಹೊಳಿ ಕುಟುಂಬದಲ್ಲಿದೆ. ಹೀಗಾಗಿಯೇ ಜಾರಕಿಹೊಳಿ ಸಹೋದರರು ಒಳಗೊಳಗೆ ಕತ್ತಿಮಸೆಯುತ್ತಿದ್ದಾರೆ. ಇದು ಯಾವ ಹಂತಕ್ಕೆ ಹೋಗಿ ನಿಲ್ಲುತ್ತೋ ಗೊತ್ತಿಲ್ಲ. ಒಟ್ಟಾರೆ ಕಾಂಗ್ರೆಸನಲ್ಲಿ ಯಾವುದೂ ಸರಿಯಿಲ್ಲ ಎಂಬುದಂತು ನಿಜ. ☯



# ಬೀದರ: ಸಾರಾಯಿ ಕುಡಿಸಬೇಡ ಎಂದರೂ ಸಾರಾಯಿ ಕುಡಿಸುತ್ತಿದ್ದವನ ಭೀಕರ ಹತ್ಯೆ!


ಆರೋಪಿ ಚಂದ್ರಕಾಂತ



**ತಮ್ಮ ತಂದೆಯೊಂದಿಗೆ ದಿನಾಲು ಸಾರಾಯಿ ಕುಡಿಯುತ್ತಿದ್ದು, ಇದರಿಂದಾಗಿ ಮನೆಯ ನೆಮ್ಮದಿ ಹಾಳಾಗಿರುತ್ತದೆ. ತಮ್ಮ ತಂದೆಗೆ ಸಾರಾಯಿ ಕುಡಿಸಬೇಡ ಎಂದು ಮನವಿ ಮಾಡಿದರೂ ಕೇಳದೆ ಸಾರಾಯಿ ಕುಡಿಸುತ್ತಿದ್ದವನನ್ನು ಭೀಕರವಾಗಿ ಕೊಲೆ ಮಾಡಲಾದ ಘಟನೆ ಬೀದರ ಜಿಲ್ಲೆಯ ಮಿರ್ಜಾಪೂರ ಗ್ರಾಮದಲ್ಲಿ ಜರುಗಿದೆ.**

**ಬೀದರ**

✍ ವೀರಶೆಟ್ಟಿ ಕುಂಬಾರ

ದಿನಾಂಕ 10-12-2023 ರಂದು ರಾತ್ರಿ 10 ಗಂಟೆ ಸಮಯಕ್ಕೆ ಡಿ. ಮಿರ್ಜಾಪೂರ ಗ್ರಾಮದ ಶಾದ್ರಿಕ್ ತಂದೆ ಜ್ಞಾನಿ ಎಂಬುವರ ಕೊಲೆಯಾಗಿರುತ್ತದೆ. ಶಾದ್ರಿಕ್-ರೇಖಾ ದಂಪತಿಗಳಿಗೆ ಮೂರು ಜನ ಗಂಡು ಮಕ್ಕಳು, ಒಂದು ಹೆಣ್ಣು ಮಗಳು ಇರುತ್ತಾಳೆ. ಶಾದ್ರಿಕ್‌ನು ಕೂಲಿ ಕೆಲಸ ಮಾಡಿಕೊಂಡು ಉಪಜೀವಿಸುತ್ತಿದ್ದು, ಕೂಲಿ ಹಣದಲ್ಲಿ ಬೇರೆಯವರಿಗೆ ಸಾರಾಯಿ ಕುಡಿಸುವುದು ಮತ್ತು ತಾನೂ ಸಹ ಸಾರಾಯಿ ಕುಡಿಯುವ ಚಟ ಹೊಂದಿದನು.

ಅಂದು ಸಾಯಂಕಾಲ 7.30 ಗಂಟೆಯ ಸುಮಾರಿಗೆ ನಾಜೂರಾದಿಂದ ರೇಷನ್ ತೆಗೆದುಕೊಂಡು ಮನೆಗೆ ಬಂದು ನಂತರ ಸಂಡಾಸಕ್ಕೆ ಹೋಗಿಬರುತ್ತೇನೆ ಎಂದು ಮೆಯಿಂದ ಮೋಟಾರ್ ಸೈಕಲ್ ಮೇಲೆ ಗ್ರಾಮದ ವಾಟರ್ ಟ್ಯಾಂಕ್ ಕಡೆ ಹೋದರು. ರಾತ್ರಿ 8-15 ಗಂಟೆಯ ಸುಮಾರಿಗೆ ಗ್ರಾಮದ ಅನಿಲ್ ತಂದೆ ಬಾಬು ಗೊನೆನೋರರವರು ಶಾದ್ರಿಕ್‌ನ ಮನೆಗೆ ಬಂದು ಅವನ ಹೆಂಡತಿಯಾದ ರೇಖಾಳಿಗೆ ಶಾದ್ರಿಕ್‌ರವರು ವಾಟರ್ ಟ್ಯಾಂಕ್ ಹತ್ತಿರ ತನ್ನ ಮೋಟಾರ್ ಹತ್ತಿರ ಭಾರಿ ರಕ್ತಗಾಯ ಹೊಂದಿ ಬಿದ್ದಿರುತ್ತಾರೆ ಎಂದು ಹೇಳಿದರು.

ಕೂಡಲೇ ಪತ್ನಿ ರೇಖಾ, ತಾಯಿ ಶಕುಂತಲಾರವರು ಗ್ರಾಮದ ವಾಟರ್ ಟ್ಯಾಂಕ್ ಹತ್ತಿರ ಹೋಗಿ ನೋಡಲಾಗಿ ಅಲ್ಲಿ ಶಾದ್ರಿಕ್‌ನು ತಲೆಯಲ್ಲಿ ಬಲ ಕುತ್ತಿಗೆಯ ಮೇಲೆ, ಗಟಾಯಿ ಮೇಲೆ, ಬಲಕಣ್ಣಿನ ಹತ್ತಿರ ಭಾರಿ ರಕ್ತಗಾಯ ಆಗಿ ಬಿದ್ದು ಮೃತಪಟ್ಟಿದರು. ಘಟನೆ ಸ್ಥಳದಲ್ಲಿ ಮೃತ ಶಾದ್ರಿಕ್‌ನ ಮೊಬೈಲ್ ಮತ್ತು ಮೋಟಾರ್ ಸೈಕಲ್ (ನಂ. ಕೆಎ-38 ಹೆಚ್-7470) ಇರುತ್ತದೆ.

ಯಾರೋ ಅಪರಿಚಿತರು ಯಾವುದೋ ಕಾರಣಕ್ಕಾಗಿ ಯಾವುದೋ ಒಂದು ಬಲವಾದ ಆಯುಧಧಿಂದ ತಲೆಯಲ್ಲಿ ಬಲಕುತ್ತಿಗೆಯ ಮೇಲೆ ಗಟಾಯಿ ಮೇಲೆ ಬಲಕಣ್ಣಿನ ಹತ್ತಿರ ಭಾರಿ ರಕ್ತಗಾಯಪಡಿಸಿ ಕೊಲೆ ಮಾಡಿದ ಆರೋಪಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಮೃತನ ಪತ್ನಿ ರೇಖಾರವರು ಬೀದರ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದರು. ಗ್ರಾಮೀಣ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 96/2024 ಕಲಂ 302, 201, ಐಪಿಸಿ ಪ್ರಕಾರ ಕೇಸು ದಾಖಲಾಯಿತು.


ಕೊಲೆಯಾದ ಶಾದ್ರಿಕ್

ಕೊಲೆಗಡುಕರ ಪತ್ತೆಗಾಗಿ ಬೀದರ ಗ್ರಾಮೀಣ ಪೊಲೀಸರು ಟಿ. ಮಿರ್ಜಾಪೂರ, ನಾಗೂರ, ಅಮಲಾಪೂರ ಮತ್ತು ಬೀದರ ಕುಂಬಾರವಾಡ ಹಾಗೂ ಇತರೆ ಕಡೆಗಳಲ್ಲಿ ಹೋಗಿ ಶೋಧ ನಡೆಸಿದರು ಮತ್ತು ಪೊಲೀಸ್ ಮಾಹಿತಿದಾರರಿಗೆ ವಿಚಾರಣೆ ಮಾಡಿ ಯಾವುದೇ ಮಹಿಳೆ ದೊರೆಯುವುದಿಲ್ಲ ಮತ್ತು ಸಿಡಿಆರ್ ಮಾಹಿತಿ ಪಡೆದುಕೊಂಡು ಪರಿಶೀಲನೆ ಮಾಡಿದ್ದು ಮತ್ತು ಚಾವರ ತಂಡ ಮಾಹಿತಿಯನ್ನು ಪಡೆದುಕೊಂಡು ಪರಿಶೀಲನೆ ಮಾಡಿದ್ದು, ಉಪಯುಕ್ತ ಪ್ರಯೋಜನೆಯಾಗಿರುವುದಿಲ್ಲ. ಅಲ್ಲದೆ ಮೃತ ಮತ್ತು ಸಂಶಯಾಸ್ಪದ ವ್ಯಕ್ತಿಗಳ ಮೊಬೈಲ್‌ನ ಸಿಡಿಆರ್ ವಾಟ್ಸ್‌ಅಪ್ ಬಗ್ಗೆ ಪರಿಶೀಲನೆ ಮಾಡಿದ್ದು ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ ಮತ್ತು ಬೆಂಗಳೂರಿನ ಸಿಐಡಿ ಕಚೇರಿಗೆ ಹೋಗಿ ಸೇನ್ ಪೊಲೀಸ್ ಠಾಣೆಯಿಂದ ಬೆಂಗಳೂರಿನಿಂದ ಮತ್ತು ಸಂಶಯಾಸ್ಪದ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಿದ್ದು, ಪ್ರಕರಣದ ಅಪರಿಚಿತ ಆರೋಪಿತರ ಬಗ್ಗೆ ಯಾವುದೇ ಸುಳಿವು ದೊರೆಯಲಿಲ್ಲ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟೆ, ಹೆಚ್ಚುವರಿ ಎಸ್ಪಿ ಚಂದ್ರಕಾಂತ್ ಪೂಜಾರಿ, ಡಿವೈಎಸ್ಪಿ ಶಿವನಗೌಡ ಪಾಟೀಲ್‌ರವರ ಸೂಕ್ತ ಮಾರ್ಗದರ್ಶನದಲ್ಲಿ ಸಿಪಿಐ ಡಾ. ಮಲ್ಲಿಕಾರ್ಜುನ ಯಾತನೂರುರವರು ತನಿಕೆ ಕೈಗೊಂಡರು. ಈ ಪ್ರಕರಣವನ್ನು ಪತ್ತೆಹಚ್ಚಲೇಬೇಕೆಂದು ಛಲ ತೊಟ್ಟ ತನಿಖಾ ಚಾಣಾಕ್ಷ ಸಿಪಿಐ ಡಾ. ಮಲ್ಲಿಕಾರ್ಜುನ ಯಾತನೂರುರವರು ದಿನಾಂಕ 9-9-2024ರಂದು ಕೊಲೆಗಡುಕರಿಬ್ಬರನ್ನು ಬಂಧಿಸಿದರು.

ಮೃತ ಶಾದ್ರಿಕ್‌ರವರ ದಾಯಾದಿಯಾದ ಮಾರ್ಕ್ ಡಾಕಳಗಿರವರೊಂದಿಗೆ ಸುಮಾರು ವರ್ಷಗಲಿಂದ ಸಾರಾಯಿ ಕುಡಿಯುತ್ತಿದ್ದು, ಇದರಿಂದ ಮಾರ್ಕ್ ಡಾಕಳಗಿರವರ ಮಗನಾದ ಆರೋಪಿ ಅಪ್ರಾಪ್ತ ವಯಸ್ಸಿನ


ಎಸ್ಪಿ ಪ್ರದೀಪವ ಗುಂಟಿ


ಹೆಚ್ಚುವರಿ ಎಸ್ಪಿ ಚಂದ್ರಕಾಂತ್ ಪೂಜಾರಿ

ಮತ್ತು ಇವರ ಸಂಬಂಧಿ ಆರೋಪಿ ಸ್ಟಾಲಿನ್ ತಂದೆ ಚಂದ್ರಕಾಂತ ತಂದೆ ಮನೋಜ್ (24)ರವರು ಶಾದ್ರಿಕ್‌ನಿಗೆ ಮಾರ್ಕ್‌ರವರಿಗೆ ದಿನಾಲು ಸಾರಾಯಿ ಕುಡಿಸುತ್ತಿದ್ದ. ಇದರಿಂದ ಮಾರ್ಕ್‌ರವರು ಸಾರಾಯಿ ಕುಡಿದು ಮನೆಗೆ ಬಂದು ಮನೆಯಲ್ಲಿ ಎಲ್ಲರೊಂದಿಗೆ ವಿನಾಕಾರಣ ಜಗಳ ತೆಗೆದು ಹೊಡಿ-ಬಡಿ ಮಾಡುತ್ತಿದ್ದ. ತಮ್ಮ ತಂದೆಯಾದ ಮಾರ್ಕ್‌ರೊಂದಿಗೆ ಸಾರಾಯಿ ಕುಡಿಸಬೇಡ ಮತ್ತು ತಮ್ಮ ತಂದೆ ಕರೆದುಕೊಂಡು ಹೋಗಬೇಡ ಎಂದು ಮಾರ್ಕ್‌ರ ಅಪ್ರಾಪ್ತ ವಯಸ್ಸಿನ ಮಗ ಎಚ್ಚರಿಸಿದನು.

ದಕ್ಷ ಸಿಪಿಐ ಡಾ. ಮಲ್ಲಿಕಾರ್ಜುನ ಯಾತನೂರು, ಎಎಸ್‌ಐ ಮಲ್ಲಪ್ಪಾ, ಹೆಚ್‌ಸಿಗಳಾದ ಪ್ರಶಾಂತ್, ಶ್ರೀನಿವಾಸ್, ಪಿಸಿ ಶಿವಕುಮಾರ್‌ರವರು ಒಳಗೊಂಡ ತನಿಖಾ ತಂಟ ಟಿ. ಮಿರ್ಜಾಪೂರ ಗ್ರಾಮದ ಚರ್ಚ್ ಹತ್ತಿರ ಆರೋಪಿತರನ್ನು ವಶಕ್ಕೆ ಪಡೆದರು.

ಶಾದ್ರಿಕ್‌ನು ಮಾರ್ಕ್‌ರವರಿಗೆ ರಾತ್ರಿ ಸಮಯದಲ್ಲಿ ಬಹಳಷ್ಟು ಸಾರಾಯಿ ಕುಡಿಸಿ ರಾತ್ರಿ ವೇಳೆಯಲ್ಲಿ ಎಲ್ಲೆಂದರಲ್ಲಿ ಬಿಟ್ಟು ಬರುವುದು ಮತ್ತು ಶಾದ್ರಿಕ್‌ನು ರಾತ್ರಿ ವೇಳೆ ಪದೇ ಪದೇ ಮಾರ್ಕ್‌ನ ಹೆಂಡತಿ ಮತ್ತು ಅವನ ಮಗಳ ಮೊಬೈಲ್‌ಗೆ ಫೋನವ ಮಾಡಿ ಅಶ್ಲೀಲವಾಗಿ ಮಾತಾಡುವುದು, ಬೈಯುವುದು ಮಾಡಿ ತೊಂದರೆ ನೀಡುತ್ತಿದ್ದಾನೆ ಎಂದು ಅವನಿಗೆ ಇತಿಶ್ರೀ ಹಾಡಲು ಸಮಯಕ್ಕಾ ಕಾಯತೊಡಗಿದರು.

ಹೆಣ್ಣು ಮಕ್ಕಳೊಂದಿಗೆ ಫೋನ್ ಮಾಡಿ ಅಶ್ಲೀಲವಾಗಿ ಮಾತನಾಡುವುದು ಸರಿ ಇಲ್ಲ ಎಂದು ಶಾದ್ರಿಕ್‌ನಿಗೆ ಬುದ್ಧಿವಾದ ಹೇಳಿದರೂ ಅವನು ಸರಿಯಾಗಲಿಲ್ಲ. ಅವನಿಗೆ ಒಂದು ಗತಿ ಕಾಣಿಸಲು ಒಂದು ವಾರದ ಮೊದಲೇ ನಿರ್ಧಾರ ಮಾಡಿ ಶಾದ್ರಿಕ್‌ನ ಚಲನವಲನದ ಮೇಲೆ ಕಣ್ಣಿಟ್ಟಿದರು. ಶಾದ್ರಿಕ್‌ನು ದಿನಾಲು ಗ್ರಾಮದ ಹೊರಗೆ ಇರುವ ನೀರಿನ ಟಾಕಿಯ ಹತ್ತಿರ ಸಾರಾಯಿ ಕುಡಿಯುವುದು ಮಾಡುತ್ತಿದ್ದನು. ತೆಲಂಗಾಣದ ಸಾರೂರ ಜಾತ್ರೆ ಇರುವುದರಿಂದ ಗ್ರಾಮದಲ್ಲಿ ಜನರು ಜಾತ್ರೆಗೆ ಹೋಗಿದ್ದು, ಇದೇ ಸರಿಯಾದ ಸಮಯ ಎಂದು ಒಂದು ಚಾಕು ಮತ್ತು ಕಬ್ಬಿಣದ ರಾಡು ತೆಗೆದುಕೊಂಡು ಬಂದು ಭೀಕರವಾಗಿ ಕೊಲೆಗೈದನು.

ನಿಗೂಢವಾಗಿ ಕೊಲೆ ಪ್ರಕರಣವನ್ನು ಡಾ. ಮಲ್ಲಿಕಾರ್ಜುನ ಯಾತನೂರ ಮತ್ತು ಅವರ ತಂಡವನ್ನು ಭೇದಿಸಿದಕ್ಕೆ 'ಪೊಲೀಸ್ ನ್ಯೂಸ್' ಅಭಿನಂದಿಸುತ್ತದೆ.



ಡಿವೈಎಸ್ಪಿ ಶಿವನಗೌಡ ಪಾಟೀಲ್


ಸಿಪಿಐ ಮಲ್ಲಿಕಾರ್ಜುನ್ ಯಾತನೂರ


ವಿವಾಹ ಸಂದರ್ಭದಲ್ಲಿ ಶಾದ್ರಿಕ್ ಹಾಗೂ ಪತ್ನಿ ರೇಖಾ


ಶಾದ್ರಿಕ್‌ನ ಮೃತದೇಹ


**ಹೊಸ ವರ್ಷದ ಆರಂಭದಲ್ಲಿಯೇ ಹೊಸದೊಂದು ಹ್ಯೂಮನ್ ಮೆಟಾಪ್ ನ್ಯೂಮೋ ವೈರಸ್ (ಹೆಚ್ ಎಂಪಿವಿ) ದೇಶದಲ್ಲಿ ಕಾಣಿಸಿಕೊಂಡಿದ್ದು ಪ್ರಕರಣಗಳ ಸಂಖ್ಯೆ ಏಳಕ್ಕೇರಿದೆ. ಸದ್ಯಕ್ಕೆ ಅಪಾಯಕಾರಿ ಅಲ್ಲ ಎನ್ನುತ್ತಿದ್ದರೂ ಈಗಾಗಲೇ ಕೋವಿಡ್ ವೈರಸ್‌ನ ಸಂಕಷ್ಟವನ್ನು ಅನುಭವಿಸಿರುವ ಜನರಲ್ಲಿ ಭಯವಂತು ಇದ್ದೇ ಇದೆ. ಹೀಗಾಗಿಯೇ ಕೇಂದ್ರ ಆರೋಗ್ಯ ಸಚಿವಾಲಯ ಮಾರ್ಗಸೂಚಿ ಪ್ರಕಟಿಸಿದ್ದು ಮುಂಜಾಗ್ರತಾ ಕ್ರಮ ವಹಿಸುವಂತೆ ಸೂಚಿಸಿದೆ.**



# ಕೊರೊನಾ ನಂತರ ಬಂದ ಡೆಡ್ಲಿ ವೈರಸ್!

✍ ಬಿ.ಎಂ. ಲವಕುಮಾರ್

ಚೀನಾದಲ್ಲಿ ಕಾಣಿಸಿಕೊಂಡ ಈ ವೈರಸ್ ಶೀಘ್ರಗತಿಯಲ್ಲಿ ಹರಡುತ್ತಿದ್ದು, ಅದೀಗ ಭಾರತಕ್ಕೂ ಕಾಲಿಟ್ಟಿರುವುದು ಆತಂಕಕ್ಕೆ ಕಾರಣವಾಗಿದೆ. ಕರ್ನಾಟಕ ಸೇರಿದಂತೆ ದೇಶದ ವಿವಿಧ ಕಡೆಗಳಲ್ಲಿ ಕಾಣಿಸಿಕೊಂಡಿದ್ದು ಸದ್ಯ ವೈರಸ್ ನ ಸಂಖ್ಯೆ ಏಳಕ್ಕೇರಿದೆ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಆರೋಗ್ಯ ಇಲಾಖೆಗಳು ಎಚ್ಚೆತ್ತುಕೊಂಡಿದ್ದು ಹಲವು ಮುಂಜಾಗ್ರತಾ ಕ್ರಮಗಳಿಗೆ ಮುಂದಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದೊಂದು ದೇಶದಲ್ಲಿ ಆತಂಕವನ್ನು ಸೃಷ್ಟಿ ಮಾಡಿದ್ದು ನಮ್ಮ ಎಚ್ಚರಿಕೆಯಲ್ಲಿ ನಾವು ಇರುವುದು ಬಹುಮುಖ್ಯವಾಗಿದೆ.



ಜೆ.ಪಿ. ನಡ್ಡಾ

ಈಗಾಗಲೇ ಹೆಚ್‌ಎಂಪಿವಿ ಬಗ್ಗೆ ಮಾತನಾಡಿರುವ ಕೇಂದ್ರ ಆರೋಗ್ಯ ಸಚಿವ ಜೆಪಿ ನಡ್ಡಾ ಅವರು, ಕೇಂದ್ರದ ಸಿದ್ಧತೆಗಳು ಮತ್ತು ಹೊಸ ವೈರಸ್ ಬಗ್ಗೆ ಹಲವು ವಿಷಯಗಳನ್ನು ಹಂಚಿಕೊಂಡಿದ್ದಾರೆ. ನಾವು ಪರಿಸ್ಥಿತಿಯನ್ನು ಗಮನಿಸುತ್ತಿದ್ದೇವೆ ಮತ್ತು ನೆರೆಯ ದೇಶಗಳಲ್ಲಿ ವೈರಸ್‌ನ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ. ನಾವು ಸಿದ್ಧರಿದ್ದೇವೆ, ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ನಾವು ಎಲ್ಲಾ ಅಂಶಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದೇವೆ. ಇದು ಹೊಸ ವೈರಸ್ ಅಲ್ಲ, 2001ರಲ್ಲಿಯೇ ವೈರಸ್ ಅನ್ನು ಗುರುತಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಇದೆಲ್ಲದರ ನಡುವೆ ಹೊಸ ವೈರಸ್ ಬಗ್ಗೆ ರಾಜ್ಯ ಸರ್ಕಾರಗಳು ಅಲರ್ಟ್ ಮೋಡ್‌ನಲ್ಲಿವೆ. ಮೊದಲ ಪ್ರಕರಣವು ಬೆಂಗಳೂರಿನಲ್ಲಿ 3 ತಿಂಗಳ ಹೆಣ್ಣುಮಗುವಿನಲ್ಲಿ ಪತ್ತೆಯಾಗಿತ್ತು. ಬ್ರಾಂಕೋಪ ನ್ಯೂಮೋನಿಯಾದೊಂದಿಗೆ ಆಸ್ಪತ್ರೆಗೆ ದಾಖಲಾದ ನಂತರ ಹೆಚ್ ಎಂಪಿವಿ ರೋಗನಿರ್ಣಯ ಮಾಡಲಾಯಿತು. ಎರಡನೇ ಪ್ರಕರಣವು 8 ತಿಂಗಳ ಗಂಡು ಮಗುವಿನಲ್ಲಿ ಪತ್ತೆಯಾಗಿದೆ. ಇಲ್ಲಿ ಮುಖ್ಯವಾಗಿ



ಗಮನಿಸಬೇಕಾಗಿರುವುದು ಈ ಎರಡು ಮಕ್ಕಳಿಗೂ ಯಾವುದೇ ಅಂತರರಾಷ್ಟ್ರೀಯ ಪ್ರಯಾಣದ ಇತಿಹಾಸವಿಲ್ಲ ಎಂದು ಐಸಿಎಂಆರ್ ಕೆ ದೃಢಪಡಿಸಿದೆ. ಇದರ ಬೆನ್ನಲ್ಲೇ ಗುಜರಾತ್‌ನಲ್ಲಿ ಮತ್ತೊಂದು ಪ್ರಕರಣ ವರದಿಯಾಗಿತ್ತು.

ಗುಜರಾತ್‌ನಲ್ಲಿ ಇದು ಮೊದಲ ಎಚ್‌ಎಂಪಿವಿ ಪ್ರಕರಣವಾಗಿದೆ. ಸುಮಾರು 2 ವರ್ಷ ವಯಸ್ಸಿನ ಮಗುವಿನಲ್ಲಿ ವೈರಸ್ ಪತ್ತೆಯಾಗಿತ್ತು. ರೋಗಿಯನ್ನು ಅಹಮದಾಬಾದ್‌ನ ಚಂದ್‌ಖೇಡಾ ಪ್ರದೇಶದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮತ್ತೊಂದೆಡೆ ಇದೀಗ ಚೆನ್ನೈನಲ್ಲಿ ಇಬ್ಬರಲ್ಲಿ ಹೀಗೆ ಇದುವರೆಗೆ ಒಟ್ಟು ಏಳು ಮಂದಿಯಲ್ಲಿ ಈ ಸೋಂಕು ಪತ್ತೆಯಾಗಿದೆ. ಈಗಾಗಲೇ ವೈರಸ್ ಎಂದಾಕ್ಷಣ ಬೆದರುವ ಪರಿಸ್ಥಿತಿಯನ್ನು ನಾವೀಗಾಗಲೇ ಎದುರಿಸಿರುವ ಕಾರಣದಿಂದಾಗಿ ವೈರಸ್ ಎಂದಾಕ್ಷಣ ಭಯಗೊಳ್ಳುವುದು ಅನಿವಾರ್ಯವಾಗಿದೆ.

2020ರಲ್ಲಿ ಇಡೀ ಜಗತ್ತನ್ನೇ ಕೋವಿಡ್ 19ಗೆ ಸಿಕ್ಕಿ ಪರದಾಡಿತ್ತು. ಅದರಲ್ಲಿ ಪ್ರಾಣ ಕಳೆದುಕೊಂಡವರೆಷ್ಟು ಜನವೋ? ಹಾಗೆಯೇ ಕೋಟ್ಯಾಂತರ ಜನ ಸೋಂಕಿಗೆ ಒಳಗಾಗಿ ಕಷ್ಟ ಅನುಭವಿಸಿದರು. ಅದು ಶ್ರೀಮಂತ, ಬಡವ ಎನ್ನದೆ ಎಲ್ಲರನ್ನೂ ಬಲಿ ತೆಗೆದುಕೊಂಡಿತು. ಅದರಿಂದ ಅನುಭವಿಸಿದ ಸಂಕಷ್ಟ ಎದೆ ಝಲ್ಲೆನಿಸುತ್ತದೆ. ಇವತ್ತಿಗೂ ಅದರ ಹೊಡೆತದಿಂದ ಮೇಲೆದ್ದು ಬರಲಾಗದೆ, ವ್ಯಾಪಾರ ವಹಿವಾಟು, ಕೆಲಸ, ಹೀಗೆ ಎಲ್ಲವನ್ನು ಕಳೆದುಕೊಂಡವರು ಬೇಕಾದಷ್ಟು ಮಂದಿ ಯಿದ್ದಾರೆ. ಇದೆಲ್ಲವನ್ನು ಅನುಭವಿಸಿದ ಕಾರಣದಿಂದಾಗಿ ವೈರಸ್ ಎಂದಾಕ್ಷಣ ಪ್ರತಿಯೊಬ್ಬರಿಗೂ 2020ರ ನೆನಪು ಕಾಡಲು ಆರಂಭಿಸುತ್ತದೆ.

ಯಾವುದೇ ವೈರಸ್ ಬೇರೆ ಯಾವುದೇ ದೇಶದಲ್ಲಿ ಕಂಡು ಬಂದರೂ ಜನ ಕಳವಳಗೊಳ್ಳುವುದಿಲ್ಲ, ಆದರೆ ವೈರಸ್‌ಗಳು ಚೀನಾದಲ್ಲಿ ಕಾಣಿಸಿಕೊಂಡಿದೆ ಎಂದರೆ ಭಯಗೊಳ್ಳುತ್ತಾರೆ. ಅದಕ್ಕೆ ಕಾರಣ ಚೀನಾದಲ್ಲಿ ಯಾವುದೇ ವೈರಸ್ ಬಂದರೂ ಅದು ಇತರೆ ದೇಶಗಳಿಗೆ ಹರಡಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ಹೀಗಾಗಿ ಆತಂಕ ಶುರುವಾಗಿ ಬಿಡುತ್ತದೆ. ಅದರಲ್ಲೂ ನಮ್ಮ ದೇಶ ಅವರಿಗೆ ಹೊಂದಿಕೊಂಡಿರುವುದರಿಂದ ಭಯವಂತೂ ಇದ್ದೇ ಇರುತ್ತದೆ.

ಜಗತ್ತು ಕೋವಿಡ್ ಸಂಕಷ್ಟದಿಂದ ಹೊರಬಂದು ಸಹಜಸ್ಥಿತಿಗೆ ಮರಳುತ್ತಿರುವ ಬೆನ್ನಲ್ಲೇ ಚೀನಾದಲ್ಲಿ ಮಹಾಮಾರಿ ಸೋಂಕು ಹಬ್ಬುತ್ತಿರುವ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ದೃಶ್ಯಗಳು ಭಯ ಹುಟ್ಟಿಸುತ್ತಿವೆ. ಆದರೆ ಚೀನಾ ಮಾತ್ರ ಇದು ಇವತ್ತಿನದಲ್ಲ ಹಳೆಯದು ಎಂದು ಹೇಳುತ್ತಿದೆ. ಹಾಗೆಯೇ ಅಲ್ಲಿ ನೆಲೆಸಿರುವ ಕೆಲವರು ಇಲ್ಲಿ ಅಂತಹ ಪರಿಸ್ಥಿತಿ ಇಲ್ಲ ಎನ್ನುವ ಮೂಲಕ ಧೈರ್ಯ ತುಂಬುತ್ತಿದ್ದಾರೆ. ಕೆಲವು ದೃಶ್ಯಗಳಲ್ಲಿ ಕಂಡು ಬಂದಂತೆ ಚೀನಾದಲ್ಲೀಗ ಉಸಿರಾಟದ ಅನಾರೋಗ್ಯ ತೀವ್ರ ತರ ಹೆಚ್ಚಳವಾಗುತ್ತಿದ್ದು, ಆಸ್ಪತ್ರೆಗಳು ಮತ್ತು ಹೆಲ್ತ್ ಕೇರ್ ಸೆಂಟರ್ ಗಳು ತುಂಬಿ ತುಳುಕುತ್ತಿದೆ

ಚೀನಾದ ಆರೋಗ್ಯಾಧಿಕಾರಿಗಳ ಮಾಹಿತಿ ಪ್ರಕಾರ, ಈ ಎಚ್ ಎಂಪಿವಿ ವೈರಸ್ ಚೀನಾದ ಉತ್ತರ ಭಾಗದಲ್ಲಿ ವೇಗವಾಗಿ ಹರಡುತ್ತಿದೆ. ಅಲ್ಲದೇ ಸಾವಿರಾರು ಸಂಖ್ಯೆಯ ಜನರು ಉಸಿರಾಟದ ತೊಂದರೆಗೆ ಸಿಲುಕಿ ಆಸ್ಪತ್ರೆಗೆ ದಾಖಲಾಗಿರುವುದಾಗಿ ತಿಳಿಸಿದೆ. ಈ ಮೈಕ್ರೋಪ್ಲಾಸ್ಮಾ ನ್ಯುಮೋನಿಯಾ ಎಲ್ಲಾ ವಯೋಮಾನದವರ ಮೇಲೂ ಪರಿಣಾಮ ಬೀರುತ್ತಿದ್ದು, ಮುಖ್ಯವಾಗಿ ಮಕ್ಕಳಿಗೆ ಹೆಚ್ಚು ಮಾರಕವಾಗಿರುವುದರಿಂದ ಸಾರ್ವಜನಿಕ ಆರೋಗ್ಯದ ಬಗ್ಗೆ ಚೀನಾ ಕಳವಳ ವ್ಯಕ್ತಪಡಿಸಿದೆ.

ಎಚ್ ಎಂಪಿವಿ (ಹ್ಯೂಮನ್ ಮೈಕ್ರೋಪ್ಲಾಸ್ಮಾ ನ್ಯುನೋನಿಯಾ) ಸೋಂಕು ಚೀನಾದ್ಯಂತ ಹರಡುತ್ತಿರುವ ನಡುವೆಯೇ ಈ ಸೋಂಕು ತಡೆಗೆ ಮಾಸ್ಕ್ ಧರಿಸುವಿಕೆ



ಹಾಗೂ ಕೈಗಳನ್ನು ಸೋಪಿನಿಂದ ತೊಳೆದುಕೊಳ್ಳುವ ಪ್ರಕ್ರಿಯೆಯನ್ನು ಕಡ್ಡಾಯವಾಗಿ ಅನುಸರಿಸುವಂತೆ ಚೀನಾ ಸರ್ಕಾರ ಮುನ್ನೆಚ್ಚರಿಕೆ ನೀಡಿದೆ. ಆದರೆ ವಿಪರ್ಯಾಸ ಏನೆಂದರೆ ಈ ಎಚ್ ಎಂಪಿವಿ ಸೋಂಕು ಎರಡು ದಶಕಗಳ ಹಿಂದೆಯೇ ಪತ್ತೆಯಾಗಿದ್ದರೂ ಕೂಡಾ ಈವರೆಗೂ ವ್ಯಾಕ್ಸಿನ್ ಕಂಡು ಹಿಡಿದಿಲ್ಲ

ಈ ಎಚ್ ಎಂಪಿವಿ ಸೋಂಕಿನ ಬಗ್ಗೆ ಏಷ್ಯಾದಲ್ಲಿ ಆರೋಗ್ಯ ಅಧಿಕಾರಿಗಳು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಮತ್ತೊಂದೆಡೆ ಚೀನಾ ಸೋಂಕು ತಡೆಗೆ ಕಠಿನ ಕ್ರಮ ಜಾರಿಗೊಳಿಸಲು ಮುಂದಾಗಿದೆ. ಈಗಾಗಲೇ ಹಾಂಗ್‌ಕಾಂಗ್‌ನಲ್ಲೂ ಕೆಲವೊಂದು ಪ್ರಕರಣಗಳು ವರದಿಯಾಗಿದೆಯಂತೆ. ಅಲ್ಲದೇ ಜಪಾನ್‌ನಲ್ಲಿ ಸಾವಿರಾರು ಮಂದಿಗೆ ಹಕ್ಕಿಜ್ವರ ಕಾಣಿಸಿಕೊಂಡು ಭೀತಿ ಹುಟ್ಟಿಸಿದೆ. ಇದೆಲ್ಲದರ ನಡುವೆ ಭಾರತದಲ್ಲಿ ಇದನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುತ್ತಿದ್ದು ಇದರ ತಡೆಗೆ ಸಮಾರೋಪಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಸ್ವಯಂ ಚಿಕಿತ್ಸೆ ಮಾಡಬೇಡಿ, ನೀವು ಕೆಮ್ಮುವಾಗ ಅಥವಾ ಸೀನುವಾಗ ನಿಮ್ಮ ಬಾಯಿ ಮತ್ತು ಮೂಗನ್ನು ಮುಚ್ಚಿಕೊಳ್ಳಿ, ನಿಮ್ಮ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಅಥವಾ ಆಲ್ಕೋಹಾಲ್ ಆಧಾರಿತ ಹ್ಯಾಂಡ್ ಸ್ಯಾನಿಟೈಸರ್‌ನಿಂದ ತೊಳೆಯಿರಿ, ನೀವು ಅಸ್ವಸ್ಥರಾಗಿದ್ದರೆ ಕಿಕ್ಕಿರಿದ ಸ್ಥಳಗಳನ್ನು ತಪ್ಪಿಸಿ ಮತ್ತು ಸಂಪರ್ಕವನ್ನು ಮಿತಿಗೊಳಿಸಿ, ಆಗಾಗ್ಗೆ ಕಣ್ಣು, ಮೂಗು ಮತ್ತು ಬಾಯಿಯನ್ನು ಮುಟ್ಟಬೇಡಿ, ನೀವು ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ ಮತ್ತು ಟಿಶ್ಯೂ ಪೇಪರ್ ಅನ್ನು ಮರುಬಳಕೆ ಮಾಡಬೇಡಿ ಎಂಬಂತಹ ಸಲಹೆಗಳನ್ನು ನೀಡಲಾಗುತ್ತಿದೆ. ಒಟ್ಟಾರೆಯಾಗಿ ಭಯಪಡುವಂತಹದ್ದೇನಿಲ್ಲ, ಎಲ್ಲರೂ ಅವರವರ ಎಚ್ಚರಿಕೆಯಲ್ಲಿದ್ದಷ್ಟು ಒಳ್ಳೆಯದು. ಹಾಗೆಯೇ ಶೀತ, ಜ್ವರ ಕಾಣಿಸಿಕೊಂಡಾಗ ತಜ್ಞರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯುವುದು ಒಳ್ಳೆಯದು. ☯



## ಇದು ಹೊಸ ವೈರಸ್ ಅಲ್ಲ...

ಹ್ಯೂಮನ್ ಮೆಟಾಪ್ ನ್ಯುಮೋ ವೈರಸ್ 2001ರಲ್ಲಿ ನೆದರ್‌ಲ್ಯಾಂಡ್ಸ್‌ನಲ್ಲಿ ಪತ್ತೆಯಾಗಿದೆ. ತದನಂತರ ಚೀನಾದಲ್ಲಿ 2004ರಲ್ಲಿ ಡಚ್ ಸ್ಕಾಲರ್‌ವೊಬ್ಬರ ಆರೋಗ್ಯ ತಪಾಸಣೆ ವೇಳೆ ಪತ್ತೆಯಾಗಿತ್ತು. ಇದೊಂದು ಶ್ವಾಸಕೋಶಕ್ಕೆ ಸಂಬಂಧಪಟ್ಟ ಸೋಂಕು. ಈ ಎಚ್ ಎಂಪಿವಿ ವೈರಸ್ ಮಕ್ಕಳು ಹಾಗೂ ವಯಸ್ಕರಿಗೂ ಹರಡುತ್ತದೆ. ಇದು ಸಾಮಾನ್ಯವಾದ ಶೀತ, ಕೆಮ್ಮು, ಜ್ವರ, ಮೂಗು ಕಟ್ಟುವುದು,ಸೀನುವಿಕೆ, ತಲೆ ನೋವಿನಂತಹ ಲಕ್ಷಣ ಹೊಂದಿರುತ್ತದೆ. ಜತೆಗೆ ಉಸಿರಾಟದ ಸಮಸ್ಯೆಯೂ ಕಾಣಿಸಿಕೊಳ್ಳುತ್ತದೆ. ರೋಗಲಕ್ಷಣಗಳೆಂದರೆ ಕೆಮ್ಮು, ಜ್ವರ, ಮೂಗಿನ ದಟ್ಟಣೆ ಹಾಗೂ ಉಸಿರಾಟದ ತೊಂದರೆ, ಬ್ರಾಂಕೈಟಿಸ್ ಅಥವಾ ನ್ಯುಮೋನಿಯಾದಂತಹ ತೊಂದರೆಗಳು ಉಂಟಾಗುತ್ತದೆ. ಸಾಮಾನ್ಯವಾಗಿ 3ರಿಂದ 6ದಿನಗಳ ಒಳಗಾಗಿ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ

ರೋಗ ನಿರೋಧಕ ಶಕ್ತಿ ಕಡಿಮೆ ಇದ್ದವರಲ್ಲಿ ಇದು ಗಂಭೀರ ಸ್ವರೂಪಕ್ಕೆ ತಿರುಗಿದಲ್ಲಿ ಸಾವು ಕೂಡಾ ಸಂಭವಿಸಬಹುದು ಎಂದು ಆರೋಗ್ಯ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಎಚ್‌ಎಂಪಿವಿ ಸೋಂಕು ಪೀಡಿತ ಮಕ್ಕಳ ಸಾವಿನ ಸಂಖ್ಯೆ ಕೇವಲ ಶೇ.1ರಷ್ಟು, ಆದರೆ ಎಚ್ ಎಂಪಿವಿಗೆ ಈವರೆಗೂ ಸಮರ್ಪಕವಾದ ಲಸಿಕೆ ಕಂಡುಹಿಡಿದಿಲ್ಲ, ಸೋಂಕು ಪೀಡಿತರ ರೋಗಲಕ್ಷಣದ ಆಧಾರದ ಮೇಲೆ ಔಷಧ ನೀಡುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ☯

# ಜೆಡಿಎಸ್ ಮುಖಂಡ ಗೋಲ್ಡ್ ವೆಂಕಟೇಶ್ ಬರ್ಬರವಾಗಿ ಕೊಂದ ದುಷ್ಕರ್ಮಿಗಳು!

9 ☜

ಬರುವಷ್ಟರಲ್ಲಿ ಜೆಡಿಎಸ್ ಮುಖಂಡ ವೆಂಕಟೇಶ್ ಮತ್ತು ಅವರ ತಂಡದವರು ಮತ್ತು ಅರವಿಂದ್ ನಡುವೆ ಜೋರಾಗಿ ಗಲಾಟೆ ನಡೆಯುತ್ತಿತ್ತು. ನಾನು ಅರವಿಂದ್



ಜೊತೆ ಸೇರಿಕೊಂಡು ಆತನಿಗೆ ಕೊಲೆ ಬೆದರಿಕೆ ಹಾಕಿ ನಿನಗೊಂದು ಗತಿಕಾಣಿಸುವುದಾಗಿ ಹೇಳಿದೆವು. ಆಗ ಆತನಿಗೆ ಕೋಪ ಬಂದು ಅರವಿಂದ್ ಹಾಗೂ ನನಗೆ ಒಂದೊಂದು ಏಟು ಕೊಟ್ಟು ರೌಡಿಸಂ ಮಾಡುವುದನ್ನು ಬಿಟ್ಟು ನ್ಯಾಯವಾಗಿ ಬದುಕುವಂತೆ ಬುದ್ಧಿ ಹೇಳಿದರು. ಗಲಾಟೆ ಜೋರಾಗುತ್ತಿದ್ದಂತೆ ಬಾರ್‌ನಲ್ಲಿದ್ದವರು ಹೊರ ಬಂದರು ಮತ್ತು ಬಾರ್ ಮುಂದೆ ಓಡಾಡುತ್ತಿದ್ದ ಗ್ರಾಮಸ್ಥರು ಸೇರಿ ಜಗಳ ಬಿಡಿಸಿ ರಾಜಿ ಮಾಡಿ ಕಳುಹಿಸಿ ಕೊಟ್ಟರು. ವೆಂಕಟೇಶ್ ನಮಗೆ ಬುದ್ಧಿ ಹೇಳಿದನಲ್ಲದೆ ಎಲ್ಲರ ಮುಂದೆ ಹೊಡೆದು ಮರ್ಯಾದೆ ತೆಗೆದಿದ್ದಾನೆ. ಅವನಿಗೊಂದು ಗತಿಕಾಣಿಸಬೇಕೆಂದು ನಾವುಗಳು ಮಾತನಾಡಿಕೊಂಡು ಆತ ಊರಿನಲ್ಲಿ ಓಡಾಡುತ್ತಿದ್ದಾಗ, ಗೇಟ್ ಬಳಿ ಇದ್ದಾಗ, ಗಾಡಿಯಲ್ಲಿ ಹೋಗಿ ಕಿಚಾಯಿಸುತ್ತಾ, ಬೆದರಿಸುತ್ತಾ, ಮೂರು ತಿಂಗಳ ಕಾಲ ಅವರ ಹಿಂದೆ ಬಿದ್ದಿದ್ದೆವು. 2-3 ಬಾರಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಅದು ಸಫಲವಾಗಲಿಲ್ಲ. ಕೊನೆಗೆ 2025 ಜನವರಿ 1 ಹೊಸ ವರ್ಷದ ದಿನ ಮುಹೂರ್ತ ಇಟ್ಟೆವು. ಆದರೆ ಅವರ ಜೊತೆ ಯಾರಾದರೊಬ್ಬರು ಇರುತ್ತಿದ್ದರು. ಇದರಿಂದ ಸಾಧ್ಯವಾಗ ಲಿಲ್ಲ. ಜನವರಿ 3ರಂದು ರಾತ್ರಿ 8 ಗಂಟೆ ಸಮಯದಲ್ಲಿ ಊರಿನ ಗೇಟ್ ಬಳಿ ಇರುವ ಅಂಗಡಿ ಬಳಿ ಕುಳಿತು ಕೊಂಡು ಯಾರ ಜೊತೆ ಫೋನ್‌ನಲ್ಲಿ ಮಾತನಾಡುತ್ತಿದ್ದರು. ಆಗ ಇದೇ ಸರಿಯಾದ ಸಮಯವೆಂದು ನಾವುಗಳು ಮಾತನಾಡಿಕೊಂಡು ಊರಿನ ಗೇಟ್ ಬಳಿಗೆ ಬಂದು ವೆಂಕಟೇಶ್‌ರವರ ಹಿಂದೆಯೇ ಫಾಲೋ ಮಾಡುತ್ತಾ ಇದ್ದೆವು. ರಾತ್ರಿ 8.45ಕ್ಕೆ ದ್ವಿಚಕ್ರ ವಾಹನದಲ್ಲಿ ಗೇಟ್‌ನಿಂದ ಹೊರಟು ಊರಿಗೆ ಹೋಗುವ ರಸ್ತೆಯಲ್ಲಿರುವ ಶ್ರೀನಿಧಿ ಮೆಡಿಕಲ್‌ಗೆ ಹೋದರು. ಆಗ ನಮ್ಮಲ್ಲಿ ಕೆಲವರು ಮುಂದೆ ಹೋಗಿ ನಿರ್ಜನ ಪ್ರದೇಶದಲ್ಲಿ ಇರುವಂತೆ ಹೇಳಿದೆವು. ನಾವು ಇಬ್ಬರು ಆತನನ್ನು ಹಿಂಬಾಲಿಸುತ್ತಾ ಇದ್ದು ಮೆಟಿಕಲ್ ಸ್ಟೋರ್‌ನಲ್ಲಿ ಮಾತ್ರೆ ತೆಗೆದು ಕೊಂಡು ಮನೆ ಕಡೆ ಹೊರಟರು. ನಿರ್ಜನ ಪ್ರದೇಶದಲ್ಲಿ ಅಡ್ಡಗಟ್ಟಿ ದ್ವಿಚಕ್ರ ವಾಹನವನ್ನು ತಡೆದು ನಿಲ್ಲಿಸಿ ಮೊದಲಿಗೆ ಹಂದಿಗೆ ಚುಚ್ಚುವ ಬರ್ಜಿಯಿಂದ ಬೆನ್ನಿಗೆ ಬಲವಾಗಿ ಇರಿಯುತ್ತಿದ್ದಂತೆ ಜೋರಾಗಿ ಕಿರುಚುತ್ತಾ ಸ್ಕೂಟಿ ಸಮೇತ ನೆಲದ ಮೇಲೆ ಬಿದ್ದುಬಿಟ್ಟನು. ನಂತರ ನಾವುಗಳು ಮನಸಾ ಇಚ್ಛೆ ಮಚ್ಚು, ಲಾಂಗುಗಳಿಂದ ಹೊಡೆದು ಸಾಯಿಸಿ ಅಲ್ಲಿಂದ ಪರಾರಿಯಾಗಿ ದೇವನಹಳ್ಳಿ ಸೇರಿಕೊಂಡೆವು. ಮರುದಿನ ರಾತ್ರಿ ರೂಂನಲ್ಲಿ ಮಲಗಿದ್ದಾಗ ನಿಮ್ಮ ಕೈಗೆ ಸಿಕ್ಕಿಬಿದ್ದೆವು. ನಮಗೆ ಬುದ್ಧಿ ಹೇಳಿ ಅವಮಾನ ಮಾಡಿದನೆಂಬ ಕಾರಣಕ್ಕೆ ಕೋಪ ಬಂದು ವೆಂಕಟೇಶ್‌ರವರನ್ನು ಕೊಲೆ ಮಾಡಿದ್ದು ತಪ್ಪಾಗಿರುತ್ತದೆಂದು ಹೇಳಿದರು.



ನಂತರ ಆರೋಪಿ ಸತೀಶ್‌ನಿಂದ ಹೇಳಿಕೆ ಪಡೆದು ಇಬ್ಬರು ಆರೋಪಿಗಳನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋದ ಕ್ರೈಂ ತಂಡವು ಊರಿನ ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ನಂತರ ಕೃತ್ಯಕ್ಕೆ ಉಪಯೋಗಿಸಿದ್ದ ಕತ್ತಿ, ಲಾಂಗು, ಮಚ್ಚುಗ್ಗಳನ್ನು ಮತ್ತು ಎರಡು ದ್ವಿಚಕ್ರ ವಾಹನವನ್ನು ಆರೋಪಿಗಳಿಂದ ವಶಕ್ಕೆ ಪಡೆದ ಮೇಲೆ ಇಬ್ಬರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಜೆಡಿಎಸ್ ಮುಖಂಡ ವೆಂಕಟೇಶ್ ಕೊಲೆ ಪ್ರಕರಣವನ್ನು ಜೆಡಿಎಸ್ ಜಿಲ್ಲಾಧ್ಯಕ್ಷ ಮುಕ್ತ ಮುನಿಯಪ್ಪ ಹಾಗೂ ಕಾರ್ಯಾಧ್ಯಕ್ಷ ಕೆ.ಆರ್. ರೆಡ್ಡಿರವರು ತೀವ್ರವಾಗಿ ಖಂಡಿಸಿರುವುದಲ್ಲದೆ ಬಂಧಿಸಿರುವ ಇಉಬ್ಬರು ಆರೋಪಿಗಳಿಗೆ ಉಗ್ರ ಶಿಕ್ಷೆ ಆಗಬೇಕು, ತಲೆಮರೆಸಿ ಕೊಂಡಿರುವ ಉಳಿದ ಆರೋಪಿಗಳನ್ನು ಪತ್ತೆ ಮಾಡಿ



ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿ ದ್ದಾರೆ. ಜೆಡಿಎಸ್ ಮುಖಂಡ ಗೋಲ್ಡ್ ವೆಂಕಟೇಶ್‌ರವರ ಸಾವಿಗೆ ಕಾರಣನಾದ ತಮ್ಮ ನಾಯಕನಹಳ್ಳಿ ಗ್ರಾಮದ ಅರವಿಂದ ನಾಪತ್ತೆ ಯಾಗಿದ್ದು, ಕೃತ್ಯದಲ್ಲಿ ಭಾಗಿಯಾಗಿದ್ದ ಉಳಿದ ಆರೋಪಿಗಾಗಿ ತಲಾಶೆ ನಡೆಸುತ್ತಿದ್ದು, ಕೃತ್ಯ ನಡೆದ 48 ಗಂಟೆಗಳಲ್ಲಿ ಇಬ್ಬರು ಪ್ರಮುಖ ಆರೋಪಿಗಳನ್ನು ಬಂದಿಸಿ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ಎಸ್ಪಿ ಕುಶಾಲ್ ಚೌಕ್ಸೆರವರು ಶ್ಲಾಘಿಸಿ ಅಭಿನಂದಿಸಿದ್ದಾರೆ.

☯

# ಭೀಕರವಾಗಿ ಚುಚ್ಚಿ ಚುಚ್ಚಿ ಕೊಂದ ಅಣ್ಣ!


ಆರೋಪಿಯನ್ನು ವಿಚಾರಿಸುತ್ತಿರುವ ಪೊಲೀಸ್ ಅಧಿಕಾರಿಗಳು

7 ☜

ವಿಭಾಗ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿ ಗಾಯಗೊಂಡಿದ್ದ ತಸ್ಲಿಮ್ ತಾಜ್, ಸೈಯದ್ ಪಾಷಾ ಅವರಿಗೆ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಹಾಗೂ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ರವಾನಿಸಿದ್ದು ಈ ಇಬ್ಬರು ಅಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.


ಘಟನೆ ಬಗ್ಗೆ ವಿಚಾರಿಸುತ್ತಿರುವ ಎಸ್ಪಿಯವರು

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆಯ ಪಿಎಸ್‌ಐ ಬಿ.ವಿ. ವರ್ಷ ಹಾಗೂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಹಿರಿಯ ಅಧಿಕಾರಿಗಳಿಗೆ ಘಟನೆಯ ಕುರಿತು ಮಾಹಿತಿ ನೀಡಿದ್ದಾರೆ. ಮಾಹಿತಿ ಅರಿತು ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಡಿವೈಎಸ್ಪಿ ಧರ್ಮೇಂದ್ರ, ಸಿಪಿಐ ಶಿವಮಾದಯ್ಯ, ಪಟ್ಟಣ ಠಾಣೆ ಪಿಎಸ್‌ಐ ಬಿ.ವಿ. ವರ್ಷ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಪೊಲಿಸರು ಮೃತದೇಹವನ್ನು ಚಾಮರಾಜನಗರ ಸಿಮ್ಸ್ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿ ವೈದ್ಯರಿಂದ ಪಂಚನಾಮೆ ನಡೆಸಿ ವಾರಸುದಾರರಿಗೆ ನೀಡಿ ದ್ದಾರೆ.

ಈ ಸಂಬಂಧ ಮೃತಳ ಹಿರಿಯ ಸಹೋದರ ಸೈಯದ್ ರೋಷನ್ ನೀಡಿರುವ ದೂರಿನ ಮೇರೆಗೆ ಠಾಣಾ ಮೊಕದ್ದಮೆ ಸಂಖ್ಯೆ 01/ 2025 115 (2), 118 (1), 103, 352, ಬಿಎನ್‌ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕೊಂಡಿರುವ ಕೊಳ್ಳೇಗಾಲ ಪಟ್ಟಣ ಪಿಎಸ್‌ಐ ಬಿ.ವಿ. ವರ್ಷರವರು ಘಟನೆಯ ನಂತರ ಆರೋಪಿಯನ್ನು ಬಂಧಿಸಿ ಕೊಳ್ಳೇಗಾಲ ವೃತ ನಿರೀಕ್ಷಕ ಶಿವಮಾದಯ್ಯರವರ ಮುಂದೆ ತಂದು ನಿಲ್ಲಿಸಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆದ ಶಿವಮಾದಯ್ಯರವರು ವಿಚಾರಣೆ ನಡೆಸಿ ಷರಾ ಬರೆದುಕೊಂಡ ಬಳಿಕ ಜೈಲಿಗೆ ಬಿಟ್ಟು ಬಂದಿದ್ದು ಪ್ರಕರಣದ ಸತ್ಯಾ ಸತ್ಯತೆ ಕುರಿತು ತನಿಖೆ ಕೈಗೊಂಡಿದ್ದಾರೆ.

ಆದರೆ ಮನುಷ್ಯನಿಗೆ ಕೋಪ ಎಂಬುದು ತಲೆಗೆ ಏರಿದರೆ ಏನೆಲ್ಲಾ ಅನಾಹುತ, ಅವಾಂತರಗಳು ನಡೆದು ಹೋಗುತ್ತವೆ ಎಂಬುದಕ್ಕೆ ಕ್ಷುಲ್ಲಕ ವಿಚಾರಕ್ಕೆ ಅಣ್ಣನೆ ತಂಗಿಯನ್ನು ಅಮಾನುಷವಾಗಿ ಕೊಲೆ ಮಾಡಿರುವ ಘಟನೆಯೇ ಸಾಕ್ಷಿ. ಕೊಲೆಯಾದಕೆ ಶಾಶ್ವತವಾಗಿ ಮಣ್ಣು ಸೇರಿದರೆ, ಕೊಲೆ ಮಾಡಿದ ಹಂತಕ ಮಾಡಿದ ಘನ ಘೋರ ತಪ್ಪಿಗೆ ಜೈಲು ಸೇರಿಸಿದ್ದಾನೆ.

☯

5 ☜

ಮಾಡೋಕೆ ಖರ್ಚು ಮಾಡಿದ್ದನಂತೆ. ಸದ್ಯ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ಸಿದ್ದಾಪುರ ಪೊಲೀಸರು ಮುಂದಿನ ತನಿಖೆ ನಡೆಸಿದ್ದಾರೆ.

ಈ ಪ್ರಕರಣ ಭೇದಿಸಲು ಶ್ರಮಿಸಿದ ಡಿವೈಎಸ್ಪಿ ಗಣೇಶ, ಸಿಪಿಐ ಸೀತಾರಾಮ, ಪಿಎಸ್‌ಐ ಅನಿಲ್, ಸಿಬ್ಬಂದಿ ಗಳಾದ ಸುಭಾಸ ನಾಯ್ಕ, ರಮೇಶ ಕೂಡಲ್, ರಾಜು ಎಂ., ರಾಘವೇಂದ್ರ ನಾಯ್ಕ, ದೇವರಾಜ ನಾಯ್ಕ, ಮೋಹನ ಗಾವಡಿ, ಸಂತೋಷ ಮಲ್ಲೂರು, ಪ್ರಶಾಂತ ಹಾಗೂ ಎರಡನೇ ತಂಡದ ಪಿಎಸ್‌ಐ ಗೀತಾ ಸಿರ್ಸಿಕರ, ರಮೇಶ ಗೌಡ, ಎಎಸ್‌ಐ ಸಂಗೀತಾ ಕಾನಡೆ, ಸಂತೋಷ ತಳವಾರ, ರಾಮ ಎಂ. ಕುದ್ರಗಿ, ರೋಹಿತ್, ಲಲಿತಾ


ಬಂಧಿತ ಆರೋಪಿಯೊಂದಿಗೆ ಸಿದ್ದಾಪುರ ಪೊಲೀಸರು

ನಾಯ್ಕ, ಕುಮಾರ ವಿಜಯ, ಜೀಪ್ ಚಾಲಕ ಉದಯ ಗುನಗಾ ಹಾಗೂ ಇನ್ನಿತರ ಸಿಬ್ಬಂದಿಗಳನ್ನು ಕಾರವಾರ ಎಸ್ಪಿ ಎಂ. ನಾರಾಯಣ, ಹೆಚ್ಚುವರಿ ಎಸ್ಪಿ ಜಗದೀಶ ನಾಯ್ಕ 'ಪೊಲೀಸ್ ನ್ಯೂಸ್' ಮುಖಾಂತರ ಶುಭ ಹಾರೈಸಿದ್ದಾರೆ.

ಈ ಪ್ರಕರಣದ ಆರೋಪಿ ಈ ಹಿಂದೆ ಕೂಡಾ ಹಲವಾರು ಪ್ರಕರಣಗಳಲ್ಲಿ ಭಾಗಿಯಾಗಿ ಸೆರೆಮನೆ ವಾಸವನ್ನೂ ಅನುಭವಿಸಿ ಬಂದಿದ್ದಾನೆ. ಈತ ತನ್ನ ಲಾಭಕ್ಕಾಗಿ ತನ್ನ ಸಹಚರರೊಂದಿಗೆ ಕಳ್ಳತನ ಮಾಡುತ್ತಿದ್ದು 11/05/2016ರಲ್ಲಿ ಎಂ.ಓ.ಬಿ. ಹಾಳೆ ಕೂಡಾ ತೆರೆದಾಗಿದೆ. ಅಭಿಜಿತ (27) ಗಣಪತಿ ಮಡಿವಾಳ , ಆಟೋ ಚಾಲಕ, ಸಾ|| ಕೆಳಗಿನ ಕೇರಿ ,ಕೋಡ್ಲಿ, ಸಿದ್ದಾಪುರ, ಏತನನ್ನು ಪೊಲೀಸ್ ಕಾಯ್ದೆ 1963 ಕಲಂ 55 ನೇದರ ಅಡಿಯಲ್ಲಿ ಗಡಿಪಾರು ಮಾಡುವ ಕುರಿತು ಪ್ರಸ್ತಾವನೆ ಶಿರಸಿ ಉಪವಿಭಾಗೀಯ ದಂಡಾಧಿಕಾರಿಗಳಲ್ಲಿ ವಿಚಾರಣೆ ಯಲ್ಲಿದೆ ಎಂದು ತಿಳಿದು ಬಂದಿದೆ. (ನಂ;ಎಂಎಜಿ/ ಗಡಿಪಾರು/ವಿವ/12/23/24).


☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 12.1.2025

# ರಾಕ್ಷಸ ಅತಿ ಹೆಚ್ಚು ಬೆಲೆಗೆ ತೆಲುಗು ರೈಟ್ಸ್!

ಇತ್ತೀಚಿನ ದಿನಗಳಲ್ಲಿ ಕನ್ನಡ ಚಿತ್ರಗಳಿಗೆ ಮಾರ್ಕೆಟ್ ಇಲ್ಲ ಎನ್ನುವ ಮಾತು ಕೇಳಿಬರುತ್ತಿದೆ, ಆದರೆ ಉತ್ತಮ ಚಿತ್ರಗಳಿಗೆ ಯಾವತ್ತೂ ಬೆಲೆ ಇದ್ದೇ ಇರುತ್ತೆ ಅನ್ನೋದನ್ನು ರಾಕ್ಷಸ ಚಿತ್ರವು ಸಾಬೀತುಪಡಿಸಿದೆ, ಹೌದು, ಈ ಚಿತ್ರದ ಮೇಕಿಂಗ್, ಟ್ರೈಲರ್ ನೋಡಿದ ತೆಲುಗು ವಿತರಕರೊಬ್ಬರು ರಾಕ್ಷಸ ಚಿತ್ರದ ತೆಲುಗು ವರ್ಷನ್ ವಿತರಣೆಯ ಸಂಪೂರ್ಣ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡಿದ್ದಾರೆ. ತೆಲುಗು ವರ್ಷನ್ನು ಅತ್ಯುತ್ತಮ ಬೆಲೆಕೊಟ್ಟು ಖರೀದಿಸಿದ್ದಾರೆ. ಇದರ ಜತೆಗೆ ಈಗಾಗಲೇ ಮಲಯಾಳಂ ವಿತರಕರೂ ಸಹ ಖರೀದಿಸಲು ಮುಂದೆ ಬಂದಿದ್ದಾರೆ. ಹೀಗೆ ಹೊಸ ವರ್ಷದ ಆರಂಭದಲ್ಲೇ ರಾಕ್ಷಸ ತಂಡಕ್ಕೆ ಒಂದರ ಮೇಲೊಂದರಂತೆ ಗುಡ್‌ನ್ಯೂಸ್ ಕೇಳಿಬರುತ್ತಿದ್ದು ಚಿತ್ರದ ಬಗ್ಗೆ ನಿರ್ಮಾಪಕರಲ್ಲಿದ್ದ ಭರವಸೆ ಇಮ್ಮಡಿಯಾಗಿದೆ, ಅವರ ಮುಖದಲ್ಲಿ ಮಂದಹಾಸ ಮೂಡಿಸಿದೆ, ಇದೇ ಖುಷಿಯಲ್ಲಿ ಚಿತ್ರದ ಭರ್ಜರಿ ಪ್ರಚಾರಕ್ಕೆ ನಿರ್ಮಾಪಕರು ಮುಂದಾಗಿದ್ದು ಅದರಂಗವಾಗಿ ಬರುವ ಸಂಕ್ರಾಂತಿ ಹಬ್ಬದ ವೇಳೆಗೆ ರಾಕ್ಷಸ ಚಿತ್ರದ ಹೊಸ ಲುಕ್‌ವೊಂದನ್ನು ಬಿಡುಗಡೆ ಮಾಡುತ್ತಿದ್ದಾರೆ. ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ವಿಭಿನ್ನ ಅವತಾರದಲ್ಲಿ ಕಾಣಿಸಿಕೊಂಡಿರುವ ಬಹುನಿರೀಕ್ಷಿತ ಸಿನಿಮಾ ರಾಕ್ಷಸ ಶಿವರಾತ್ರಿ ಹಬ್ಬದ ಕೊಡುಗೆಯಾಗಿ ಬಿಡುಗಡೆಯಾಗಲಿದೆ, ಈ ಚಿತ್ರದ ಮೂಲಕ ಮೊದಲ ಬಾರಿಗೆ ನಟ ಪ್ರಜ್ವಲ್ ದೇವರಾಜ್ ಅವರು ಮಾಸ್ ಅಂಡ್ ಹಾರರ್ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಕಥೆ ನಡೆಯುವುದು ಒಂದೇ ರಾತ್ರಿಯಲ್ಲಿ, ಟೈಟಲ್ ಕೇಳಿದ್ ತಕ್ಷಣ ಇದು ಬರೀ ಹಾರರ್ ಸಿನಿಮಾ ಅಂದುಕೊಳ್ಳುವುದು ಸಹಜ. ಆದರೆ ರಾಕ್ಷಸ ಚಿತ್ರದಲ್ಲಿ ಭಾವನಾತ್ಮಕ ಕಥೆಯ ಜೊತೆಗೆ ಟೈಮ್‌ಲೂಪ್ ಕಾನ್ಸೆಪ್ಟ್‌ನ್ನು ನಿರ್ದೇಶಕ ಲೋಹಿತ್ ಅವರು ಬ್ಲೆಂಡ್ ಮಾಡಿ ಕಥೆ ಹೆಣೆದಿದ್ದಾರೆ. ಮಮ್ಮಿ, ದೇವಕಿಯಂಥ ಥ್ರಿಲ್ಲರ್ ಚಿತ್ರಗಳನ್ನು ನಿರ್ದೇಶಿಸಿ ಗುರುತಿಸಿಕೊಂಡಿರುವ ಎಚ್. ಲೋಹಿತ್ ಅವರ ನಿರ್ದೇಶನ ಸಾರಥ್ಯದ ರಾಕ್ಷಸ ಸಿನಿಮಾವೀಗ ತೆರೆಗೆ ಬರಲು ರೆಡಿಯಾಗಿದೆ. ಲೋಹಿತ್ ಅವರೇ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಕೂಡ ಬರೆದಿದ್ದಾರೆ.





ರಾಕ್ಷಸ ಕನ್ನಡ ಚಿತ್ರರಂಗದಲ್ಲಿ ದೊಡ್ಡ ಮಟ್ಟದ ನಿರೀಕ್ಷೆಯನ್ನು ಹುಟ್ಟು ಹಾಕಿರುವ ಚಿತ್ರವಾಗಿದ್ದು, ಶಿವರಾತ್ರಿಯಂದು ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಅದಕ್ಕೂ ಮುನ್ನ ಚಿತ್ರದ ಹೊಸ ಪೋಸ್ಟರ್‌ನ್ನು ಸಂಕ್ರಾಂತಿ ಹಬ್ಬದಂದು ರಿಲೀಸ್ ಮಾಡಲು ಸಿದ್ದತೆ ನಡೆದಿದೆ. ಪ್ರಜ್ವಲ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಶೋಭಾರಾಜ್, ವತ್ಸಲಾ ಮೋಹನ್, ಸಿದ್ಲಿಂಗು ಶ್ರೀಧರ್, ಆರ್ನ ರಾಥೋಡ್ ಸೇರಿದಂತೆ ಅನೇಕ ಕಲಾವಿದರು ಅಭಿನಯಿಸಿದ್ದಾರೆ. ರಾಕ್ಷಸ ಸಿನಿಮಾದ ಶೇ.80ರಷ್ಟು ಭಾಗದ ಚಿತ್ರೀಕರಣ ರಾಮೋಜಿ ಫಿಲಂ ಸಿಟಿಯಲ್ಲಿ ನಡೆದಿರುವುದು ವಿಶೇಷ. ರಾಮೇಶ್ವರಂ, ಗೋವಾ, ಬೆಂಗಳೂರಿನಲ್ಲಿ ಉಳಿದ ಭಾಗದ ಚಿತ್ರೀಕರಣ ನಡೆಸಲಾಗಿದೆ. ಶಾನ್ವಿ ಎಂಟರ್‌ಟೈನ್ ಮೆಂಟ್ ಅಡಿ ದೀಪು ಬಿ.ಎಸ್. ಅವರು ನಿರ್ಮಾಣ ಮಾಡುತ್ತಿದ್ದು, ನವೀನ್ ಹಾಗೂ ಮಾನಸ ಕೆ, ಅವರ ಸಹ ನಿರ್ಮಾಣವಿದೆ. ಜೇಬಿನ್ ಪಿ ಜೇಕಬ್ ಅವರ ಛಾಯಾಗ್ರಹಣ, ವಿನೋದ್ ಅವರ ಸಾಹಸ ನಿರ್ದೇಶನ, ವರುಣ್ ಉನ್ನಿ ಅವರ ಸಂಗೀತ ಸಂಯೋಜನೆ, ಅವಿನಾಶ್ ಬಸುತ್ಕರ್ ಅವರ ಹಿನ್ನೆಲೆ ಸಂಗೀತ, ರವಿಚಂದ್ರನ್ ಸಿ. ಅವರ ಸಂಕಲನ ರಾಕ್ಷಸ ಚಿತ್ರಕ್ಕಿದೆ. ಈವರೆಗೆ 36ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಪ್ರಜ್ವಲ್ ದೇವರಾಜ್, ಇವೆಲ್ಲಕ್ಕಿಂತಲೂ ವಿಭಿನ್ನವಾಗಿ ರಾಕ್ಷಸ ಚಿತ್ರದಲ್ಲಿ ಕಾಣಿಸಿಕೊಂಡಿರುವುದು ಸಿನಿರಸಿಕರಲ್ಲಿ ಕುತೂಹಲ ಹೆಚ್ಚಿಸಿದೆ. ☯

# ರಿಷಭ್ ಶೆಟ್ಟಿ ವಿರುದ್ಧ ದೂರು ದಾಖಲು

ಕಾಂತಾರ ಚಿತ್ರದಲ್ಲಿ ಶಿವನಾಗಿ ರಂಜಿಸಿದ್ದ ರಿಷಬ್ ಶೆಟ್ಟಿ ಅವರಿಗೆ ಪರಭಾಷಾ ನಿರ್ಮಾಪಕರಿಂದ ಸಾಕಷ್ಟು ಅವಕಾಶಗಳು ಬಂದಿವೆ, ಅವರ ಭಾಗವಾಗಿ ರಿಶಭ್ ಛತ್ರಪತಿ ಶಿವಾಜಿ ಮಹಾರಾಜ್ ಅವತಾರವೆತ್ತಲು ಸಿದ್ಧರಾಗಿದ್ದಾರೆ. ಮತ್ತೊಂದು ಕಡೆ ಹನುಮಂತನ ಪಾತ್ರಕ್ಕೂ ಸಹ ಜೀವ ತುಂಬುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದರ ನಡುವೆ ಈಗ ರಿಷಬ್ ಶೆಟ್ಟಿ ಅವರ ವಿರುದ್ಧ ಕೇಸ್ ದಾಖಲಾಗಿದೆ. ಹೌದು, ರಿಷಬ್ ಶೆಟ್ಟಿ ಅಭಿನಯದ ಜೈ ಹನುಮಾನ್ ಚಿತ್ರತಂಡದ ವಿರುದ್ಧ ವಕೀಲ ಮಾಮಿದಾಳ್ ತಿರುಮಲ್ ರಾವ್ ಎಂಬುವವರು ಪ್ರಕರಣ ದಾಖಲಿಸಿದ್ದಾರೆ. ಜೈ ಹನುಮಾನ್ ಚಿತ್ರದಲ್ಲಿ ಆಂಜನೇಯನ ಪಾತ್ರಪೋಷಣೆ ಆಕ್ಷೇಪಾರ್ಹವಾಗಿದೆ ಎಂದು ವಾದ ಮಾಡಿರುವ ವಕೀಲ್ ಮಾಮಿದಾಳ್ ತಿರುಮಲ್‌ರಾವ್, ರಿಶಬ್ ಶೆಟ್ಟಿ ಅವರ ಮುಖವನ್ನೇ ಹನುಮಂತನ ಮುಖವೆನ್ನುವಂತೆ ಆ ಚಿತ್ರದಲ್ಲಿ ಬಿಂಬಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಎಲ್ಲರಿಗೆ ತಿಳಿದಿರುವಂತೆ ಹನುಮಂತನ ಮುಖ ವಾನರ ಮುಖವನ್ನು ಹೋಲುತ್ತದೆ, ಆದರೆ ಜೈ ಹನುಮಾನ್ ಚಿತ್ರದಲ್ಲಿ ರಿಷಬ್ ಶೆಟ್ಟಿ ಅವರು ನಿರ್ವಹಿಸುತ್ತಿರುವ ಹನುಮಂತನ ಮುಖವನ್ನು ಸಾಮಾನ್ಯ ಮನುಷ್ಯನ ಮುಖದಂತೆ ತೋರಿಸಲಾಗಿದೆ ಎಂದಿರುವ ತಿರುಮಲ್‌ರಾವ್ ಈ ಮೂಲಕ ಮುಂಬರುವ ಪೀಳಿಗೆಯ ದಾರಿ ತಪ್ಪಿಸುವ ಕೆಲಸವನ್ನು ರಿಷಬ್ ಶೆಟ್ಟಿ ಮತ್ತು ತಂಡದವರು ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಇನ್ನು ಸೃಜನಾತ್ಮಕ ಸ್ವಾತಂತ್ರ್ಯದ ಹೆಸರಿನಲ್ಲಿ ಇದೆಲ್ಲದಕ್ಕೆ ಅನುಮತಿಯನ್ನು ನೀಡಿದರೆ ಮುಂಬರುವ ದಿನಗಳಲ್ಲಿ ಗಣೇಶ ಅಥವಾ ವರಾಹ ಸ್ವಾಮಿಯಂತಹ ಪೂಜ್ಯ ದೇವಾನುದೇವತೆಗಳನ್ನು ಕೂಡ ಇವರು ತಮಗೆ ಬೇಕಾದಂತೆ ಬಳಸಿಕೊಳ್ಳುತ್ತಾರೆ, ಚಿತ್ರೀಕರಿಸುತ್ತಾರೆ ಎಂದಿರುವ ಮಾಮಿದಾಳ್ ತಿರುಮಲ್‌ರಾವ್ ಇದೆಲ್ಲದರಿಂದ ಭವಿಷ್ಯದ ಪೀಳಿಗೆ ನಮ್ಮ ಸಂಸ್ಕೃತಿ ಮತ್ತು ನಾವೆಲ್ಲ ಪೂಜಿಸಿಕೊಂಡು ಬಂದ ದೇವಾನುದೇವತೆಗಳ ಜೊತೆ ಸಂಪರ್ಕವನ್ನು ಕಳೆದುಕೊಳ್ಳಬಹುದು ಎಂದು ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಎಲ್ಲ ಪೌರಾಣಿಕ ಚಿತ್ರಗಳಲ್ಲಿ ಈ ಹಿಂದೆ ಭಜರಂಗಿಯ ಪಾತ್ರವನ್ನು ತೋರಿಸಿದ್ದಕ್ಕಿಂತಲೂ ಭಿನ್ನವಾಗಿ ಜೈ ಹನುಮಾನ್ ಚಿತ್ರದಲ್ಲಿ ತೋರಿಸಲಾಗುತ್ತಿದೆ ಎಂದು ಹೇಳಿರುವ ಮಾಮಿದಾಳ್ ತಿರುಮಲ್ ರಾವ್, ಹನುಮಂತನ ಪಾತ್ರವನ್ನು ತಿದ್ದುವ ಕೆಲಸ ಮಾಡುವ ಮೂಲಕ ಹಿಂದೂಗಳ ಭಾವನೆಗೆ ಚಿತ್ರತಂಡ ಧಕ್ಕೆಯುಂಟು ಮಾಡಿದೆ ಎಂದು ಹೇಳಿದ್ದಾರೆ. ಬಿಡುಗಡೆ ಮಾಡಲಾದ ಟೀಸರ್ ಮತ್ತು ಪೋಸ್ಟರ್‌ಗಳನ್ನು ಚಿತ್ರತಂಡ ಕೂಡಲೇ ಹಿಂಪಡೆಯಬೇಕು, ಡಿಲೀಟ್ ಮಾಡಬೇಕೆಂದು ಆಗ್ರಹಿಸಿ ಅರ್ಜಿಯನ್ನು ಸಲ್ಲಿಸಿದ್ದಾರೆ.



ಕೇವಲ ರಿಷಬ್ ಶೆಟ್ಟಿ ಮಾತ್ರವಲ್ಲದೇ ಚಿತ್ರದ ನಿರ್ದೇಶಕ ಪ್ರಶಾಂತ್ ವರ್ಮಾ ಮತ್ತು ನಿರ್ಮಾಣ ಸಂಸ್ಥೆಯಾದ ಮೈತ್ರಿ ಮೂವಿ ಮೇಕರ್ಸ್ ವಿರುದ್ದವೂ ತಿರುಮಲ್‌ರಾವ್ ದೂರನ್ನು ದಾಖಲಿಸಿದ್ದಾರೆ. ಇನ್ನು ಈ ಪ್ರಕರಣವನ್ನು ನಾಂಪಲ್ಲಿ ನ್ಯಾಯಾಲಯ ಅಂಗೀಕರಿಸಿದ್ದು ಶೀಘ್ರದಲ್ಲಿಯೇ ವಾದ-ಪ್ರತಿವಾದ ನಡೆಯುವ ಸಾಧ್ಯತೆಯಿದೆ. ☯

# ಸಂಜು ವೆಡ್ ಗೀತಾ-2 ಶೀಘ್ರ ಚಿತ್ರಮಂದಿರದಲ್ಲಿ

ಕನ್ನಡದ ಬಿಗ ಬಡ್ಜೆಟ್ ಚಿತ್ರ ಸಂಜು ವೆಡ್ಸ್ ಗೀತಾ-2, ಶ್ರೀನಗರ ಕಿಟ್ಟಿ ಹಾಗೂ ರಚಿತಾ ರಾಂ ಅಭಿನಯದ ಸಂಜು ವೆಡ್ಸ್ ಗೀತಾ-2 ಭಾರೀ ನಿರೀಕ್ಷೆಯ ಚಿತ್ರವಾಗಿದೆ. ವಿದೇಶದಲ್ಲಿ ನಡೆದ ಹಾಡಿನ ಚಿತ್ರೀಕರಣ, ಅದಕ್ಕೆ ಆಯ್ಕೆ ಮಾಡಿಕೊಂಡಿದ್ದ ಲೊಕೇಶನ್, ನೆನಪಾಗಿ ಉಳಿಸುವ ಹಾಡುಗಳ ಆಕರ್ಷಣೆಯಿಂದ ಚಿತ್ರದ ಮೇಲೆ ತುಂಬಾನೇ ದೊಡ್ಡ ಮಟ್ಟದ ನಿರೀಕ್ಷೆಯನ್ನೂ ಇಟ್ಟುಕೊಳ್ಳಲಾಗಿದೆ. ಅದರಂತೆ ಚಿತ್ರ ಶುಕ್ರವಾರ ಬಿಡುಗಡೆಯೂ ಆಗಬೇಕಿತ್ತು. ಪ್ರದರ್ಶನಕ್ಕೆ ಚಿತ್ರಮಂದಿರಗಳ ಆಯ್ಕೆ, ಪ್ರಚಾರವೂ ದೊಡ್ಡ ಮಟ್ಟದಲ್ಲಿ ನಡೆದುಹೋಗಿತ್ತು. ಚಿತ್ರದ ಮೊದಲ ಭಾಗವೂ ಭರ್ಜರಿ ಹಿಟ್ ಆಗಿದ್ದು, ಇದರ ಆಕರ್ಷಣೆಯೂ ಚಿತ್ರದ ಮೇಲಿತ್ತು. ಆದರೆ, ಚಿತ್ರ ಚಿತ್ರಮಂದಿರಕ್ಕೆ ಬರಬೇಕು ಎನ್ನುವಾಗ ಚಿತ್ರದ ಪ್ರದರ್ಶನ ರದ್ದಾಗಿ ಹೋಯಿತು. ಇದಕ್ಕೆ ಕಾರಣ ನ್ಯಾಯಾಲಯದಿಂದ ಬಂದ ತಡೆಯಾಜ್ಞೆ.

ಈಗ ನ್ಯಾಯಾಲಯದಿಂದ ಇದ್ದ ತಡೆಯಾಜ್ಞೆ ತೆರವಾಗಿದೆ; ಇದರಿಂದ ಸಂಜು ವೆಡ್ಸ್ ಗೀತಾ -2 ಚಿತ್ರದ ಬಿಡುಗಡೆಗೆ ಮುಂದೆ ಯಾವುದೇ ತಕರಾರಿಲ್ಲ, ಚಿತ್ರದ ಬಿಡುಗಡೆ ಅತಿಶೀಘ್ರ ಆಗಲಿದೆ ಎಂದು ನಿರ್ದೇಶಕ ನಾಗಶೇಖರ್ ಹೊಸ ದಿಗಂತಕ್ಕೆ ತಿಳಿಸಿದರು. ಯಾವಾಗ ? ಎಂಬ ಪ್ರಶ್ನೆಗೆ ಚಿತ್ರದ ನಿರ್ಮಾಪಕರು ಶನಿವಾರ ಹೈದರಾಬಾದಿನಿಂದ ಬೆಂಗಳೂರಿಗೆ ಬರುತ್ತಾರೆ. ಅವರ ಜತೆ ನಡೆಯುವ ಮಾತುಕತೆಯ ನಂತರ ಚಿತ್ರದ ಬಿಡುಗಡೆ ದಿನಾಂಕ ಪ್ರಕಟಿಸುತ್ತೇವೆ. ಒಟ್ಟಿನಲ್ಲಿ ಎಲ್ಲವೂ ಸುಸೂತ್ರವಾಗಿ ನಡೆದಿದೆ ಎಂದು ನಾಗಶೇಖರ್ ಹೇಳಿದರು. ಚಿತ್ರದ ಬಿಡುಗಡೆ ದಿನಾಂಕ ಹಾಗೂ ಎಷ್ಟು ಚಿತ್ರಮಂದಿರಗಳಲ್ಲಿ ತೆರೆ ಕಾಣುತ್ತದೆ ಎಂಬುದು ನಿರ್ಮಾಪಕರು ಬೆಂಗಳೂರಿಗೆ ಬಂದ ನಂತರ ತಿಳಿಯುವುದು ಎಂದು ನಾಗಶೇಖರ್ ಸ್ಪಷ್ಟಪಡಿಸಿದರು. ನಿರ್ದೇಶಕನಾಗಿ ನಾಗಶೇಖರ್‌ಗೆ ಕನ್ನಡದಲ್ಲಿ ದೊಡ್ಡ ಮಟ್ಟದ ಹವಾ ಇದೆ, ಲವ್ ಸ್ಟೋರಿಯಲ್ಲಿ ಇವರು ಪರಿಣಿತ. ☯

Vol. 40 No. 32 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 📱 9513892666
Email: policenewsreporter@gmail.com